
# ಹಿಂದು ವಾಣಿ


ಸಂಪುಟ-23
ಸಂಚಿಕೆ-2
ಆಷಾಢ- ಶ್ರಾವಣ
ಆಗಸ್ಟ್ 2024
ಬೆಲೆ ರೂ. 15.00

HINDU VANI
KANNADA MONTHLY

VOL - 23 | ISSUE-2 | AUG 2024 | BENGALURU | PAGES-52 | Rs:30/-


# ಸಾರ್ಥಕ



## ಪ್ರಾಂತ ಕಾರ್ಯಾಲಯ ನೂತನ ಧರ್ಮಶ್ರೀ ಭವನ

### ಉದ್ಘಾಟನಾ ಸಮಾರಂಭ

ಯುಗಾಬ್ಧ 5126, ಶ್ರೀ ಕ್ರೋಧಿನಾಮ ಸಂವತ್ಸರ, ಶ್ರಾವಣ ಶುದ್ಧ ಸಪ್ತಮಿ,

**ದಿನಾಂಕ : 11-08-2024 ಭಾನುವಾರ ಬೆಳಿಗ್ಗೆ 11.00 ಘಂಟೆಗೆ**

ಸ್ಥಳ: # 91, ಶಂಕರಮಠದ ಸಮಾನಾಂತರ ರಸ್ತೆ, ಶಂಕರಪುರಂ, ಬೆಂಗಳೂರು

**ದಿವ್ಯ ಸಾನ್ನಿಧ್ಯ**

**ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ**

ಮಠಾಧಿಪತಿಗಳು, ಆದಿಚುಂಚನಗಿರಿ ಕ್ಷೇತ್ರ, ಆದಿಚುಂಚನಗಿರಿ, ಮಂಡ್ಯ ಜಿಲ್ಲೆ

**ಗುರುದೇವ ಶ್ರೀ ಶ್ರೀ ರವಿಶಂಕರ ಗುರೂಜಿ**

ಸಂಸ್ಥಾಪಕರು, ಆರ್ಟ್ ಆಫ್ ಲಿವಿಂಗ್ ಫೌಂಡೇಶನ್, ಬೆಂಗಳೂರು

**ಮುಖ್ಯ ಅತಿಥಿಗಳು**

**ಮಾನನೀಯ ಶ್ರೀ ದತ್ತಾತ್ರೇಯ ಹೊಸಬಾಳೆ**

ಸರಕಾರ್ಯವಾಹರು, ರಾಷ್ಟ್ರೀಯ ಸ್ವಯಂಸೇವಕ ಸಂಘ

**ಮಾನನೀಯ ಶ್ರೀ ಅಲೋಕ್ ಕುಮಾರ್**

ಅಂತಾರಾಷ್ಟ್ರೀಯ ಅಧ್ಯಕ್ಷರು, ವಿಶ್ವ ಹಿಂದೂ ಪರಿಷದ್

**ಗೃಹಪ್ರವೇಶ ಮುಹೂರ್ತ :**

**ಬೆಳಿಗ್ಗೆ 4.00 ರಿಂದ 4.20 ಬ್ರಾಹ್ಮೀ ಮುಹೂರ್ತ. ಲಗ್ನ : ಶುಭ ಮಿಥುನ ಲಗ್ನ**

**ತಮಗೆಲ್ಲರಿಗೂ ಆತ್ಮೀಯ ಸ್ವಾಗತ**

**ಡಾ. ವಿಜಯಲಕ್ಷ್ಮಿ ದೇಶಮಾನೆ**
ಕೇಂದ್ರೀಯ ಉಪಾಧ್ಯಕ್ಷೆ ಮತ್ತು ಪ್ರಾಂತ ಅಧ್ಯಕ್ಷೆ

**ಡಾ. ಎಂ. ಬಿ. ಪುರಾಣಿಕ್**
ಪ್ರಾಂತ ಕಾರ್ಯಾಧ್ಯಕ್ಷರು

**ಜಗನ್ನಾಥ ಶಾಸ್ತ್ರೀ**
ಪ್ರಾಂತ ಕಾರ್ಯದರ್ಶಿ

## Inauguration of Pranth Karyalay New Dharmashree Bhavan

*Yugabda 5126, Sri Krodhinaama Samvatsar, Shravana Shuddha Sapthami*

**Date : 11.08.2024 Sunday at 11.00 am.**

*Venue : # 91, Dharmashree, Shankar Mutt Parallel Road, Shankarapuram, Bengaluru -560 004*

**Divine Presence**

**Sri Sri Sri Nirmalanandanatha Swamiji**

Mathadhipathi, Adichunchanagiri Kshetra, Adichunchanagiri, Mandya District

**Gurudev Sri Sri Ravishankar Guruji**

Founder, Art of Living Foundation, Bengaluru

**Chief Guests**

**Sri Dattatreya Hosabale**

Sarakaryavah, Rashtreeya Swayamsevak Sangh

**Sri Alok Kumar**

International President,Vishva Hindu Parishad

**GRUHAPRAVESHA**

Muhurtham : 4.00 to 4.20 am. Lagna : Mithuna Lagna

**You are Invited**

**Dr. Vijayalakshmi Deshamane**
Central Vice President & Pranth President

**Dr. M B Puranik**
Pranth Working President

**Jagannatha Sastry**
Pranth Secretary



## ವಿಶ್ವ ಹಿಂದು ಪರಿಷದ್ ಗೀತೆ

ವಿಶ್ವಮಖಿಲಮುದ್ಧರ್ತುಮಮೀ ನಿರ್ಮಿತಾ ವಯಂ, ಪ್ರಭುಣಾ ಪ್ರೇಷಿತಾ ವಯಮ್
ಭಾರತಂ ಸಮುದ್ಧರ್ತುಮಮೀ ನಿರ್ಮಿತಾ ವಯಂ, ಪ್ರಭುಣಾ ಪ್ರೇಷಿತಾ ವಯಮ್
ಸಂಕಟಾದ್ರಿಭಿದುರಂಧೈರ್ಯಂ, ಧಾರ್ಯಮನಿಶಮಿದಮಿಹಕಾರ್ಯಮ್
ಮಾತರಂ ಪ್ರತಿಷ್ಠಾನ್ನೇತುಂ, ತನುಭೃತೋ ವಯಂ, ಪ್ರಭುಣಾ ಪ್ರೇಷಿತಾ ವಯಮ್
ರಾಷ್ಟ್ರಮುಕ್ತಿರೇಕಂಧ್ಯೇಯಂ, ತತ್ಕೃತೇ ಶರೀರಂಧೇಯಮ್
ಕ್ಷುದ್ರಲಾಲಸಾ ಪರಿಮುಕ್ತಾಃ, ಸೇವಕಾ ವಯಂ, ಪ್ರಭುಣಾ ಪ್ರೇಷಿತಾ ವಯಮ್
ಜಾನತೇ ಭರತಭುವಿ ಲೋಕಾಃ, ಆತ್ಮತತ್ವಮಿಹಗತಶೋಕಾಃ
ಇತ್ಯವೇತ್ಯಜಗದುದ್ಧರಣೇ, ಯೋಜಿತಾ ವಯಂ, ಪ್ರಭುಣಾ ಪ್ರೇಷಿತಾ ವಯಮ್
ಈಶ್ವರಃ ಸ್ಫುರತಿ ನಃ ಸ್ವಾಂತೇ, ಅಜ್ಞತಾಂಧತಮಸಸ್ಯಾಂತೇ ತಸ್ಯಕಾರ್ಯಮಧುನಾಕರ್ತುಂ,
ಸೋದ್ಯಮಾ ವಯಂ, ಪ್ರಭುಣಾ ಪ್ರೇಷಿತಾ ವಯಮ್
ನಿಶ್ಚಿತಂ ಯಶಃ ಪರಿಪೂರ್ಣಂ, ಲಪ್ಸ್ಯತೇತ್ರಜನ್ಮನಿತೂರ್ಣಮ್
ಈಶ ಕಾರ್ಯಕರಣೇನಿರತಾಃ, ಸಂತತಂ ವಯಂ, ಪ್ರಭುಣಾ ಪ್ರೇಷಿತಾ ವಯಮ್

ಹಿಂದುವಾಣಿ
hinduvani@yahoo.com

ಶ್ರೀ ಕ್ರೋಧಿ ನಾಮ ಸಂವತ್ಸರ
ಆಷಾಢ – ಶ್ರಾವಣ

ಆಗಸ್ಟ್ 2024

ಗೌರವ ಸಂಪಾದಕ
ಟಿ.ಎ.ಪಿ. ಶೆಣೈ

ಪ್ರಕಾಶಕರು
ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004.
ದೂ. 080–26604641

ಪ್ರಸಾರ ಸಲಹೆ
ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

ಚಂದಾವಿವರ

| | |
|---|---|
| ಬಿಡಿಪ್ರತಿ (ವಿಶೇಷ ಸಂಚಿಕೆ) | ರೂ. 30/– |
| ವಾರ್ಷಿಕ ಚಂದಾ | ರೂ. 130/– |
| ದ್ವೈವಾರ್ಷಿಕ ಚಂದಾ | ರೂ. 250/– |

ಮುದ್ರಕರು
ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018.
rmudrana@gmail.com

www.vhp.org

04 ಹಿಂದು ಎಂದಾಗ ಅಭಿನ್ನತೆಯು ಮೈದಾಳುತ್ತದೆ
–ಪೂಜ್ಯ ಶ್ರೀ ವಿಶ್ವ ಪ್ರಸನ್ನ ತೀರ್ಥರು

08 ಮತ್ತೆ ಮೊಳಗಲಿ ಪಾಂಚಜನ್ಯ
–ಎಮ್. ಗೋಪಾಲಕೃಷ್ಣ ಅಡಿಗ

11 ವಿಶ್ವ ಹಿಂದು ಪರಿಷತ್
(ಸ್ಥಾಪನೆ, ಹಿನ್ನೆಲೆ, ಧ್ಯೇಯೋದ್ದೇಶಗಳು)

16 ಮೊದಲ ಸಭೆ ಮೈಸೂರು

18 ಪ್ರಯಾಗ ಸಮ್ಮೇಳನ – 1966

19 ಪ್ರಯಾಗ ಪ್ರಥಮ ಸಮ್ಮೇಳನ
– ಶ್ರೀ ಗುರೂಜಿ ಉದ್ಬೋಧ

24 ಉಡುಪಿ ಸಮ್ಮೇಳನ –1969

27 ದಾರಿದೀಪ
– ಶ್ರೀ ಗುರೂಜಿ

29 ದ್ವಿತೀಯ ಪ್ರಯಾಗ ಸಮ್ಮೇಳನ–1979

30 ಉಜಿರೆ ಸಮ್ಮೇಳನ 1983

31 ಮಾರ್ಗದರ್ಶಕ ಮಂಡಲ

32 ಧರ್ಮಸಂಸತ್ 1985

33 "ಹಿಂದೂ ಸಮಾಜದ ಸಮಸ್ಯೆ ಎಂದರೆ ರಾಷ್ಟ್ರದ ಸಮಸ್ಯೆ"
–ಶ್ರೀ ಬಾಳಾಸಾಹೇಬ ದೇವರಸ್

38 ಇತರ ಸಮ್ಮೇಳನಗಳು

40 ವಿಶ್ವ ಹಿಂದು ಪರಿಷದ್ ಭೂಮಿಕೆ

43 ನಮ್ಮ ಬಾಬುರಾಯರು



ಸಂಪಾದಕೀಯ

# ಮುಂದೆ ಸಾಗಬೇಕು, ಗೆಲುವು ನಿಶ್ಚಿತ

ಸಂಘಟನೆಯ ಕಾಲಗತಿಯಲ್ಲಿ; ಒಂದು ಸಂವತ್ಸರ ಚಕ್ರವು ಉರುಳುವುದೆಂದರೆ ನಡುವೆ ಅನೇಕ ಸಂಘರ್ಷಗಳನ್ನು ಮತ್ತು ತುಮುಲಗಳನ್ನು ಅನುಭವಿಸುವುದು. ಹಲವು ಮುಜುಗರಗಳನ್ನು ತಲ್ಲಣಗಳನ್ನೂ ಅರಗಿಸಿಕೊಳ್ಳುವುದು. ಅವಕ್ಕಾಗಿಸುವ ಪವಾಡ ಸದೃಶ ಗೆಲುವುಗಳನ್ನು ಆನಂದಿಸುವುದು. ವಿಶ್ವ ಹಿಂದು ಪರಿಷದ್ ದಾಟಿ ಬಂದುದು ಈ ಅಗ್ನಿದಿವ್ಯವನ್ನು. ಇದು ಒಂದು ಸಾರ್ಥಕ ತಪಸ್ಸು. ವಿಶ್ವ ಹಿಂದು ಪರಿಷದ್ ಸ್ಥಾಪನೆಯಾದೊಡನೆ ಮೈಸೂರು ಅರಮನೆಯಲ್ಲಿ ಮೊದಲ ಸಭೆ ನಡೆಯಿತು. ಶ್ರೀ ಗುರೂಜಿಯವರೂ ಇದ್ದ ಆ ಗೋಷ್ಠಿಯಲ್ಲಿ ಅಧ್ಯಕ್ಷರಾಗಿದ್ದ ಮಹಾರಾಜ ಜಯಚಾಮರಾಜ ಒಡೆಯರ್ ಮಾತನಾಡುತ್ತ "ನಾವೀಗ ಅಪಾಯಕಾರಿ ಸನ್ನಿವೇಶವನ್ನು ಎದುರಿಸುತ್ತಿದ್ದೇವೆ. ಆದರೆ ನಾವೇನೂ ಒಂಟಿಯಾಗಿಲ್ಲ. ಬೃಹತ್ ಸಂಘಟಿತ ಸಮಾಜವೂ ನಮ್ಮೊಂದಿಗೆ ಇದೆ. ನಮ್ಮ ಶಕ್ತಿಯನ್ನೂ ದೋಷ ದೌರ್ಬಲ್ಯಗಳನ್ನೂ ತಿಳಿದು ನಾವು ಮುಂದೆ ಸಾಗಬೇಕು" ಎಂದು ಮಾರ್ಮಿಕವಾಗಿ ನುಡಿದಿದ್ದರು. ಈಗ ಈ ಮಾತು ಅರ್ಥವಾಗುತ್ತಿದೆ ಅರ್ಥವತ್ತಾಗುತ್ತಿದೆ.


ಈ ಸಾರ್ಥಕ 60 ವರ್ಷಗಳ ಸಾಧನೆಗೆ ಶ್ರೀಕಾರಗೈದ ಸಂತರು ಹಿಂದು ಸಮಾಜಕ್ಕೆ ನೀಡಿದ ಮೊದಲ ನಿರೂಪವನ್ನು ಅವರೆಲ್ಲರ ಆದೇಶದಂತೆ ಶ್ರೀ ಗುರೂಜಿಯವರೇ ರಚಿಸಿದ್ದರು. ಇದನ್ನು ವಿಶ್ವ ಹಿಂದು ಪರಿಷತ್ತಿನ ಮೊದಲ ಧರ್ಮಸಂಸದ್ ಅನುಮೋದಿಸಿತು. ಆದೇಶದ ಸಾರಾಂಶ ವಾಕ್ಯಗಳು ಹೀಗಿದ್ದವು. "ಹಿಂದೆ ಯಾವ ಸಂಹಿತೆಗಳು, ಮಾರ್ಗದರ್ಶನಗಳು ಅವಶ್ಯಕವಾಗಿದ್ದವೋ, ಆದರೆ ಇಂದು ಯಾವುವು ಸಮಾಜದ ಹಿತಕ್ಕೆ ಪೂರಕವಲ್ಲವೋ ಅವನ್ನು ಬದಲಾಯಿಸಬೇಕು. ಇವನ್ನು ಗಮನದಲ್ಲಿರಿಸಿಕೊಂಡು, ಈ ಸಮಾಜದ ಯಾವುದೇ ವರ್ಗವು ಅಸ್ಪೃಶ್ಯವಲ್ಲ. ಅವರೆಲ್ಲರಿಗೆ ಎಲ್ಲೆಡೆಯಲ್ಲೂ ಯಾವಾಗಲೂ ಯಾವುದೇ ಸಾಮಾಜಿಕ ಕಾರ್ಯದಲ್ಲೂ ಸಮ್ಮಿಲಿತರಾಗುವುದಕ್ಕೆ ಪೂರ್ಣ ಅಧಿಕಾರವಿದೆ ಎಂಬುದನ್ನು ನಾವು ಸಾರುತ್ತೇವೆ. ಭೂತಕಾಲದಲ್ಲಿ ಯಾವ ಸಾಮಾಜಿಕ ಅಸ್ಪೃಶ್ಯತೆಯು ಪ್ರಚಲಿತವಾಗಿದ್ದಿತೋ ಅದನ್ನು ಈಗ ಸಮೂಲವಾಗಿ ನಾಶಪಡಿಸಲಾಗುತ್ತದೆ. ಇದು ನಮ್ಮ ಸ್ಪಷ್ಟ ನಿಲುವು, ವ್ಯವಸ್ಥೆ ಮತ್ತು ಧರ್ಮಾದೇಶ. ನಮ್ಮ ಹಿಂದು ಬಾಂಧವರಿಗೆ ಈ ರೀತಿಯ ಆಚರಣೆಯ ಆದೇಶ ಕೊಡಲಾಗುತ್ತದೆ". ಇದನ್ನು ಒಪ್ಪಿ ನಮ್ಮ ಸಮಾಜದ ಎಲ್ಲಾ ಸ್ತರಗಳಲ್ಲೂ ಇದನ್ನು ಅಕ್ಷರಶಃ ಪಾಲಿಸುವ ನಿರ್ಧಾರವನ್ನು ಧರ್ಮಸಂಸದ್ ಕೈಗೊಂಡಿತು.

1966ರಲ್ಲಿ ಅಸ್ಸಾಮ್ ವಿಶ್ವ ಹಿಂದು ಪರಿಷದ್ ಸಮ್ಮೇಳನದಲ್ಲಿ ಶ್ರೀ ಗುರೂಜಿಯವರು' ಹಿಂದು ಪೀಠಾಧಿಪತಿಗಳೆಲ್ಲರೂ ತಮ್ಮ ಶಿಷ್ಯರು ಮತ್ತು ಭಕ್ತರೊಂದಿಗೆ ಸೇರಿ ಧರ್ಮಾಂತರ ಹೊಂದಿದವರನ್ನು ಪುನಃ ಸ್ವಧರ್ಮಕ್ಕೆ ಕರೆತರುವ ಘೋಷಣೆಯನ್ನು ಮಾಡುವಂತೆ ಪ್ರಾರ್ಥಿಸಿದ್ದರು. ಈಶಾನ್ಯ ಪ್ರದೇಶಗಳ ಜನರು ಹಾವು, ಮರ, ಕಲ್ಲು, ನದಿಗಳನ್ನು ಪೂಜಿಸುತ್ತಾರೆ. ಅವರು ಹಿಂದುಗಳಾಗಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದ ರಾಜಕೀಯ ನಾಯಕರಿಗೆ ಶ್ರೀಗುರೂಜಿ 'ನಾನೂ ಸಹ ವಟವೃಕ್ಷಗಳನ್ನೂ ಹಾವನ್ನೂ ಪೂಜಿಸುತ್ತೇನೆ. ಹಿಂದು ಪಂಚಾಗದ ಅನುಸಾರ ಈ ಪೂಜೆ ಸರ್ವತ್ರ ನಡೆಯುತ್ತದೆ' ಎಂದು ತಮ್ಮ ಭಾಷಣದಲ್ಲಿ ಅವರನ್ನು ತಿದ್ದಿದರು.

ಹೇಳಿದಷ್ಟರಿಂದ ಅರ್ಥವಾಗದಿರುವುದು; ಕಣ್ಣಮುಂದೆ ಕಂಡಾಗ ಅರ್ಥವತ್ತಾಗುತ್ತದೆ. ವರ್ತಮಾನವು ಅರ್ಥಭ–ರಿತ ವಾಗುವುದು ಈ ಮೂಲಕ. ಸಾಲಾಗಿ ನಿಂತ ಸಾಲ ವೃಕ್ಷಗಳನ್ನು ಶ್ರೀರಾಮನು ತನ್ನ ಒಂದು ಬಾಣದಿಂದ ಉರುಳಿಸಿದಾಗ ಈತ ವಾಲಿಯ ಬಲಕ್ಕೂ ಮೀರಿದವನೆಂದು ಸುಗ್ರೀವ ಒಪ್ಪಿಕೊಂಡ. ಶ್ರೀ ಕೃಷ್ಣನು ಅಂದು ಇಂದ್ರನಿಗೆ ಎದುರಾದಾಗ ಅವನು ಎತ್ತಿ ಇಟ್ಟ ಆ ಗೋವರ್ಧನಗಿರಿಯಿಂದ ಕೃಷ್ಣನ ರಕ್ಷಣೆಯಲ್ಲಿ ಸುರಕ್ಷಿತರೆಂದು ಗೋವಳರು ನಿಶ್ಚಿಂತರಾದರು. ಕುದುರೆಗಳ ಮೈತಿಕ್ಕಿ ತೊಳೆದು ತಣ್ಣನೆ ನೀರನ್ನು ಕುಡಿಸಿದ ಕೃಷ್ಣ; ದ್ರೌಪದಿಯು ಅಟ್ಟು ಇಟ್ಟ ಅಕ್ಷಯ ಪಾತ್ರೆಯಲ್ಲಿ ಉಳಿದ ತಂಗಳನ್ನು ತಿಂದು ಅದನ್ನು ತೊಳೆದಿಟ್ಟನಂತೆ. ಕೃಷ್ಣನ ಸೇವೆ ಮತ್ತು ಸಾಹಸದ ಆದರ್ಶ ವಿಶ್ವ ಹಿಂದು ಪರಿಷದ್, ಕಾರ್ಯಕರ್ತರ ಮುಂದೆ ಇದೆ.

ಮತ್ತೆ ಬೇಕೆನಿಸುವ ಮೂಲದ ನೆನಪು, ಮತ್ತೆ ಪಡೆದುಕೊಂಡುದನ್ನು ನೆನಪಿಸುವ ನೆನಕೆಗಳಿಗಾಗಿ ವಿವಿಧ ಆಕರಗಳಲ್ಲಿ ಪ್ರಕಟಗೊಂಡ ಪ್ರಸಂಗಗಳನ್ನೂ ಮಾಹಿತಿಗಳನ್ನೂ ಕಾಲಾನುಕ್ರಮದಿಂದ – chronological order- ಜೋಡಿಸಿ ಈ ಸಂಚಿಕೆಯಲ್ಲಿ ಕೊಟ್ಟಿದೆ. ನಿನ್ನೆಯ ಮುಂಬೆಳಕು ಇಂದಿನ ಹಗಲಾಗುತ್ತದೆ. ಮತ್ತೆ ಮತ್ತೆ ಭಾಗ್ಯಚಕ್ರದ ಉರುಳು ಮುಂದುವರೆಯುತ್ತದೆ. ಮಹಾರಾಜರು ಅಂದು ನುಡಿದಂತೆ ಮುಂದೆ ಸಾಗಬೇಕು, ಗೆಲುವು ನಿಶ್ಚಿತ.

**– ಟಿ.ಎ.ಪಿ. ಶೆಣೈ**



# ಹಿಂದು ಎಂದಾಗ ಅಭಿನ್ನತೆಯು ಮೈದಾಳುತ್ತದೆ

**–ಪೂಜ್ಯ ಶ್ರೀ ವಿಶ್ವ ಪ್ರಸನ್ನ ತೀರ್ಥರು**

ವಿಶ್ವ ಹಿಂದು ಪರಿಷದ್ ಸ್ಥಾಪನೆಯ ದಿನಗಳಿಂದಲೂ ಶ್ರೀ ಪೇಜಾವರ ಮಠಾಧೀಶರಾಗಿದ್ದ ಪೂಜ್ಯ ಶ್ರೀ ವಿಶ್ವೇಶ ತೀರ್ಥರು ನಮ್ಮ ಮೇಲೆ ತೋರುತ್ತಿದ್ದುದು ಪೂರ್ಣ ವಿಶ್ವಾಸ. ಅದಕ್ಕೂ ಮಿಗಿಲಾಗಿ ವಿಶ್ವ ಹಿಂದು ಪರಿಷದ್ ಕಾರ್ಯಕರ್ತರ ಬಗ್ಗೆ ಅತೀವ ವಾತ್ಸಲ್ಯ. ನಾವು ಅದನ್ನು ಈಗಿನ ಮಠಾಧೀಶರಾದ ಪೂಜ್ಯ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರಲ್ಲೂ ಕಾಣುತ್ತಿದ್ದೇವೆ.

ತಮ್ಮ ಚಾತುರ್ಮಾಸ್ಯ ವ್ರತ ಕೈಂಕರ್ಯಕ್ಕಾಗಿ ಚೆನ್ನೈಗೆ ಹೊರಡುವ ಅವಸರದಲ್ಲೂ ಹಿಂದು ವಾಣಿಯ **'ಸಾರ್ಥಕ 60'** ವಿಶೇಷಾಂಕಕ್ಕಾಗಿ ಸಂದರ್ಶನ ನೀಡಲು ಬಿಡುವು ಮಾಡಿಕೊಂಡ ಪೂಜ್ಯರಿಗೆ ನಮ್ಮ ಸಾಷ್ಟಾಂಗ ಪ್ರಣಾಮಗಳು.

'ಶ್ರೀರಾಮ ಜನ್ಮಭೂಮಿ ಆಂದೋಲನದ ಗೆಲುವು ವಿಶ್ವ ಹಿಂದು ಪರಿಷದ್‌ನ ಸಂಘಟಿತ ಶ್ರಮದ ಫಲ' 'ದೇಶವೆಂದರೆ ಹಲವು ಆಸಕ್ತಿಗಳ ಸಮೂಹ. ಆದರೆ ಅಲ್ಲಿ ಹಿಂದು ಎಂದಾಗ ಅಭಿನ್ನತೆಯು ಮೈದಾಳುತ್ತದೆ' 'ಹಿಂದು ಸಮಾಜದ ಉತ್ಕರ್ಷವನ್ನು ಕಂಡು ಕರುಬುವ ಕೆಲವರ ದುರದ್ದೇಶಪೂರಿತ ಹೇಳಿಕೆಗಳಿಂದ ಪ್ರಚೋದಿತರಾಗಬಾರದು' 'ಎಳವೆಯಲ್ಲಿ ಇತಿಹಾಸದ ತಿಳಿವು, ಆಧ್ಯಾತ್ಮಿಕತೆಯ ಅರಿವನ್ನು ಮೂಡಿಸುವುದು ಇಂದಿನ ಅನಿವಾರ್ಯ' ಎಂದು ವ್ಯಕ್ತ ಪಡಿಸಿದ ಅವರ ಚಿಂತನೆಯ ಎಳೆಗಳು ಈ ಸಂದರ್ಶನದಲ್ಲಿವೆ.

ಸಂದರ್ಶನ – **ಟಿ.ಎ.ಪಿ. ಶೆಣೈ**

**ಬಿ.ಇ. ಸುರೇಶ**

**1. ಶ್ರೀ ಪೇಜಾವರ ಮಠ ಮತ್ತು ಮಠಾಧೀಶರು ವಿಶ್ವ ಹಿಂದು ಪರಿಷದ್ ಸ್ಥಾಪನೆಯ ದಿನಗಳಿಂದಲೂ ನಮ್ಮನ್ನು ಕಂಡು, ಜೊತೆಯಲ್ಲಿದ್ದು, ಬೆಂಬಲಿಸಿದವರು. ಈ 60 ವರ್ಷಗಳ ಯಾತ್ರೆಯಲ್ಲಿ ತಾವು ಕಂಡಂತೆ ಪರಿಷತ್ತು ಸಮರ್ಥವಾಗಿ ಸ್ಥಾಪಿಸಿದ ವೈಚಾರಿಕ ವಿಶೇಷವೇನು?**

ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ನಡೆದ ದೀರ್ಘ ಹೋರಾಟವೆಂದರೆ ಅದು ಶ್ರೀರಾಮ ಜನ್ಮಭೂಮಿ ಕುರಿತಾಗಿ ನಡೆದ ಸಂಘರ್ಷ. ಅದರಲ್ಲಿ ವಿಶ್ವ ಹಿಂದು ಪರಿಷದ್ ಪ್ರಧಾನ ಪಾತ್ರ ವಹಿಸಿದ್ದಿತು. ಮೊದಲೆಲ್ಲ ನಡೆದ ಹೋರಾಟಗಳು ಒಂದು ಬಗೆಯಾದರೆ, ನಂತರದ ನಮ್ಮ ಕಾಲದಲ್ಲಿ ನಡೆದುದು ಕಾನೂನಾತ್ಮಕವಾದ ಸಾಮೂಹಿಕ, ಸಂಘಟಿತ ಸಂಘರ್ಷ. ಇದಕ್ಕೆ ಅವಶ್ಯಕವಾದುದು ಹೋರಾಟದ ಸಾತತ್ಯ ಮತ್ತು ಅಂತಿಮ ಗೆಲುವಿನ ಬಗ್ಗೆ ಅಖಂಡ ವಿಶ್ವಾಸ. ವಿಶ್ವ ಹಿಂದು ಪರಿಷದ್ 60 ವರ್ಷಗಳಲ್ಲಿ ಸಾಧಿಸಿ ತೋರಿಸಿದುದು; ಇಂತಹ ಗೆಲುವನ್ನು. ಇಲ್ಲಿ ಮೆಚ್ಚಬೇಕಾದುದು ಪರಿಷತ್ತಿನ ಸಂಘಟನೆಯ ಶಕ್ತಿಯನ್ನು. ಅದು ಭಾರತದಲ್ಲಷ್ಟೇ ಅಲ್ಲ; ವಿದೇಶಗಳಲ್ಲೂ ಹಿಂದು ಸಮಾಜವನ್ನು ಸಂಘಟಿಸಿದೆ.


**2. ಸಾಮಾಜಿಕ ನೆಲೆಯಲ್ಲಿ ವಿಶ್ವ ಹಿಂದು ಪರಿಷತ್ತಿನ ಯಶಸ್ಸನ್ನು ಪರಿಗಣಿಸಲು ಸಾಧ್ಯವೇ?**

ಹಿಂದು ಸಮಾಜದಲ್ಲಿ ಹಲವು ಪಂಗಡಗಳು ಕಾಣುತ್ತವೆ. ಇದು ಹಿಂದು ಸಮಾಜದಲ್ಲಿ ಮಾತ್ರವಲ್ಲ ಉಳಿದೆಲ್ಲ ಸಮುದಾಯಗಳಲ್ಲೂ ಕಾಣುತ್ತದೆ. ಈ ಪಂಗಡಗಳ ನಡುವೆ ಸಹಜವಾಗಿ ಅಭಿಪ್ರಾಯ ಬೇಧಗಳಿರುತ್ತವೆ. ಆದರೆ ಇವೆಲ್ಲವೂ ಒಳಗೊಂಡ ಒಟ್ಟು ಹಿಂದು ಸಮಾಜದಲ್ಲಿ ನಮ್ಮದು ಹಿಂದು ಸಂಸ್ಕೃತಿ ಎಂದು ಮನಗಂಡಾಗ ನಾವು ಅಭಿನ್ನರಾಗುತ್ತೇವೆ. ಹಿಂದು ಸಮಾಜವು ಒಂದಾಗಬೇಕು ಎನ್ನುವ ಭಾವನೆಯಿಂದ ಮುಖ್ಯವಾಹಿನಿಯಲ್ಲಿ ಸೇರಿದಾಗ ಮಾತ್ರ ಹಿಂದು ತಲೆ ಎತ್ತಿ ನಿಲ್ಲಬಹುದು. ನಮ್ಮೆಲ್ಲರ ಸಂಸ್ಕೃತಿಯು ಹಿಂದು ಎನ್ನುವ ಏಕೀಭಾವದ ದೃಢಬಂಧವನ್ನು ವಿಶ್ವ ಹಿಂದು ಪರಿಷದ್ ಸಾಧಿಸಿದುದನ್ನು ನಮ್ಮ ಅನುಭವದಲ್ಲಿ ಕಂಡಿದ್ದೇವೆ. ಇದು ವಿಶ್ವ ಹಿಂದು ಪರಿಷತ್ತಿನ ವೈಚಾರಿಕ ಯಶಸ್ಸು.

**3. ಹಿಂದು ಯುವ ಸಮೂಹವು ಲೌಕಿಕ ಜೀವನದಲ್ಲಿ ಯಶಸ್ಸನ್ನು ಸಾಧಿಸಬೇಕೆಂದಿರುವುದು ಸಹಜವೆ. ಅದರೊಂದಿಗೆ ಒಂದು ಹಂತದಲ್ಲಿ ಅದು ಹಿಂದು ಆಧ್ಯಾತ್ಮಿಕ ಅನುಭವವನ್ನೂ ಅರಿಯಬೇಕೆಂದು ಅಂತರಂಗದಲ್ಲಿ ಹಂಬಲಿಸುತ್ತಿದೆ. ಇದಕ್ಕೆ ಅನುವು ಮಾಡುವ ಪ್ರಯತ್ನವನ್ನು ಎಲ್ಲಿಂದ ಆರಂಭಿಸಬಹುದು?**

ಪುರಾಣಗಳಲ್ಲಿ ನಮ್ಮ ಹಿರಿಯರು ನಮಗೆ ನೀಡಿದ ಸಂದೇಶದಂತೆ; 'ಕೌಮಾರ ಆಚರೇತ್ ಪ್ರಾಜ್ಞಃ ಧರ್ಮಾನ್ ಭಾಗವತಾನ್ ಇಹ' ಆಧ್ಯಾತ್ಮಿಕ ಅನುಭವವು ಪ್ರತಿಯೊಬ್ಬನಿಗೂ ಬೇಕು. ವ್ಯಕ್ತಿಯು ಪರಿಪೂರ್ಣನೆನಿಸಲು ಹೊರ ದೇಹವೂ ಬೇಕು. ಒಳಾತ್ಮವೂ ಬೇಕು. ದೇಹವಿಲ್ಲದ ಆತ್ಮಕ್ಕೆ ಅಭಿವ್ಯಕ್ತಿಯಿಲ್ಲ. ಆತ್ಮವಿಲ್ಲದ ದೇಹವು ವ್ಯಕ್ತಿಯಲ್ಲ. ಲೌಕಿಕ ಜೀವನವೂ ಬೇಕು. ಆಧ್ಯಾತ್ಮಿಕ ಬದುಕೂ ಬೇಕು. ಇದು ಹಿಂದು ಜೀವನದ ಬೇರ್ಪಡಿಸಲಾಗದ ಆಯ್ಕೆಗಳು. ಹಾಗಾಗಿ ಹಿಂದುಗಳೆಲ್ಲರಲ್ಲೂ ಇಂತಹದೊಂದು ಕಾತರವಿರುತ್ತದೆ. ಎಳವೆಯಲ್ಲಿ ಇದಕ್ಕೆ ಪೂರಕವಾದ ಸಂಸ್ಕಾರವು ದೊರೆತರೆ ಅದು ಅವರ ಭೌತಿಕ ಬೆಳವಣಿಗೆಯೊಂದಿಗೆ ಆಧ್ಮಾತ್ಮಿಕ ಏಳಿಗೆಗೂ ಕಾರಣವಾಗುತ್ತದೆ.

ಶೈಶವದಲ್ಲೇ ದೇಶಾಭಿಮಾನವನ್ನು ಜೊತೆಯಾಗಿಸಿದರೆ ವೈಯಕ್ತಿಕ ಬದುಕು ಮತ್ತು ಸಾಂಘಿಕ ಬದುಕು ಉತ್ತಮವಾಗುತ್ತದೆ. ಆಧ್ಯಾತ್ಮಿಕದ ಪರಿಚಯವು ಶಿಶುವಿನ ನಾಮಕರಣದಿಂದಲೇ ಪ್ರಾರಂಭವಾಗಬೇಕು. ಇಂದು ಯಾವುದೋ ಎರಡುಮೂರು ಅಕ್ಷರಗಳು ಸೇರಿದ ಅರ್ಥ ವಿಲ್ಲದ ಶಬ್ದವನ್ನು ಮಗುವಿಗೆ ಹೆಸರೆಂದು ಇಡುತ್ತೇವೆ. ನಮ್ಮ ಸಂಸ್ಕೃತಿಯೊಡನೆ ಜೋಡಣೆಯಾದ ಮಹಾಪುರುಷರ ಹೆಸರನ್ನು ಮಕ್ಕಳಿಗೆ ಇಟ್ಟರೆ; ತನ್ನ ಹೆಸರಿನ ಹಿನ್ನೆಲೆಯನ್ನು ತಿಳಿಯುವ ಹಂಬಲದಿಂದಾದರೂ ರಾಮಾಯಣ, ಮಹಾಭಾರತ, ಪುರಾಣಗಳು ವೇದಗಳ ಪಾತ್ರಗಳನ್ನು ಪರಿಚಯಿಸಿಕೊಂಡು ಆಧ್ಯಾತ್ಮಿಕ ಜ್ಞಾನದ ಹೊಸಲನ್ನು ಮಕ್ಕಳು ದಾಟುವಂತಾಗಬಹುದು. ನಾಮಕರಣದ ಸಂಸ್ಕಾರದಲ್ಲಿ ತಂದೆ ತಾಯಿಗಳು ತಪ್ಪಿ ಬಿದ್ದರೆ ಈಗಲೂ ಕಾಲ ಮಿಂಚಿಲ್ಲ. ಪುನರ್ನಾಮಕರಣದ ಮೂಲಕ ಹಿಂದು ಸಂಸ್ಕೃತಿಯನ್ನು ನೆನಪಿಸುವ ಹೆಸರನ್ನು ಇಟ್ಟು ದೇಶದ ಸಾರ್ವಭೌಮತೆಗೆ ಪೂರಕವಾಗುವ, ಧರ್ಮದ ಆಚರಣೆಗೆ ಅನುವಾಗುವ ಮನಸ್ಸನ್ನು ಮಕ್ಕಳಲ್ಲಿ ಮೂಡಿಸಬಹುದು. ಒಮ್ಮೆ ಇಂತಹ ಆಸಕ್ತಿ ಮೂಡಿದರೆ ಹಲವು ಹತ್ತು ರೀತಿಗಳಲ್ಲಿ ಅದನ್ನು ಮುಂದುವರಿಸುವ ಪರಿಸರವು ಈಗ ಲಭ್ಯವಿದೆ.



**4. ಕಳೆದ 60ವರ್ಷಗಳ ನಿಬಿಡವಾದ ಹಿಂದು ಘಟನಾವಳಿಗಳ ನಿರ್ಣಾಯಕ ಹಂತದಲ್ಲಿ ಶ್ರೀ ಪೇಜಾವರ ಮಠದ ಮತ್ತು ಮಠಾಧೀಶರ ಪಾತ್ರ ಮಹತ್ವದಾಗಿದ್ದಿತು. ಈಗಿನ ವಾಸ್ತವದಲ್ಲೂ ಅಂತಹ ಲೋಕದೃಷ್ಟಿಯ ಸಂದೇಶವನ್ನು ನಿರೀಕ್ಷಿಸಬಹುದೇ?**

ಅವಶ್ಯವಾಗಿ. ನಾವು ಇದನ್ನೇ ನಿರಂತರವಾಗಿ ಮಾಡುತ್ತ ಬರುತ್ತಿದ್ದೇವೆ. ಗುರುಗಳ ನಿರ್ಯಾಣದ ಬಳಿಕ ನಾವು ಕೈಗೊಂಡ ಪ್ರಯತ್ನಗಳು ಪುಟ್ಟ ಹೆಜ್ಜೆಗಳಾದರೂ ಅವು ಮುಂದಿನ ದಿನಗಳಲ್ಲಿ ಸಮಾಜದ ನಡುವೆ ಬೆಳೆಯುತ್ತಿರಬೇಕು.ಅಯೋಧ್ಯೆಯಲ್ಲಿ ನಿರ್ಮಿಸಿದ ಶ್ರೀರಾಮ ಮಂದಿರದೊಂದಿಗೆ ರಾಮರಾಜ್ಯದ ಕನಸೂ ನನಸಾಗುವತ್ತ ಹೆಜ್ಜೆಯಿಡಬೇಕು. ರಾಮರಾಜ್ಯವೆಂದರೆ ಎಲ್ಲೆಡೆಯೂ ಸಮೃದ್ಧಿ. ಎಲ್ಲೂ ದುಃಖದುಮ್ಮಾನಗಳಿಲ್ಲ. ಎಲ್ಲೂ ಕೊರತೆಯಿಲ್ಲ. ಶ್ರೀರಾಮನಿಗೆ ಸೂಕ್ತ ಕಾಣಿಕೆಯೆಂದರೆ ರಾಮರಾಜ್ಯ ನಿರ್ಮಾಣದ ಕಾಣಿಕೆ. ಈಗಿರುವುದು ಪ್ರಜಾರಾಜ್ಯ. ಅದನ್ನು ರಾಮರಾಜ್ಯವಾಗಿಸುವುದೆಂದರೆ ಪ್ರಜೆಗಳೇ ರಾಮನಾಗುವುದು. ಅಂದರೆ ರಾಮನ ವ್ಯಕ್ತಿತ್ವವನ್ನು ಮೈದಾಳುವುದು. ರಾಮನು 'ಪ್ರಜಾನಾಂಚ ಹಿತೇ ರತಃ' ನಾದವನು. ಪ್ರಜೆಗಳ ಸಂತೋಷದಲ್ಲಿ ಒಂದಾಗಿ, ಅವರ ದುಃಖದಲ್ಲಿ ಪಾಲುಗೊಳ್ಳುತ್ತಿದ್ದವನು ಶ್ರೀರಾಮ. ಅದನ್ನು ನಾವು ಅನುಸರಿಸಬಹುದು. ನಾನು ಶಿಕ್ಷಕನಾಗಿರುವೆ, ಹತ್ತು ಮಕ್ಕಳಿಗೆ ಉಚಿತ ಪಾಠ ಹೇಳಿಕೊಡಬಹುದು. ನಾನು ವೈದ್ಯನಾಗಿದ್ದರೆ ಹತ್ತು ಮಂದಿ ದುರ್ಬಲರಿಗೆ ನಿಶ್ಶುಲ್ಕ ಚಿಕಿತ್ಸೆ ನೀಡಬಹುದು. ಇಂತಹ ಸಮಾಜ ಸೇವೆಯೇ ಶ್ರೀರಾಮನ ಸೇವೆಯೆಂದುಕೊಂಡು ಅದನ್ನು ಶ್ರೀರಾಮನಿಗೆ ಅರ್ಪಿಸಬೇಕು. ಈ ಬೆಳವಣಿಗೆಯು ದೇಶಾದ್ಯಂತ ಪಸರಿಸಬೇಕು. ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ವಿಶ್ವಸ್ತನಾದ ಮೇಲೆ, ಇಂತಹ ಸ್ವಯಂ ಪ್ರೇ- ರಿತ ಸೇವೆಯ ಜಾಲವನ್ನು ನಿರ್ಮಿಸುತ್ತಿದ್ದೇವೆ. ಈಚೆಗೆ ತಲೆಯ ಮೇಲೊಂದು ಸೂರಿಲ್ಲದ ವೃದ್ಧೆಯೊಬ್ಬರಿಗೆ ಪುಟ್ಟ ಮನೆಯ ನಿರ್ಮಾಣವಾಗಬೇಕೆನ್ನುವ ನಮ್ಮ ಮಾತಿನಿಂದ ಪ್ರೇರಿತರಾದವರು ಅದಕ್ಕೆ ಅನುವಾದರು. ಕೆಲವರು ಕಲ್ಲು ಇನ್ನು ಕೆಲವರು ಸಿಮೆಂಟ್ ಕೊಟ್ಟರು. ಮನೆ ನಿರ್ಮಾಣವಾಯಿತು. ಒಬ್ಬರು ಗೃಹ ಪ್ರವೇಶದ ಅಡುಗೆ ಸಾಮಗ್ರಿ ಕೊಟ್ಟರೆ ಇನ್ನೊಬ್ಬರು ಅಡುಗೆ ಮಾಡಿಕೊಟ್ಟರು. ಇದೆಲ್ಲವನ್ನು ಅವರು ರಾಮನ ಸೇವೆಗೆ ನೀಡಿದ ಕಾಣಿಕೆ ಎಂದುಕೊಂಡರು. ರಾಮರಾಜ್ಯ ನಿರ್ಮಾಣದ ಪ್ರಾರಂಭವಿದು.

**5. ಹಿಂದು ಸಮಾಜವನ್ನು ಪ್ರಚೋದಿಸಲೆಂದೇ ವೈಚಾ- ರಿಕತೆ, ಜಾತ್ಯತೀತತೆ, ನಾಸ್ತಿಕವಾದಗಳ ಮುಖವಾಡ ಧರಿಸಿ ಹಿಂದು ನಂಬಿಕೆಗಳನ್ನು ಹೀಗಳೆಯುವ, ಗಾಂಭೀರ್ಯದ ಲೇಶವೂ ಇಲ್ಲದ ದುರುದ್ದೇಶ ಪೂ- ರಿತ ಹೇಳಿಕೆಗಳು ಬರುತ್ತಿವೆ. ಇದಕ್ಕೆ ಹಿಂದು ಸಮಾಜದ ಪ್ರತಿಕ್ರಿಯೆಯು ಏನಿರಬೇಕು?**

'ಕೈಲಾಗದವನು ಮೈ ಪರಚಿಕೊಂಡ' ಎನ್ನುವ ಮಾತಿದೆ. ಹಿಂದು ಸಮಾಜವು ಸಾತ್ವಿಕ ಮೂಲದ ಸಾಂವಿಧಾನಿಕ ಮಾರ್ಗದಲ್ಲಿ ಸಾಧಿಸುವ ಏಳಿಗೆಯನ್ನು ಕಂಡು ಸಹಿಸಲಾಗದ ಕೆಲವು ಮಂದಿ ಇಂತಹ ಹೇಳಿಕೆಯನ್ನು ನೀಡುತ್ತಾರೆ. ಇದು ಅವರು ದುರ್ಬಲರಾಗುತ್ತಿರುವ ಲಕ್ಷಣ ಮತ್ತು ಸೋಲಿಗೆ ಸಿದ್ಧರಾಗುತ್ತಿರುವರೆಂದು ಅರ್ಥ. ಇವೆಲ್ಲ ಸಾರಾಸಗಟಾಗಿ ಅವಗಣನೆಗೆ ಅರ್ಹವಾದ ಹೇಳಿಕೆಗಳು. ಇನ್ನೊಂದು ಕಡೆ ಇದ- ರಿಂದ ಪ್ರಚೋದಿತರಾಗದೆ ಈ ದುರುದ್ದೇಶವನ್ನು ಸಮಾಜಕ್ಕೆ ಮನವರಿಕೆ ಮಾಡಬೇಕು. ಸಮಾಜವು ಇದಕ್ಕೆ ಉತ್ತರಿಸುವಂತಾಗಲಿ. ನಮ್ಮ ನಡೆಯು

ಗಾಂಭೀರ್ಯದ್ದಾಗಿರಬೇಕು. ನಮ್ಮ ಉತ್ತರವೂ ಗೌರವಯುತವಾಗಿರಬೇಕು, ಇಂತಹ ಪ್ರಚಾರದ ದುಷ್ಪರಿಣಾಮವು ಸಾತ್ವಿಕ ಹಿಂದು ಸಮಾಜದ ಮೇಲೆ ಆಗದಿರುವಂತೆ ನೋಡಬೇಕು.

**6. ಸಂಘಟಿತ ಹಿಂದು ಸಮಾಜದ ಸಾಂಘಿಕ ಮನಸ್ಸು 'ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್' ಆಗಲು ಸಂತ ಸಮಾಜವು ನೇತೃತ್ವವಹಿಸುವಂತೆ ಶ್ರೀ ಮಠದಿಂದ ಪಯತ್ನವು ಪಾರಂಭವಾಗಬಹುದೇ?**

ಪ್ರಾರಂಭವಾಗುವುದಲ್ಲ. ಇದು ನಮ್ಮ ಗುರುಗಳ ಗುರುಗಳಿಂದ ಪ್ರಾರಂಭವಾಗಿ ನಮ್ಮ ಗುರುಗಳಿಂದ ಮುಂದುವರಿಯುತ್ತ ಬಂದಿತ್ತು. 'ಹಿಂದವಃ ಸೋದರಾಃ ಸರ್ವೇ' 'ನ ಹಿಂದು; ಪತಿತೋ ಭವೇತ್' ಅನ್ನುವ ಅಮೃತ ಅಕ್ಷರ ಧ್ಯೇಯವಾಕ್ಯಗಳನ್ನು ನೀಡಿದವರು ನಮ್ಮ ಗುರುಗಳು. ಯಾವುದೇ ಒಬ್ಬ ವ್ಯಕ್ತಿ ಪ್ರತ್ಯೇಕವಾಗಿ ವೈಯಕ್ತಿಕವಾಗಿ ಪ್ರಯತ್ನಿಸುವುದಕ್ಕಿಂತ ಸಂಘಟಿ-ತ ಪ್ರಯತ್ನದಲ್ಲಿ ಜೊತೆಗೂಡುವುದು ಉತ್ತಮ. ಆಗ ಅದಕ್ಕೆ ಬಲ ಹೆಚ್ಚಾಗುತ್ತದೆ. ನಮ್ಮ ಮಠವು ತಾನು ಪ್ರಯತ್ನಿಸುವುದರೊಂದಿಗೆ ಈ ಉದ್ದೇಶದಿಂದ ಕಾರ್ಯೋನ್ಮುಖವಾಗಿರುವ ವಿಶ್ವ ಹಿಂದು ಪರಿಷತ್ತಿನ ಜೊತೆ ಯೂ ಸೇರಿಕೊಂಡು ಸಮಾಜದ ಏಳಿಗೆಯ ಪ್ರಯತ್ನವನ್ನು ಮಾಡುತ್ತಲೇ ಇದೆ. ಇದು ಹಿಂದೆಯೂ ನಡೆಯುತ್ತಲ್ಲಿತ್ತು. ಇಂದೂ ನಡೆಯುತ್ತಿದೆ. ಮುಂದೂ ಅದೇ ರೀತಿ ಮುಂದುವರಿಯುತ್ತದೆ.

**7. ಇದು ವಿಶ್ವ ಹಿಂದು ಪರಿಷತ್ತಿನ ಷಷ್ಟ್ಯಬ್ದ ವರ್ಷ. ತಮ್ಮ ವಾತ್ಸಲ್ಯ ಪೂರ್ಣ ಆಶೀರ್ವಾದಗಳೊಂದಿಗೆ ಸದಾ ಮನನ ಮಾಡುವ ಸಂದೇಶವನ್ನು ದಯಪಾಲಿಸಲು ಪ್ರಾರ್ಥಿಸುತ್ತೇವೆ.**

ವಿಶ್ವ ಹಿಂದು ಪರಿಷದ್ ಮತ್ತು ನಾವು ಒಂದೇ ವರ್ಷದಲ್ಲಿ ಜನ್ಮತಾಳಿದವರು. ನಮ್ಮ ಷಷ್ಟ್ಯಬ್ದವೂ, ಇದೇ ವರ್ಷ ನಡೆಯುತ್ತಿದೆ. ನಮ್ಮದು ಸೋದರ ಸಂಬಂಧ. ಸೋದರರಲ್ಲಿ ಪರಸ್ಪರ ಕೊಡುಕೊಳ್ಳುವಿಕೆಯ ಬಾಂಧವ್ಯವು ಇದ್ದುದೆ. ವಿಶ್ವ ಹಿಂದು ಪರಿಷತ್ತಿನ ಮಾರ್ಗದರ್ಶಕ ಮಂಡಳಿಯ ಸದಸ್ಯರಾಗಿ ಹತ್ತಿರದಿಂದ ಕಂಡಂತೆ; ವಿಶ್ವ ಹಿಂದು ಪರಿಷತ್ತಿನ ಈ 60 ವರ್ಷಗಳಲ್ಲಿ ಯಾವ ಸಾಧನೆಯನ್ನು ಮಾಡುತ್ತಿದೆಯೋ, ಮಾಡಿದೆಯೋ–ಇವತ್ತು ಶ್ರೀರಾಮ ಮಂದಿರವಿರಬಹುದು. ಅಥವಾ ಈ ದಿನಗಳಲ್ಲಿ ಹಿಂದು ಸಮಾಜವು ಗಳಿಸಿದ ಗೌರವವಿರಬಹುದು–ಇವೆಲ್ಲದರ ಹಿಂದೆ ವಿಶ್ವ ಹಿಂದು ಪರಿಷತ್ತಿನ ನಿರಂತರ ಶ್ರಮವಿದೆ, ಮತ್ತು ಪ್ರಯತ್ನವಿದೆ. ಸಮಾಜದ ಎಲ್ಲರೂ, ವಿಶ್ವ ಹಿಂದು ಪರಿಷತ್ತಿನಲ್ಲಿ ಈ ಹಿಂದೆ ನಡೆದಂತೆ ಹೊಸ ತಲೆಮಾರಿನ ಯುವಕರೂ ಕೂಡಾ ಜೊತೆ ಸೇ-ರಿಕೊಂಡು ಈ ಪ್ರಯತ್ನವನ್ನು ಹೆಚ್ಚಿಸಬೇಕು. ಅದನ್ನು ಸಾಧಿಸಲು ಎಲ್ಲರೂ ತೊಡಗಿಸಿಕೊಳ್ಳಬೇಕೆಂದು ಸಮಾಜದಿಂದ ಬಯಸುತ್ತೇವೆ. ಹಿಂದು ಸಮಾಜದ ಏಳಿಗೆಯೊಂದಿಗೆ ದೇಶದ ಏಳಿಗೆಯನ್ನು ಸಾಧಿಸೋಣ. ಜೊತೆಯಲ್ಲಿ ಮುನ್ನಡೆಯೋಣ. ಒಂದೇ ದನಿಯಲ್ಲಿ ನುಡಿಯೋಣ. ಎಲ್ಲರ ಮನಸ್ಸು ಜೊತೆಗೂಡಲಿ. ಈ ರೀತಿ ವಿಶ್ವ ಹಿಂದು ಪರಿಷತ್ತಿನೊಂದಿಗೆ ಕೈ ಜೋಡಿಸಲು ಕರೆ ನೀಡುವ ಸಂದೇಶವನ್ನು ನೀಡುತ್ತಿದ್ದೇವೆ.

ಎಲ್ಲರಿಗೂ ಶುಭವಾಗಲಿ. ಜೈಶ್ರೀರಾಮ್

### ಪ್ರಶ್ನೆಗಳಿಗೆ ಸವಾಲಾದ ಶಕ್ತಿ ಹಿಂದು ನಂಬಿಕೆ:

ಉದಾಹರಣೆಗೆ ಮಾನವನಿಗೆ ಅತ್ಯಂತ ಆಕರ್ಷಕವೂ, ಕುತೂಹಲಕರವೂ ಆದ ದೇವರ ಕುರಿತಾದ ನಂಬಿಕೆಯನ್ನೇ ನೋಡೋಣ. ದೇವರು ಏನು? ಹೇಗೆ? ಎಂಬ ಕುರಿತು ಹಿಂದು ಧರ್ಮದ ವಿಚಾರ ಏನು? ಉತ್ತರ ಅಷ್ಟೇ ವಿಶಾಲ, ವ್ಯಾಪಕ, "ಅವರವರ ಭಾವನೆ ಬುದ್ಧಿ ಬಲಗಳಿಗೆ ತಕ್ಕಂತೆ". ನಾಸ್ತಿಕನಿಗೆ ಇಲ್ಲ, ಆಸ್ತಿಕನಿಗೆ ಉಂಟು. ಹೀಗೆ ಅದನ್ನರಿಯಲು ಹೊರಟ ಪ್ರಶ್ನೆಗಳೆಲ್ಲಾ ಹಿಂದೆ ಬಂದು ಆ ನಿಗೂಢತೆ ಹಾಗೆಯೇ ಉಳಿಯುತ್ತದೆ. ಎಲ್ಲ ಕಾಲಕ್ಕೂ ಎಲ್ಲ ಬಗೆಯ ಜನರಿಗೂ ಅನ್ವಯವಾಗಬಲ್ಲ ಧರ್ಮ–ಹಿಂದೂ ಧರ್ಮ ಎಂಬುದು ಅರ್ಥವಾಗುತ್ತದೆ.

ಹಿಂದು ಧರ್ಮ ಯಾವುದೋ ಒಬ್ಬ ವ್ಯಕ್ತಿಯ ಪ್ರತಿಭೆಯಿಂದ ಹೊರಬಂದುದಲ್ಲ; ಯಾವುದೋ ಗ್ರಂಥವೇ ಸರಿಯೆಂದು ನಂಬಿ ಕೂತದ್ದಲ್ಲ; ಯಾವುದೋ ಒಂದು ಪೂಜಾಕ್ರಮವೇ ಸರಿಯೆಂದು ಹೇಳಿದ್ದಿಲ್ಲ ಅದೊಂದು ಮತವಲ್ಲ ಪೂಜಾ ವಿಧಾನವಲ್ಲ; ಅದೊಂದು ಹೊಸ ಸೃಷ್ಟಿಯಲ್ಲ; ಆದರೆ ವಿಶೇಷವಾದ ದೃಷ್ಟಿ, ಜೀವನದ ಕುರಿತಾದ ವಿಶೇಷ ದೃಷ್ಟಿಯನ್ನೇ ಹಿಂದು ಧರ್ಮವೆಂದು ಹೆಸರಿಸಿದ್ದೇವೆ.

# ಮತ್ತೆ ಮೊಳಗಲಿ ಪಾಂಚಜನ್ಯ

–ಎಮ್. ಗೋಪಾಲಕೃಷ್ಣ ಅಡಿಗ

೧

ಏಳೋಣ, ಎದ್ದು ನಿಲ್ಲೋಣ ಎದೆ ಸೆಟೆದು,
ದಧೀಚಿ ಕಶೇರುವಿನಂತೆ ದೃಢ, ರಾಮಬಾಣದಂತೆ ಅಸಂದಿಗ್ಧ,
ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ:
ಸಂಕಲ್ಪಕ್ಕೆ ಸಂಕಲ್ಪ, ಹೆಜ್ಜೆಗೆ ಹೆಜ್ಜೆ, ಹೆಗಲಿಗೆ ಹೆಗಲು
ಮುಂಗಾರಿನಲ್ಲಿ ಧುಮ್ಮಿಕ್ಕಿ ದುಡುಕುವ ಹೊನಲು
ಹಿಂದುತ್ವದ ಮಹಾಸಿಂಧು ಭೋರ್ಗರೆದು ಬೊಬ್ಬಿರಿದು ಗಡಿಬಿಡಿ ತೊಡೆದು
ನುಗ್ಗಲೆಲ್ಲಾ ಕಡೆಗು ನಾಡಿನುದ್ದ;
ಆಗುವಂತೆಲ್ಲವೂ ಮತ್ತೆ ಪರಿಶುದ್ಧ;
ದುರ್ಮತ ಮತಾಂಧತೆಯ ಮರಳ ದಿನ್ನೆ, ದಿಬ್ಬ, ಚಾಕು, ಚೈನು, ಕೈಬಾಂಬುಗಳ
ನಡುಗಡ್ಡೆಗಳು ನೆಗೆದು ಬೀಳಲಿ ಸಮೂಲ;

ತಾತ್ಕಾಲಿಕದ ಕೋಟೆ, ಬುರುಜು, ಗಲ್ಲಿ ನೊರಜು ಕುರುಜುಗಳೆಲ್ಲ
ತೊಳೆದು ಹೋಗಲಿ ಇಲ್ಲಿ ಒಂದೇ ಸಲ. ಸನಾತನ ನೀಲ
ಆಕಾಶ, ಶ್ಯಾಮಲ ನೆಲ, ಶತಕೋಟಿ ತಾರೆ,
ಭರತ ವರ್ಷದ ಮೇಲೆ ಸ್ವರ್ಗಂಗೆ ಧಾರೆ;
ಶುದ್ಧ ನಿರ್ಮಲ ಮಾನಸ ಸರೋವರದ ಮೇಲೆ
ಅಷ್ಟದಳ ಕಮಲದ ನಿರಾಳ;
ಪರಮ ಪುರುಷಾರ್ಥದ ಪರಾತ್ಪರದ ಹೊಸ ಬೆಳೆಗೆ ಹದವಾದ ಹೊಲ ವಿಶಾಲ.
ಒಂದು ಸಾವಿರ ವರ್ಷಗಳ ಕಾಲ ತಗ್ಗಿ ಬಗ್ಗಿ ಸಲಾಮು
ಹೊಡೆದು ಜೀಜೀ ಎಂದು, ಎಸ್ಸೆಸ್ ಎಂದು ಸಾರ್ ಸಾರ್ ಎಂದು

ಕಿವಿಯಿಂದ ಕಿವಿವರೆಗೆ ದೇಶಾವರಿಯ ಕೆತ್ತಿಸಿಕೊಂಡು ನಿಂತದ್ದು,
ಬುಸ್‌ಬುಸ್ ಎನ್ನುವುದೂ ಮರೆತು ಹುತ್ತ ಕಟ್ಟಿಕೊಂಡು ಜಡವಾಗಿ
ಜೀವನ್ಮೃತತ್ವ ಸಾಧಿಸಿಕೊಂಡು ಮಲಗಿದ್ದು,
ಹಿಂದು ಎಂದರೆ ಹೇಡಿ ಎಂದೆನಿಸಿಕೊಂಡದ್ದು
ಸಹಿಷ್ಣುತೆಯ ಪ್ರತ್ಯಂಗಕ್ಕೂ ಜಖಂ ಆಗಿ
ಗುಣವೆ ಅವಗುಣವಾಗಿ, ಮಾನವೆ ಹರಾಜಾಗಿ
ತಿಲಾಂಜಲಿ ಕೊಟ್ಟು ಪುರುಷತ್ವಕ್ಕೆ
ಸಮತಾ ಹೊಡೆದು ಪಶುಬಲಕ್ಕೆ
ಶತಚ್ಛಿದ್ರರಾಗಿ, ಅಭದ್ರರಾಗಿ, ದರಿದ್ರರಾಗಿ ಸ್ವಂತ ಮನೆಯಲ್ಲಿ ತೊತ್ತಾಗಿ
ನಮ್ಮಣ್ಣ ತಮ್ಮಂದಿರನ್ನೇ ಕೀಳು ಮಾಡಿ, ಸ್ವತಃ ಲೋಕಕ್ಕೆ ಕೀಳಾಗಿ

ಹೋಳು ಹೋಳಾಗಿ ಹೋಗಿದ್ದ ಮನೆ ಹಾಳು ಬುದ್ಧಿಗೆ ಇಗೋ
ಕೊನೇ ನಮಸ್ಕಾರ; ಪುನರ್ಜನ್ಮಕ್ಕೆ
ಪುನರುತ್ಥಾನಕ್ಕೆ, ಪುನರ್ಧಾನಕ್ಕೆ, ಯಾನಕ್ಕೆ, ಆರೋಹಣಕ್ಕೆ

ಸುಮುಹೂರ್ತ, ಸಾವಧಾನ ।
೨
೨ಹಿಂದುಗಳನ್ನೊಂದಾಗಿ ಹಿಡಿದಿದ್ದ ಅದೃಶ್ಯ ಸರಪಣಿ ಕೊಂಡಿ
ಕೊಂಡಿ ಕಳಚಿವೆ, ಗೊಣಸು ಗೊಣಸು
ಕಿತ್ತು ಬಿದ್ದಿವೆ ಅಲ್ಲಿ ಇಲ್ಲಿ ಚೆಲ್ಲಾಪಿಲ್ಲಿ:
ಪ್ರತಿ ಹಿಂದು ಬದುಕು ಮತ್ತೊಮ್ಮೆ ಧಗಧಗ ಕುಲುಮೆ,
ಸೋದರತ್ವದ ಪ್ರೀತಿ ಪ್ರಜ್ವಲಿಸಲಿ;
ಹೃದಯ ಹೃದಯದ ರಕ್ತ ಕುದಿದು ಬೆಸೆಯಲಿ ಮತ್ತೆ

ಸರಪಣಿಯ ಗೊಣಸು ಗೊಣಸು.
ಬಾನೆತ್ತರಕ್ಕರಳಿ ಅಲಂಕೃತವಾಗಿ ಪ್ರತ್ಯಂಗುಲ
ಕನಸು ಸಂಕಲ್ಪಗಳ ನಮ್ಮ ಪುರುಷಾರ್ಥ ಮೇರು
ಅತಿ ಪುರಾತನದಲ್ಲಿ ಅತ್ಯಾಧುನಿಕತೆ ಫಲಿಸುತ್ತಿರುವ ನಮ್ಮ ಸಂಸ್ಕೃತಿಯ ತೇರು.
ಕೈಹಚ್ಚೋಣ ಮಿಣಿಗೆ, ಮನಮನಗಳೊಂದಾಗಿ,
ಎಳೆಯೋಣ ನಾಡಿನುದ್ದಗಲವೂ ನೇರ, ನೇರ;
ನೆಲದ ಕಣಕಣ ರೇಣುರೇಣು ಪರಿಶುದ್ಧವಾಗಿ
ಕೋಟೆಕೋಟೆಗಳೆಲ್ಲ ಮತ್ತೆ ವಶವಾಗಿ
ಶಿಖರಗಳೆಲ್ಲ ಆಗಿ ಸ್ವಾಧೀನ,
ಪ್ರತಿ ಪಾಣಿಪೀಠಕ್ಕು ಅಷ್ಟಬಂಧ,

ರಾಕ್ಷಸ ಕುಲಕ್ಕೆ ಸರ್ವತ್ರ ದಿಗ್ಬಂಧ,
ಶಾಂತಿ ವಾಚನ ನಡೆಸಲವಕಾಶ ಅವಿನಾಶಆಗುವ ಹಾಗೆ ಶೋಭಿಸಲಿ ಸಹವೀರ್ಯ ಸಹಕಾರ
ಪ್ರಕಾಶ !
೩
ಅಹಿಂಸೆ ಪರಮ, ಸರ್ವತ್ರ. ಅದು ಸಹಜ
ಜಗತ್ತನ್ನೆ ಸುಟ್ಟುರಿಸಬಲ್ಲ ಅಂತಜದತ್ಯುಗ್ರ ಶಾಂತ ಸ್ಥಿತಿಗೆ;
ಪ್ರತಿ ಜೀವದಲ್ಲು ಬಂಧುತ್ವ ಕಂಡು ಬದುಕುವ ಮಹಾ ಚೇತಕ್ಕೆ.
ಕೊಲ್ಲುವುದು ಅಮಾನವೀಯ ಅಪರಾಧ;
ಕೊಲ್ಲಿಸಿಕೊಳ್ಳುವುದು ಪಾಪಾತಿರೇಕ; ಕೊಲ್ಲಬಲ್ಲವನು ಕೊಲ್ಲದೇ
ಕ್ಷಮಿಸಿ ಬಿಡುವುದು ಮಾನವತ್ವದ ಪರಾಕಾಷ್ಠೆ, ಹೇಡಿಯಾಗಿ
ತದಕಿಸಿಕೊಂಡು ಅಳುತ್ತ ಕೂರುವುದು ಮಹಾಪರಾಧ.
ಜಿಗಣೆ, ಚೇಳು, ಹೆಡೆಯೆತ್ತಿ ಬಡಿವ ಘಟಸರ್ಪ;

ಮಕ್ಕಳನ್ನೆತ್ತಿಕೊಂಡು ಹೋಗಿ ತಿನ್ನುವ ತೋಳ, ಮನೆಗೇ ಬೆಂಕಿ
ಹಚ್ಚಿ ಗಹಗಹಿಸಬಲ್ಲ ಮಾನವ ಪಿಶಾಚ; ಸೈಕಲ್ ಚೈನು,
ಸಲಾಕೆ, ಲಾಠಿ, ಕಠಾರಿ ಹಿಡಿದು ಕತ್ತಲಿನಲ್ಲಿ ವಿಷಾಕ್ತ
ಅಲಗು ತಾಗಿಸಿ ತಿವಿವ, ಸಾಯಿಸುವ ನಿಶಾಚರ ನಿಕರ
ಇರುವನಕ ಪ್ರತಿಹಿಂಸೆ ಅನಿವಾರ್ಯ, ಕೈ
ಎತ್ತಬಾರದು. ನಾವು ಕೈಯೆತ್ತಿದರೆ ಹತ್ತು
ದಿಕ್ಕುಗಳು ನಡುಗಲೇ ಬೇಕು. ಒಂದೇಟು ಬಿದ್ದರೆ ಎರಡು,
ಎರಡಕ್ಕೆ ನಾಲ್ಕು, ನಾಲ್ಕಕ್ಕೆ ಹದಿನಾರು,
ಒಂದು ಹೆಣ ಬಿದ್ದರೆ ಅದಕ್ಕೆ ನೂರೊಂದು

ಬೀಳಲೇ ಬೇಕು. ಮಟ್ಟ ಮುಟ್ಟ ಬಂದ ಜಗಜಟ್ಟಿಯ ಘನತ್ವ
ಕಂಡರೇ ತತ್ತರಿಸಬೇಕು ಆತತಾಯಿ, ಹೂಂಕಾರಕ್ಕೆ
ಕುಸಿಯಬೇಕು ತಳಾತಳಕ್ಕೆ
ಅನ್ಯಾಯ, ಅಸತ್ಯ, ಅತ್ಯಾಚಾರ ಶೋಷಣೆಗಳ ವಿರುದ್ಧ
ಸಾರೋಣ ನಿರಂತರವಾದ ಧರ್ಮಯುದ್ಧ !
ಕತ್ತಲಲ್ಲೂ ಮುಳುಗದಿರಲಿ ಹಿಂದೂ ಸೂರ್ಯ,
ನಡೆಸೋಣ ನಮ್ಮ ಅವತಾರ ಕಾರ್ಯ !
ದಟ್ಟಡವಿಯಲ್ಲಿಲ್ಲ; ಇಟ್ಟು ಬಿಕ್ಕಟ್ಟುಗಳ ಕೆಟ್ಟ ಪಟ್ಟಣಗಳ ಜನಾರಣ್ಯ
ದಲ್ಲಿಯೂ ಪ್ರತಿಮನೆ ಕೂಡ ಋಷ್ಯಾಶ್ರಮ
ಮುಂದಕ್ಕೆ ಬಹು ಭಾಷಾ ಸರಸ್ವತಿಯ ಸದ್ಗ್ರಂಥಗಳ ರಾಶಿ,
ಜ್ಞಾನವಿಜ್ಞಾನಗಳ ನಿಗಮಾಗಮ;

ಹಿಂದೆ ಕೈಚಾಚಿದರೆ ಬಾರು ಮಾಡಿಟ್ಟ ಬಂದೂಕು, ಲಾಠಿ, ಕಠಾರಿ,
ವಜ್ರಕಾಯದೊಳಕ್ಕೆ ಅದಿಶೇಷಸ್ನಾಯುಗಳ ಮಣಿತ,
ಕೈ ಕರಾಟೆಯ ಚಕ್ರಗತ್ತು, ಯೋಗಿಯ ನಿಯತ್ತು;
ಒಳಗೆ ಸಂಸ್ಥಾಪನಾನಿಷ್ಠ ಆದಿನಾರಾಯಣನ ಯೋಗ ನಿದ್ರೆಯ ಚಿತ್ತು;
ದುಷ್ಟಶಿಕ್ಷಣ, ಶಿಷ್ಟ ರಕ್ಷಣೆಯ ಮಸಲತ್ತು;
ಪರಮೇಶ್ವರಿಯ ಶಾಂತದುರ್ಗರೂಪದ ಮಹತ್ತು;
ಕೈ ಕಠಾರಿಗೆ ವಿವೇಕದ ಶರತ್ತು;
ಕಳೆಕಿತ್ತು ಶುಭವನ್ನೊಂದ ಬೆಳೆಯುವ ಶರಾರತ್ತು;
ನವ್ಯ ಹಿಂದುತ್ವದ ಅನ್ಯೂನ ಶಿಸ್ತು.
ವಿವೇಕವೀರನ ಮಹಾ ನಾರಾಯಣೀ ಸೇನೆ,

ಶಾಂತಿ ಭ್ರಾತೃತ್ವ ಸಮತ್ವದ ನಿಶಾನೆ.
ಆಗಬೇಕಿದೆ ಇಲ್ಲಿ ಶಾಂತಿ ಸ್ಥಾಪನೆ,
ದುಡಿಯೋಣ ಅದಕ್ಕಾಗಿ ಒಂದೇ ಸಮನೆ !

**ಬಹಿಷ್ಕಾರವಲ್ಲ. ಆದರ – ಹಿಂದು ಸಮನ್ವಯ:** ಈ ರೀತಿಯ ಸಮನ್ವಯ ಹೇಗೆ ಬಂದಿತು? ಹೇಗೆ ಬರಬಹುದು? ಹಿಂದು ಧರ್ಮ ಯಾವುದೇ ಒಂದು ಪದ್ಧತಿ, ಒಂದು ರೂಢಿ, ಒಂದು ಕ್ರಮಗಳನ್ನು ನಂಬಿ ನಿಂತಿಲ್ಲ. ಮಾನವನ ಸ್ವಭಾವ ಬಹುವಿಧ. ಅದಕ್ಕೆ ತಕ್ಕಂತೆ ವ್ಯವಸ್ಥೆಗಳು–ರೂಢಿಗಳು. ಆದ್ದರಿಂದ ಯಾವುದನ್ನೂ ದೂರಬಾರದು, ದೂರ ಇಡಬಾರದು. ಪ್ರತಿಯೊಂದು ನೀತಿ–ನಡವಳಿಕೆಗಳನ್ನು ಸಹಾನುಭೂತಿಯಿಂದ ನೋಡಿ ವಿಮರ್ಶಿಸಿ ಅಂಗೀಕರಿಸುವುದು; ಅಕಸ್ಮಾತ್ ಅಂಗೀಕರಿಸಲು ಅಸಾಧ್ಯವೆನಿಸಿದರೆ ಬಹಿಷ್ಕಾರ ಹಾಕದೆ ಅದರ ಪಾಡಿಗೆ ಅದನ್ನು ಗೌರವದಿಂದಿರಲು ಬಿಡುವುದು.

ರೂಢಿಗೆ ಬಂಧಿತವಾಗದ ಪ್ರಗತಿಯ ಮನೋಭಾವ: ಹಿಂದೂ ಧರ್ಮದ ಇನ್ನೊಂದು ಮುಖ ಇದು. ರೂಢಿಗೇ ಕಟ್ಟುಬೀಳದೆ ವಿಕಾಸವನ್ನೂ ಬದಲಾವಣೆಯನ್ನೂ ತರುವುದು. ಬದಲಾವಣೆ ನೈಸರ್ಗಿಕವಾಗಿರಬೇಕು ಸಹಜವಾಗಿರಬೇಕು. ಹೊರಗಿನ ಒತ್ತಾಯದಿಂದ ಹೇರಿದುದು ಆಗಿರಬಾರದು. ಸದಾ ಗತಿಶೀಲವೂ ಪ್ರಗತಿಪರವೂ ಆದ ಮನೋಭಾವ ಇದು. ಕಾಲಕಾಲಕ್ಕೆ ತಕ್ಕಂತೆ ಜೀವನದ ಮೂಲನಂಬಿಕೆಗಳನ್ನು ನಿಯಮಗಳನ್ನು ಬಿಡದೆ, ಎಲ್ಲ ರೀತಿಯ ಪರಿವರ್ತನೆಗಳನ್ನು ಹಿಂದುಧರ್ಮ ರೂಪಿಸಿದೆ.

# ವಿಶ್ವ ಹಿಂದು ಪರಿಷತ್

## (ಸ್ಥಾಪನೆ, ಹಿನ್ನೆಲೆ, ಧ್ಯೇಯೋದ್ದೇಶಗಳು)




ವಿಶ್ವ ಹಿಂದು ಪರಿಷತ್ತಿನ ಸ್ಥಾಪನೆಯಾದುದು ಕ್ರೋಧಿ ಸಂವತ್ಸರದ (ವಿಕ್ರಮ ಶಕ 2021) ಶ್ರಾವಣ ಕೃಷ್ಣ ಅಷ್ಟಮಿಯಂದು, (ಶ್ರೀಕೃಷ್ಣ ಜನ್ಮಾಷ್ಟಮಿ, 29–8–1964) ಮುಂಬಯಿಯಲ್ಲಿನ ಪವಾಯಿಯಲ್ಲಿರುವ ಸ್ವಾಮಿ ಚಿನ್ಮಯಾನಂದರ ಆಶ್ರಮ ಸಾಂದೀಪನಿ ಸಾಧನಾಲಯದಲ್ಲಿ. ಅಂದು ಸ್ಥಾಪಕ ಸದಸ್ಯರಾಗಿ ಸಮಾಲೋಚನೆಗಾಗಿ ಸೇರಿದ್ದವರು ಕೆಲವು ಧರ್ಮಾಚಾರ್ಯರು, ಸಾಮಾಜಿಕ ನಾಯಕರು ಹಾಗೂ ಚಿಂತಕರು – ಸುಮಾರು 40 ಮಂದಿ. ಅವರಲ್ಲಿ ಸ್ವಾಮಿ ಚಿನ್ಮಯಾನಂದರಲ್ಲದೆ, ರಾಷ್ಟ್ರಸಂತ ತುಕುಡೋಜಿ ಮಹಾರಾಜ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂದಿನ ಸರಸಂಘಚಾಲಕ ಶ್ರೀ ಮಾಧವ ಸದಾಶಿವ ಗೋಲ್ವಲ್ಕರ್ (ಶ್ರೀ ಗುರೂಜಿ), ಭಾರತೀಯ ವಿದ್ಯಾ ಭವನದ ಸ್ಥಾಪಕ ಶ್ರೀ ಕೆ.ಎಂ. ಮುನ್ಶಿ, ಸಿಕ್ಖ್ ನಾಯಕ ಮಾಸ್ಟರ್ ತಾರಾಸಿಂಗ್, ಹಿಂದು ಮಹಾಸಭೆಯ ನಾಯಕ ಶ್ರೀ ಜಿ.ವಿ. ದೇಶಪಾಂಡೆ ಮೊದಲಾದವರು ಹೆಸರಿಸಬಹುದಾದ ಕೆಲವರು. ಈ ಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದವರು ಆಗ ಬೆಂಗಳೂರಿನ ನಗರ ಸಂಘಚಾಲಕರಾಗಿದ್ದ ಡಾ॥ ಎಂ.ಎ. ನರಸಿಂಹಾಚಾರ್ ಅವರು. ಆಫ್ರಿಕಾದ ನೈರೋಬಿಯಿಂದ ಮತ್ತು ಕೆರೆಬಿಯನ್ ಸಮೂಹ ದ್ವೀಪಗಳಲ್ಲಿ ಒಂದಾದ ಟ್ರಿನಿದಾದ್‌ನಿಂದ ಒಬ್ಬೊಬ್ಬರು ಪಾಲ್ಗೊಂಡಿದ್ದರು. ಇವರೆಲ್ಲರನ್ನು ಒಂದೆಡೆ ಸೇರಿಸುವುದರಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವರು 'ಹಿಂದುಸ್ಥಾನ ಸಮಾಚಾರ್' ಎಂಬ ಸುದ್ದಿ ಸಂಸ್ಥೆಯ ಸ್ಥಾಪಕರಾದ ಶ್ರೀ ಶಿವರಾಮ ಶಂಕರ ಅಪ್ಟೆ ಅವರು.

ಎರಡು ದಿನಗಳ ಕಾಲ ನಡೆದ ಈ ಸಭೆಯಲ್ಲಿ ಮುಕ್ತ ಚರ್ಚೆ ಮತ್ತು ವಿಚಾರ ವಿನಿಮಯ ನಡೆದು ವಿಶ್ವ ಹಿಂದು ಪರಿಷದ್ ಎಂಬ ಹೆಸರಿನ ಒಂದು ನೋಂದಾಯಿತ ಸಂಘಟನೆಯಡಿಯಲ್ಲಿ ವಿಶ್ವದ ಸಮಸ್ತ ಹಿಂದುಗಳನ್ನು ಒಂದುಗೂಡಿಸಬೇಕೆಂದು ಸರ್ವಾನುಮತಿಯಿಂದ ನಿರ್ಧಾರವಾಯಿತು.

ಇಲ್ಲಿ ಏಕೆ ವಿಶ್ವ ಹಿಂದು ಪರಿಷತ್ತಿನ ಸ್ಥಾಪನೆ ಅಗತ್ಯಬೇಕೆನಿಸಿತೆಂಬುದನ್ನು ತುಸು ವಿವರವಾಗಿ ತಿಳಿಸುವುದು ಉಚಿತವಾದೀತು. ಸಂಘಕಾರ್ಯದ ವಿಸ್ತಾರ ಮತ್ತು ದೃಢೀಕರಣಕ್ಕಾಗಿ ದೇಶಾದ್ಯಂತ ಪ್ರವಾಸ ಮಾಡುತ್ತಿದ್ದವರು ಶ್ರೀ ಗುರೂಜಿಯವರು. ತಮ್ಮ ಪ್ರವಾಸದಲ್ಲಿ ಅವರು ಅವಕಾಶವಾದಾಗಲೆಲ್ಲ ಅಲ್ಲಿನ ವಿವಿಧ ಮತ, ಪಂಥಗಳ ಧರ್ಮಾಚಾರ್ಯರನ್ನು ಭೇಟಿಯಾಗುತ್ತಿದ್ದರು. ಅವರೆಲ್ಲರ ಬಳಿ ಶ್ರೀ ಗುರೂಜಿಯವರು ಸಾಮಾನ್ಯವಾಗಿ ಹೇಳುತ್ತಿದ್ದ ಒಂದು ವಿಚಾರ.

## ಜಗತ್ತನ್ನೇ ಮೇಲೆತ್ತುವ ಆಕಾಂಕ್ಷೆ:

ಸರ್ವಸಮಾದರ ಭಾವದ ಮುಂದಿನ ಹೆಜ್ಜೆಯೇ "ಸರ್ವರೂ ಮುಂದು ಹೋಗಬೇಕು, ಬೆಳೆಯಬೇಕು' ಎಂಬ ಮನೋಭಿಲಾಷೆ. ಮಾನವ ಕೇವಲ ಪಶು ಅಲ್ಲ; ಪಾಪಿಯೂ ಅಲ್ಲ. ಅವನೊಬ್ಬ ದೈವೀ ಶಿಶು. ದೈವೀ ಅಂಶ ಅವನಲ್ಲಿದೆ. ಅದನ್ನು ಜಾಗೃತಗೊಳಿಸಿದಾಗ ಅವನು ಜಗದ್ವಂದ್ಯನಾಗುತ್ತಾನೆ. ನರನಿರಲಿ, ವಾನರನಿರಲಿ ನಾರಾಯಣ ಆಗಬಲ್ಲ. ಆ ರೀತಿ ಪ್ರತಿ ವ್ಯಕ್ತಿ ತಾನಿರುವ ಸ್ಥಿತಿಯಿಂದ ಭೌತಿಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ ಮೇಲೇಳಬೇಕು. ಇದನ್ನೆ ಹಿಂದು ಧರ್ಮ ತನ್ನ ಹೊಣೆಯಾಗಿ ಸ್ವೀಕರಿಸಿ 'ಕೃಣ್ವಂತೋ ವಿಶ್ವಮಾರ್ಯಾಂ' ಎಂದು ಸಾರಿತು. ಜಗತ್ತಿನ ಜನರನ್ನೆಲ್ಲ ಆರ್ಯ ಶ್ರೇಷ್ಠ, ಸಜ್ಜನ, ಗುಣಶೀಲ, ಗುಣಗ್ರಾಹಿ, ಗುಣ ಪೂಜ-ಕರನ್ನಾಗಿ ಮಾಡುವ ಹೊಣೆಯನ್ನೂ ಸ್ವೀಕ-ರಿಸಿತು. ಅದಕ್ಕಾಗಿಯೇ ಹಿಂದು ಧರ್ಮದ ಪ್ರಕಾರ ಜಗತ್ತಿನಲ್ಲಿ ಮಾನವನ ಯಾತ್ರೆ ಅಸತ್ಯದಿಂದ ಸತ್ಯದ ಕಡೆಗಲ್ಲ. ಒಂದು ಸತ್ಯದಿಂದ ಇನ್ನೊಂದು ಹೆಚ್ಚಿನ ಸತ್ಯದ ಕಡೆಗೆ.

ಶ್ರೀರಾಮ ಹನುಮಂತರಿಗೆ ಸಂಬಂಧಿಸಿದ ದೃಷ್ಟಾಂತ ಒಂದಿದೆ. ಶ್ರೀರಾಮ ಹನುಮಂತನನ್ನು 'ನನ್ನ ನಿನ್ನ ಸಂಬಂಧ ಹೇಗೆ? ನನ್ನನ್ನು ಏನೆಂದು ಭಾವಿಸುವೆ?' ಎಂದು ಪ್ರಶ್ನಿಸಿದನಂತೆ. ಹನುಮಂತ ಶಾಂತನಾಗಿ ದೇಹ ಬುದ್ಧ್ಯಾತು ದಾಸೋಹಂ ಜೀವ ಬುದ್ಧ್ಯಾತ್ವದಂಶತಃ ।

ಆತ್ಮಬುದ್ಧ್ಯಾ ತ್ವಮೇವಾಹಂ ಇತಿ ಮೇ

ನಿಶ್ಚಯಾ ಮತಿಃ ॥

"ನನ್ನ ಅರಿವು ಸ್ಪಷ್ಟವಾಗಿದೆ. ಶರೀರದ ದೃಷ್ಟಿಯಿಂದ ನಾನು ನಿನ್ನ ದಾಸ, ಜೀವಸಂಬಂಧದಲ್ಲಿ ನಾನು ನಿನ್ನ ಅಂಶ. ಆತ್ಮಭಾವದಲ್ಲಿ ನಾನೇ ನೀನು-ನೀನೇ ನಾನು" ಎಂದು ಉತ್ತರಿಸಿದನಂತೆ. ಆಯಾ ಪರಿಸ್ಥಿತಿ, ಭಾವನೆಗಳಿಗೆ ತಕ್ಕಂತೆ ಒಬ್ಬನೇ ವ್ಯಕ್ತಿ ದ್ವೈತಿ, ವಿಶಿಷ್ಟಾದ್ವೈತಿ, ಅದ್ವೈತಿ ಆಗಿರಬಹುದು. ಇನ್ನೂ ಬೇರೆ ಬೇರೆ ವ್ಯಕ್ತಿಗಳು ತಮ್ಮ ಅಭಿರುಚಿ ಅವಶ್ಯಕತೆಗಳಿಗೆ ತಕ್ಕಂತೆ ಸತ್ಯವನ್ನರಿಯುವುದು ಅಪರಾಧವಲ್ಲ. ಅವರರಿತ ಸತ್ಯ ಭ್ರಮೆಯೂ ಅಲ್ಲ ಎಂಬುದು ಸರ್ವರಿಗೂ ವಿಶ್ವಾಸ ನೀಡಿ ಹೊಸ ಪ್ರಜ್ಞಾ ಲೋಕವನ್ನರಸುವ ಸಾಹಸ ನೀಡುತ್ತದೆ.

ಹಿಂದು ಸಮಾಜದಲ್ಲಿ ಧರ್ಮಾಚಾರ್ಯರ ಬಗ್ಗೆ ಅಪಾರವಾದ ಶ್ರದ್ದೆಯಿದೆ. ಅವರ ಆದೇಶಗಳಿಗೆ ಸಮಾಜ ಮಾನಸದಲ್ಲಿ ಸಹಜವಾದ ಮನ್ನಣೆಯಿದೆ. ಆದರೆ ಧರ್ಮಾಚಾರ್ಯರು ಸಾಮಾನ್ಯವಾಗಿ ತಂತಮ್ಮ ಮತ, ಸಂಪ್ರದಾಯಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿರುವುದು ಪ್ರಸ್ತುತ ವಾಸ್ತವಿಕತೆ. ಅವರು ವ್ಯಾಪಕವಾದ ಸಾಮಾಜಿಕ ದೃಷ್ಟಿ ಬೆಳೆಸಿಕೊಂಡು, ಒಟ್ಟು ಹಿಂದು ಹಿತದ ಸಲುವಾಗಿ ಮುಂದಾಗಬೇಕಾದ ಅಗತ್ಯವಿದೆ. ತಮ್ಮ ಸೀಮಿತ ಮತ, ಸಂಪ್ರದಾಯಗಳ ಅಡ್ಡಗೋಡೆಗಳನ್ನು ಉರುಳಿಸಿ, ದೃಷ್ಟಿಯನ್ನು ವಿಶಾಲಗೊಳಿಸಿ, ಅವರು ಸಂಪೂರ್ಣ ಹಿಂದು ಸಮಾಜದ ಏಕತೆಯನ್ನು ಪ್ರಸ್ತಾವಿಸಿದಲ್ಲಿ ಹಿಂದು ಸಂಘಟನೆಯ ಕಾರ್ಯಕ್ಕೂ ರಭಸ ಲಭಿಸುವುದು. ಅದೇ ರೀತಿಯಲ್ಲಿ ಅಸ್ಪೃಶ್ಯತೆಯ ಆಚರಣೆಯನ್ನು ಧಾರ್ಮಿಕವಾಗಿ ತಪ್ಪೆಂದು ಘೋಷಿಸಿ, ಆ ಸಾಮಾಜಿಕ ವಿಕೃತಿಯನ್ನು ಸರಿಪಡಿಸಲು ಅವರು ಸ್ವತಃ ಮುಂದಾದಲ್ಲಿ ಸಮಾಜವೂ ಅವರನ್ನು ಅನುಸ-ರಿಸುವುದು.

ಶ್ರೀ ಗುರೂಜಿಯವರ ಮನವನ್ನು ಕಾಡುತ್ತಿದ್ದ ಇನ್ನೊಂದು ಚಿಂತೆ ವ್ಯಾಪಕವಾಗಿ ನಡೆಯುತ್ತಿದ್ದ ಮತಾಂತರದ್ದು ಮತ್ತು ಈಗಾಗಲೇ ಮತಾಂತರಗೊಂಡು ಅಹಿಂದುಗಳೆನಿಸಿಕೊಳ್ಳುವಂಥ ಕೋಟ್ಯಂತರ ಜನರು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ನಮಗೆ ಒಡ್ಡುತ್ತಿರುವ ಸವಾಲಿನದ್ದು. ವಾಸ್ತವಿಕವಾಗಿ ನಮ್ಮ ದೇಶದಲ್ಲಿನ ಅಹಿಂದುಗಳೆನಿಸಿಕೊಳ್ಳುವವರೆಲ್ಲ ಪೂರ್ವದಲ್ಲಿ ಹಿಂದುಗಳಾಗಿದ್ದವರ ಸಂತಾನರಲ್ಲದೆ ಹೊರಗಿನವರೇನಲ್ಲ. ದಾಸ್ಯ ಕಾಲದಲ್ಲಿ ಧಾರ್ಮಿಕ ಸ್ವಾತಂತ್ರ ಕಳೆದು ಮತಾಂತರಿತರಾದ ನಮ್ಮ ಬಾಂಧವರ ಮೇಲಾದ ಪರಕೀಯ ಭ್ರಷ್ಟ ಸಂಸ್ಕಾರಗಳಿಂದಾಗಿಯೇ ಅವರ ಇಂದಿನ ಪೀಳಿಗೆಯವರು ಮಾತೃಸಮಾಜಕ್ಕೆ ವಿರೋಧಿಗಳಾಗಿ ವರ್ತಿಸುತ್ತಿದ್ದಾರೆ. ಈಗ ಸ್ವಾತಂತ್ರ್ಯ ಬಂದಿರುವುದರಿಂದ ಅವರೆಲ್ಲರನ್ನು ಪುನಃ ಹಿಂದುಗಳಾಗಿ ಪರಿವರ್ತಿಸುವುದು ಅವರ, ಒಟ್ಟು ಹಿಂದು ಸಮಾಜದ ಮತ್ತು ದೇಶದ ಹಿತದೃಷ್ಟಿಯಿಂದಲೂ ಅಗತ್ಯ.

ನಮ್ಮವರೇ ಆಗಿರುವ ಈ ಬಾಂಧವರನ್ನು ಮರಳಿ ಮಾತೃಧರ್ಮಕ್ಕೆ ತಂದುಕೊಳ್ಳಬೇಕಾದುದು ಹಿಂದು ಸಮಾಜದ ಕರ್ತವ್ಯವೂ ಆಗಿದೆ. ಅಹಿಂದುಗಳೆನಿಸಿಕೊಳ್ಳುವವರಿಂದ ಈಗ ಆಗುತ್ತಿರುವ ಸಮಸ್ಯೆಗೆ ಅಂತಿಮ ಪರಿಹಾರವಿರುವುದೂ ಅದರಲ್ಲೇ.


ಅವರನ್ನುಪುನಃಮಾತೃಧರ್ಮಕ್ಕೆತಂದುಕೊಳ್ಳುವುದರಲ್ಲಿ ಅಗ್ರ ಪಾತ್ರ ನಿರ್ವಹಿಸಬೇಕಾದವರು ಧರ್ಮಾಚಾರ್ಯರೇ. ಪರಾವರ್ತನದ ಈ ಕೆಲಸವನ್ನು ಆರ್ಯಸಮಾಜ, ಮಸೂರಾಶ್ರಮದಂಥ ಕೆಲವು ಸಂಸ್ಥೆಗಳು ದೀರ್ಘಕಾಲದಿಂದ ನಡೆಸುತ್ತಿದ್ದರೂ, ಸರಕಾರದಲ್ಲಿ ನೋಂದಾಯಿತವಾದ ಸಂಸ್ಥೆಯಿಂದಾಗುವಂಥ ಪರಾವರ್ತನಕ್ಕೆ ಮಾತ್ರ ಕಾನೂನಿನ ಸಮ್ಮತಿ ಸಿಗುವುದೆಂಬುದು ವಾಸ್ತವಿಕತೆ. ಅದಕ್ಕಾಗಿ ಪರಾವರ್ತನಕ್ಕೆ ವ್ಯಾಪಕ ಪ್ರಮಾಣದಲ್ಲಿ ಮುಂದಾಳುತನ ನೀಡುವಂಥ ಧರ್ಮಾಚಾರ್ಯರಿಂದ ಕೂಡಿರುವ ಮತ್ತು ಅದಕ್ಕೆ ಕಾನೂನಿಗನುಗುಣವಾಗಿ ಅಧಿಕೃತತೆಯನ್ನು ಒದಗಿಸಬಲ್ಲ ನೋಂದಾಯಿತ ಸಂಸ್ಥೆಯೊಂದನ್ನು ಹುಟ್ಟು ಹಾಕಬೇಕೆಂಬ ಯೋಜನೆ ಆಗ ಶ್ರೀ ಗುರೂಜಿಯವರದಾಗಿತ್ತು.

1963ರಲ್ಲಿ ಶ್ರೀ ಗುರೂಜಿಯವರನ್ನು ಭೇಟಿಯಾಗಲು ಟ್ರಿನಿದಾದ್‌ನಿಂದ ಶ್ರೀ ಶಂಭುನಾಥ ಕಪಿಲದೇವ್ ಎಂಬ ಮಹನೀಯರೊಬ್ಬರು ಬಂದಿದ್ದರು. ಅಲ್ಲಿನ ಸಂಸತ್ಸದಸ್ಯರಾಗಿದ್ದವರು ಅವರು. ಆ ದೇಶದಲ್ಲಿ ಭಾರೀ ಪ್ರಮಾಣದಲ್ಲಿ ಹಿಂದುಗಳಿದ್ದಾರೆ. ಅಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಗಣನೀಯ ಸ್ಥಾನಮಾನಗಳಿಸಿಕೊಂಡೂ ಇದ್ದಾರೆ. ಅಷ್ಟೇ ಅಲ್ಲ ನೂರಾರು ವರ್ಷಗಳಿಂದ ಅಲ್ಲಿ ನೆಲೆಸಿರುವ ಹಿಂದುಗಳು ತಮ್ಮ ಧಾರ್ಮಿಕ ನಿಷ್ಠೆಯನ್ನು ಈಗಲೂ ಉಳಿಸಿಕೊಂಡಿದ್ದಾರೆ. ಆದರೆ ತಮ್ಮ ಈ ನಿಷ್ಠೆಯನ್ನು ಪೋಷಿಸಿ ಬೆಳೆಸಲು ತಮಗಲ್ಲಿ ಅವಕಾಶಗಳಿಲ್ಲ ಎಂಬುದೇ ಅವರಿಗಿರುವ ಕೊರಗು. ತಮ್ಮ ಭಾವೀ ಪೀಳಿಗೆಗೆ ಉತ್ತಮ ಹಿಂದು ಸಂಸ್ಕಾರಗಳನ್ನು ನೀಡುವಂಥ ವ್ಯವಸ್ಥೆ ಅಲ್ಲಿ ಅವರಿಗಿಲ್ಲ. ಹಿಂದು ಹಬ್ಬಗಳನ್ನು ಆಚರಿಸಬೇಕಾದಾಗ ಪೂಜಾ ವಿಧಿಗಳನ್ನು ಹೇಳಿಕೊಡುವವರಿಲ್ಲ. ನಾಮಕರಣ, ವಿವಾಹ, ಅಂತ್ಯ ಸಂಸ್ಕಾರಗಳಂಥ ವಿಧಿಗಳಿಗೂ ಚರ್ಚಿನ ಅಭಿಪ್ರಾಯ, ನೆರವು ಪಡೆಯಬೇಕಾದ ಪಾಡು ಅವರದು. ಅದಕ್ಕಾಗಿ ಭಾರತದಿಂದ ವೈದಿಕರು, ಸಂಸ್ಕೃತ ವಿದ್ವಾಂಸರು ಬಂದು ತಮ್ಮ ಅಗತ್ಯಗಳನ್ನು ಪೂರೈಸಬೇಕು, ತಮಗೆ ಶಿಕ್ಷಣ ನೀಡಬೇಕೆಂಬುದು ಅವರ ತೀವ್ರ ಇಚ್ಛೆ. ಈ ಬಗ್ಗೆ ಭಾರತ ಸರಕಾರವನ್ನು ಅವರು ಕೇಳಿಕೊಂಡಾಗ ತನ್ನ ಜಾತ್ಯತೀತ ನೀತಿಯ ನೆಪವೊಡ್ಡಿ ಇಲ್ಲಿನ ಸರಕಾರ ಅವರ ಬೇಡಿಕೆಯನ್ನು ತಿರಸ್ಕರಿಸಿತ್ತು. ಹೀಗಾಗಿ ಶ್ರೀ ಕಪಿಲದೇವ್ ಅವರು ತಮ್ಮ ಮನದ ಅಳಲನ್ನು ಶ್ರೀ ಗುರೂಜಿಯವರಿಗೆ ಅವಗತ ಮಾಡುವ ಸಲುವಾಗಿ ಅವರನ್ನು ಭೇಟಿಯಾಗಿದ್ದರು.


ಟ್ರಿನಿದಾದ್‌ನಂತೆ ಇನ್ನೂ ನೂರಾರು ದೇಶಗಳಲ್ಲಿ ಹಿಂದುಗಳಿದ್ದಾರೆ. ಸುಮಾರು ಎರಡು ಕೋಟಿಗೂ ಮೀರಿ ಹಿಂದುಗಳು ಭಾರತದ ಹೊರಗಡೆ ಇತರ ದೇಶಗಳಲ್ಲಿದ್ದಾರೆ ಎಂಬುದು ಒಂದು ಅಂದಾಜು. ಮಾರಿಷಸ್, ಫಿಜಿಯಂಥ ದೇಶಗಳಲ್ಲಿ ಜನಸಂಖ್ಯೆಯ ಪ್ರಮಾಣದಲ್ಲಿ ಮತ್ತು ಆರ್ಥಿಕವಾಗಿ, ಸಾಮಾಜಿ–ಕವಾಗಿಯೂ ಅವರದೇ ಪ್ರಾಬಲ್ಯವಿದೆ. ಆದರೆ ಎಲ್ಲ ದೇಶಗಳಲ್ಲಿರುವ ಹಿಂದುಗಳ ಮುಂದಿರುವ ಸಮಸ್ಯೆ ಸಹ ಟ್ರಿನಿದಾದ್‌ನಲ್ಲಿರುವಂತೆಯೇ. ತಮಗೆ ಮತ್ತು ತಮ್ಮ ಭಾವೀ ಪೀಳಿಗೆಗೆ ಹಿಂದುತ್ವದ ಸಂಸ್ಕಾರಗಳನ್ನು ನೀಡುವವರು ಯಾರು ಎಂಬುದೇ ಅವರನ್ನು ಭೂತಾಕಾರವಾಗಿ ಕಾಡುತ್ತಿರುವ ಚಿಂತೆ. ವಾಸ್ತವಿಕವಾಗಿ ಅವರೆಲ್ಲ ಉತ್ತಮ ಹಿಂದುಗಳಾಗಿ ಉಳಿದಲ್ಲಿ ಭಾರತಕ್ಕೂ ಬಹುದೊಡ್ಡ ಶಕ್ತಿಯಾಗಬಲ್ಲರು. ಆದ–'ರೆ ಭಾರತ ಸರಕಾರಕ್ಕೆ ಆ ದೃಷ್ಟಿಯೇ ಇಲ್ಲದಿರುವುದು

## ಸಂಘರ್ಷವಲ್ಲ–ಸಮನ್ವಯ:


**ಹಿಂದು ಧರ್ಮವು ಜಗತ್ತಿನ ಎಲ್ಲ ಸಂಗತಿಗಳಲ್ಲೂ ಸಮನ್ವಯವನ್ನು ಸಾಧಿಸಲು ಯತ್ನಿಸಿದೆ ಸಾಧಿಸಿದೆ. ಪರಸ್ಪರ ಕಡು ವಿರೋಧ ಎನ್ನಬಹುದಾದ ಸಂಗತಿಗಳನ್ನೂ ಜೋಡಿಸಿದೆ. ಹಿಂದೂ ಧರ್ಮದಲ್ಲಿ ಆಸ್ತಿಕನೂ ಇರಬಲ್ಲ, ನಾಸ್ತಿಕನೂ ಇರಬಲ್ಲ. ವಿಗ್ರಹ ಪೂಜಕನೂ ಇರಬಲ್ಲ. ಅದನ್ನು ವಿರೋಧಿಸುವವನೂ ಇರಬಹುದು. ರಾಜ್ಯವು ಪರಮಾತ್ಮ ನಮಗೆ ಕೊಟ್ಟ ಆಸ್ತಿ ಎನ್ನುವವರು ಇರುವಂತೆ, ಅಧಿಕಾರ ಪ್ರಜೆಗಳಿತ್ತ ವರ, ನಂಬಿಕೆ ಎನ್ನುವವರೂ ಇದ್ದಾರೆ. ಗಂಡು ಮಕ್ಕಳಿಗೆ ಆಸ್ತಿ ಕೊಡುವ ವವಸ್ಥೆಯೊಡನೆ ಹೆಂಗಸರಿಗೆ ಆಸ್ತಿ ನೀಡುವ ವ್ಯವಸ್ಥೆ ಇದೆ. ಮದುವೆಯಾದ ನಂತರ ಗಂಡನ ಮನೆಗೆ ಹೆಂಡತಿ ಹೋಗುವಂತೆ ಹೆಂಡತಿಯ ಮನೆಗೆ ಗಂಡ ಸೇರುವ ಪದ್ಧತಿಯೂ ಇದೆ.**



ಪರಮಪೂಜ್ಯ ಶ್ರೀ ಗುರೂಜಿ



ಪೂಜ್ಯ ಶ್ರೀ ಚಿನ್ಮಯಾನಂದರು



ಸಂತ ತುಕಡೋಜಿ ಮಹರಾಜ

ದುರ್ದೈವ. ಈ ಹಿನ್ನೆಲೆಯಲ್ಲಿ ವಿಶ್ವವ್ಯಾಪಿಯಾಗಿ ತನ್ನ ಕಾರ್ಯವ್ಯಾಪ್ತಿಯುಳ್ಳ ಒಂದು ಹಿಂದು ಸಂಸ್ಥೆಯಿದ್ದಲ್ಲಿ ವಿದೇಶಸ್ಥ ಹಿಂದುಗಳಿಗೆ ಉತ್ತಮ ಹಿಂದು ಸಂಸ್ಕಾರಗಳನ್ನು ನೀಡುವ ವ್ಯವಸ್ಥೆ ಮಾಡುವುದು ಸುಲಭ ಎಂದು ಶ್ರೀ ಗುರೂಜಿಯವರಿಗೆ ಅನಿಸಿತ್ತು. ಶ್ರೀ ಶಂಭುನಾಥ ಕಪಿಲದೇವರ ಭೇಟಿ ಅವರ ಈ ಅನಿಸಿಕೆಗೆ ಇನ್ನಷ್ಟು ಇಂಬು ನೀಡುವಂಥದಾಯಿತು.

ಇನ್ನೊಂದು ಕಡೆ 50ರ ದಶಕದ ಉತ್ತರಾರ್ಧದಲ್ಲಿ ಸ್ವಾಮಿ ಚಿನ್ಮಯಾನಂದರು ‘ಗೀತಾಜ್ಞಾನ ಯಜ್ಞ’ವೆಂಬ ಹೆಸರಲ್ಲಿ ದೇಶಾದ್ಯಂತ ಪ್ರವಚನಗಳನ್ನು ನಡೆಸಲಾರಂಭಿಸಿದ್ದರು. ಸುಲಲಿತವಾದ ಆಂಗ್ಲ ಭಾಷೆಯಲ್ಲಿ ಮಾಡಲಾಗುತ್ತಿದ್ದ ಪ್ರವಚನಗಳ ಮೂಲಕ ಅವರು ಹಿಂದುಗಳಲ್ಲಿ – ವಿಶೇಷವಾಗಿ ನಗರೀಯ ಪ್ರದೇಶದ ಆಂಗ್ಲ ಭಾಷಾ ವಿಭೂಷಿತರ ಮನದ – ಹಿಂದುತ್ವದ ಕುರಿತ ಕೀಳರಿಮೆಯನ್ನು ನಿವಾರಿಸಿ, ಹಿಂದು ಸಂಸ್ಕೃತಿ, ಆರ್ಷ ವೈದಿಕ ನಂಬಿಕೆಗಳು ಇವುಗಳ ಶ್ರೇಷ್ಠತೆಯ ಅರಿವನ್ನು ಬಡಿದೆಬ್ಬಿಸಿದ್ದರು. ಆಂಗ್ಲ ಭಾಷೆ ಮತ್ತು ಅಲ್ಲಿನ ಸಂಸ್ಕೃತಿಯೇ ಶ್ರೇಷ್ಠವೆಂಬ ಭ್ರಮೆಯನ್ನು ದೂರಗೊಳಿಸಿ ಹಿಂದುತ್ವದ ಕುರಿತು ಯೋಚಿಸುವ ರೀತಿಯನ್ನೇ ಬದಲಿಸಿದ್ದರು. ಅವರಿಂದಾಗಿ ಎಲ್ಲರಲ್ಲೂ ಹಿಂದುತ್ವದ ಸ್ವಾಭಿಮಾನ ಗರಿಗೆದರಲಾರಂಭಿಸಿತ್ತು. ವಿದೇಶಗಳಲ್ಲೂ ನಡೆಯುತ್ತಿದ್ದ ಸ್ವಾಮೀಜಿಯವರ ಗೀತಾಜ್ಞಾನ ಯಜ್ಞದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಲ್ಲಲ್ಲಿನ ಹಿಂದುಗಳು ಮತ್ತು ಸ್ಥಾನೀಯ ನಾಗರಿಕರು ಸಹ ಪಾಲ್ಗೊಳ್ಳುತ್ತಿದ್ದರು. ತಮ್ಮ ಅನುಯಾಯಿಗಳಿಗಾಗಿ ‘ಚಿನ್ಮಯಾ ಮಿಶನ್’ ಎಂಬ ಸಂಸ್ಥೆಯೊಂದನ್ನಂತೂ ಸ್ವಾಮೀಜಿಯವರು ಆಗಲೇ ಸ್ಥಾಪಿಸಿಯಾಗಿತ್ತು. ಆದರೆ ಇನ್ನೂ ವ್ಯಾಪಕವಾದ ವೈಶ್ವಿಕ ಮಟ್ಟದ ಹಿಂದು ಸಂಸ್ಥೆಯೊಂದನ್ನು ಕಟ್ಟಬೇಕೆಂಬ ವಿಚಾರ ಅವರ ಮನದಲ್ಲೂ ಅಂಕುರಿಸಿದುದು ಸಹಜ.

ಇದೇ ಸಂದರ್ಭದಲ್ಲಿ ‘ಹಿಂದುಸ್ಥಾನ ಸಮಾಚಾರ್’ ಎಂಬ ಹೆಸರಲ್ಲಿ ಭಾರತ ಮೂಲದ ಸುದ್ದಿ ಸಂಸ್ಥೆಯೊಂದನ್ನು ಸ್ಥಾಪಿಸಿದ ಶ್ರೀ ಶಿವರಾಮ ಶಂಕರ ಆಪ್ಟೆ (ದಾದಾಸಾಹೇಬ ಆಪ್ಟೆ) ಅವರು – ಸಂಘದ ಹಿರಿಯ ಪ್ರಚಾರಕರು – ಸಹ ಸಾಂಸ್ಥಿಕ ಕೆಲಸಗಳಿಗಾಗಿ ಹಲವಾರು ವಿದೇಶಗಳಲ್ಲಿ ಓಡಾಡುತ್ತಿದ್ದರು. ತಾವು ಹೋದಲ್ಲೆಲ್ಲಾ ಅವರು ಅಲ್ಲಲ್ಲಿನ ಪ್ರತಿಷ್ಠಿತ ಹಿಂದು ನಾಯಕರನ್ನು ಭೇಟಿಯಾದಾಗ ವಿದೇಶಸ್ತ ಹಿಂದುಗಳ ಸಮಸ್ಯೆಗಳ ಪರಿಚಯ ಅವರಿಗಾಯಿತು. ಒಂದು ಕಡೆ ಆ ಹಿಂದುಗಳು ಭಾರತಕ್ಕೆ ದೊಡ್ಡ ಶಕ್ತಿಯಾಗಿರುವಂತೆ ಕಾಣಿಸುವಾಗಲೇ, ಇನ್ನೊಂದು ಕಡೆ ಅಲ್ಲಿ ಅತಿ ವೇಗದಲ್ಲಿ ಅವರು ಹಿಂದುತನ ಕಳೆದುಕೊಳ್ಳುವಂಥ ಗಂಭೀರ ಪರಿಸ್ಥಿತಿ ಏರ್ಪಡುತ್ತಿರುವುದು ಸಹ ದಾದಾ ಸಾಹೇಬರಿಗೆ ಗೋಚರಿಸಿತು. ಈ ಸಂಗತಿಯನ್ನು ಅವರು ಶ್ರೀ ಗುರೂಜಿಯವರೊಂದಿಗೆ ಆಗಾಗ ಚರ್ಚಿಸುತ್ತಿದ್ದರು. ವಿಶ್ವ ಹಿಂದು ಪರಿಷತ್ತಿನ ಸ್ಥಾಪನೆಗೆ ಈ ವಿದ್ಯಮಾನ ಸಹ ತ್ವರೆ ನೀಡಿತು.

ಶ್ರೀ ಗುರೂಜಿಯವರ ಸೂಚನೆಯಂತೆ ದಾದಾ ಸಾಹೇಬರು ಒಂಬತ್ತು ತಿಂಗಳ ಕಾಲ ಭಾರತಾದ್ಯಂತ ಮತ್ತು ಕೆಲವು ವಿದೇಶಗಳಲ್ಲೂ ಪ್ರವಾಸ ಮಾಡಿ ಸುಮಾರು 300 ಮಂದಿಯನ್ನು – ಅವರಲ್ಲಿ ಪ್ರಮುಖ ಧರ್ಮಾಚಾರ್ಯರು, ಸಾಮಾಜಿಕ ನಾಯಕರು ಮತ್ತು ಚಿಂತಕರು ಒಳಗೊಂಡಿದ್ದರು– ವೈಯಕ್ತಿಕವಾಗಿ ಭೇಟಿಯಾಗಿ ಅವರೆಲ್ಲರ ಜತೆ ಯೋಜಿತ ಸಂಸ್ಥೆಯ ಬಗ್ಗೆ ವಿಚಾರ ವಿನಿಮಯ ನಡೆಸಿದರು.

ಸಾಂದೀಪನಿ ಸಾಧನಾಲಯದಲ್ಲಿ ನಡೆಯಲಿರುವ ಈ ಸಮಾಲೋಚನ ಸಭೆಯಲ್ಲಿ ಪಾಲ್ಗೊಳ್ಳುವಂತೆ ಅವರು 150 ಮಂದಿಗೆ ಸ್ವಹಸ್ತ ಪತ್ರ ಬರೆದು ಆಹ್ವಾನಿಸಿದರು. ಈ ಯೋಜನೆಯಂತೆ ಶ್ರೀಕೃಷ್ಣ ಜನ್ಮಾಷ್ಟಮಿಯಂದು (1964) ಆ ಸಭೆ ನಡೆದು ವಿಶ್ವ ಹಿಂದು ಪರಿಷತ್ತಿನ ಸ್ಥಾಪನೆಯಾದುದು ಈಗ ಇತಿಹಾಸ.

ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿದವರು ಭಾರತೀಯ ವಿದ್ಯಾಭವನದ ಸ್ಥಾಪಕ ಶ್ರೀ ಕೆ.ಎಂ. ಮುನ್ಶಿಯವರು. ಸಭೆಯ ಕೊನೆಯಲ್ಲಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ಸಂಕ್ಷೇಪವಾಗಿ ವಿಶ್ವ ಹಿಂದು ಪರಿಷತ್ತಿನ ಧ್ಯೇಯೋದ್ದೇಶಗಳನ್ನು ಮತ್ತು ನಿಕಟ ಭವಿಷ್ಯದ ಕಾರ್ಯಕ್ರಮವನ್ನು ಸಭೆಗೆ ತಿಳಿಸಿದರು.

## ಧ್ಯೇಯೋದ್ದೇಶಗಳು

1. ಹಿಂದು ಸಮಾಜವನ್ನು ಸಂಘಟಿಸಿ ಶಕ್ತಿಶಾಲಿಗೊಳಿಸುವ ಸಲುವಾಗಿ ಮುಂದಾಳುತನ ವಹಿಸುವುದು.

2. ಆಧುನಿಕ ಸನ್ನಿವೇಶಗಳಿಗೆ ಸಮ್ಮತವಾಗುವಂಥ ರೀತಿಯಲ್ಲಿ ಹಿಂದು ಧಾರ್ಮಿಕ ತತ್ತ್ವ ಜ್ಞಾನವನ್ನು ಮತ್ತು ಆಚರಣೆಗಳನ್ನು ಹಾಗೂ ನೈತಿಕ ಆಧ್ಯಾತ್ಮಿಕ ಸಿದ್ಧಾಂತಗಳನ್ನು ವಿಶ್ವಾದ್ಯಂತ ಪಸರಿಸುವುದು.

3. ವಿದೇಶಗಳಲ್ಲಿ ನೆಲೆಸಿರುವ ಹಿಂದುಗಳೊಂದಿಗೆ ಸಂಪರ್ಕ ಬೆಳೆಸಿ, ಸಂಬಂಧಗಳನ್ನು ದೃಢಗೊಳಿಸುವುದು ಹಾಗೂ ಅವರಿಗೆ ಅಗತ್ಯವೆನಿಸುವ ಸರ್ವವಿಧದ ನೆರವು ನೀಡುವುದು.

ಈ ಸಭೆಯಲ್ಲಿ ಕೈಗೊಳ್ಳಲಾದ ಇನ್ನೂ ಕೆಲವು ನಿರ್ಧಾರಗಳು

1. ಪ್ರತಿ 12 ವರ್ಷಗಳಿಗೊಮ್ಮೆ ಬರುವ ಪ್ರಯಾಗದ ಕುಂಭಮೇಳದ ಸಂದರ್ಭದಲ್ಲಿ ವೈಶ್ವಿಕ ಮಟ್ಟದಲ್ಲಿ ಹಿಂದು ಸಮ್ಮೇಳನಗಳನ್ನು ನಡೆಸುವುದು. ನಿಕಟ ಭವಿಷ್ಯದಲ್ಲಿ 1966ರ ಜನವರಿ 21ರಂದು ಪ್ರಯಾಗದ ಕುಂಭಮೇಳದಲ್ಲಿ ಭಾರತದ ವಿವಿಧ ಪ್ರದೇಶಗಳಿಂದ ಮತ್ತು ವಿದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಹಿಂದುಗಳು ಭಾಗವಹಿಸಲು ಅವಕಾಶ ಒದಗಿಸುವುದು.

2. ಈ ಸಮ್ಮೇಳನದಲ್ಲಿ ವಿವಿಧ ಸಂಪ್ರದಾಯಗಳ ಧರ್ಮಾಚಾರ್ಯರು ಮತ್ತು ವಿದ್ವಾಂಸರ ವಿಚಾರಗೋಷ್ಠಿ ನಡೆಸುವುದು.

3. ಒಂದು ಪ್ರದರ್ಶನಿಯನ್ನು ಏರ್ಪಡಿಸಿ ವೇದ ಕಾಲದಿಂದ ಆರಂಭಿಸಿ ಇಂದಿನವರೆಗೆ ಹಿಂದು ಸಂಸ್ಕೃತಿ ಮತ್ತು ಸಭ್ಯತೆ ಅರಳಿ ವಿಕಾಸ ಹಾಗೂ ವೈಭವ ಸಂಪನ್ನಗೊಂಡ ರೀತಿಯನ್ನು ಚಿತ್ರಗಳು, ತಖ್ತೆಗಳು ಮತ್ತು ಕಲಾಕೃತಿಗಳ ಮೂಲಕ ಜನಜಾಗೃತಿ ಮಾಡುವುದು.

4. 'ವಿವಿಧತೆಯಲ್ಲಿ ಏಕತೆ'ಯನ್ನು ಬಿಂಬಿಸುವಂಥ ರೀತಿಯ ಇನ್ನಿತರ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.

## ಅಲ್ಲಿ ನಿರ್ಧರಿಸಲಾದ ಇನ್ನಿತರ ಸಂಗತಿಗಳು

1. ಪರಿಷತ್ತಿನ ಕೇಂದ್ರೀಯ ಮತ್ತು ಪ್ರಾಂತೀಯ ಕಾರ್ಯಕಾರಿಣಿಯಲ್ಲೂ ಯಾವುದೇ ರಾಜಕೀಯ ಪದಾಧಿಕಾರಿಗಳು ಇರುವಂತಿಲ್ಲ.

2. ವಿಶ್ವ ಹಿಂದು ಪರಿಷತ್ತಿನ ಕಾರ್ಯಕ್ರಮಗಳು ಮತ್ತು ಇನ್ನಿತರ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ವಿವಿಧ ಮತ, ಪಂಥಗಳ ಶಂಕರಾಚಾರ್ಯರು, ಧರ್ಮಾಚಾರ್ಯರು ಹಾಗೂ ಗೌರವಾನ್ವಿತ ಚಿಂತಕರು, ವಿದ್ವಾಂಸರನ್ನೊಳಗೊಂಡ ಮಾರ್ಗದರ್ಶಕ ಮಂಡಲಿಯೊಂದು ಇರುವುದು. ಈ ಮಾರ್ಗದರ್ಶಕ ಮಂಡಲಿಯು ವರ್ಷದಲ್ಲೊಮ್ಮೆ ಸೇರುವುದು ಅಥ–'ವಾ ವಿಶೇಷ ನಿರ್ಧಾರವೊಂದನ್ನು ಕೈಗೊಳ್ಳಬೇಕಾದಾಗ ಸಂಬಂಧಿಸಿದ ಸಭೆಗಾಗಿ ಆಹ್ವಾನವೀಯುವುದು. ಅದೇ ರೀತಿಯಲ್ಲಿ ಅಗತ್ಯವಿರುವಾಗಲೆಲ್ಲ ಧರ್ಮ ಸಂಸತ್ತನ್ನು ಸಹ ಸಂಯೋಜಿಸುವುದು.

ಸಾಂದೀಪನಿ ಸಾಧನಾಲಯದಲ್ಲಿ ಸೇರಿದ್ದ ವಿಶ್ವ ಹಿಂದು ಪರಿಷತ್ತಿನ ಈ ಮೊದಲ ಸಭೆಯನ್ನುದ್ದೇಶಿಸಿ ರಾಮಟೇಕದಿಂದ ಬಂದಿದ್ದ 151 ವರ್ಷ ವಯಸ್ಸಿನ ವಯೋವೃದ್ಧ, ಜ್ಞಾನವೃದ್ಧ ಯೋಗಿ ಶ್ರೀ ಮಹಾರಾಜ ಸೀತಾರಾಮ ದಾಸ ಅವರು ಸುಮಾರು 15 ನಿಮಿಷಗಳ ಕಾಲ ತಮ್ಮ ಶಕ್ತಿ, ಸ್ಫೂರ್ತಿಯುತ ವಾಣಿಯಿಂದ ಆಶೀರ್ವಚಿಸಿದುದು ಅಲ್ಲಿ ಸೇರಿದ್ದವರೆಲ್ಲರಿಗೂ ಕಾರ್ಯ ಪ್ರೇರಣೆ ನೀಡುವಂಥದ್ದಾಯಿತು.

# ಮೊದಲ ಸಭೆ ಮೈಸೂರು

ವಿಶ್ವ ಹಿಂದು ಪರಿಷತ್ತಿನ ಮುಂದಿನ ಸಭೆ ನಡೆದುದು 28–5–1965ರಂದು ಮೈಸೂರು ಅರಮನೆಯಲ್ಲಿ. ಈ ಸಭೆಯ ಅಧ್ಯಕ್ಷತೆ ವಹಿಸಿದವರು ಸಹ ವಿಶ್ವ ಹಿಂದು ಪರಿಷತ್ತಿನ ಕೇಂದ್ರೀಯ ಸಮಿತಿಯ ಅಧ್ಯಕ್ಷರಾದ ಮೈಸೂರು ಮಹಾರಾಜರೇ. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹಿಂದು ಧರ್ಮದ ಆದರ್ಶಗಳನ್ನು ಉಳಿಸಲು ನನಗೊಂದು ಸುವರ್ಣ ಅವಕಾಶವನ್ನು ಒದಗಿಸಿದುದಕ್ಕಾಗಿ ನಾನು ನಿಮಗೆಲ್ಲ ಆಭಾರಿ. ವಿಶ್ವಶಾಂತಿಗಾಗಿ ಈ ಆದರ್ಶಗಳನ್ನು ನಾವು ಪುಷ್ಟಗೊಳಿಸಬೇಕಾಗಿದೆ. ನಾವೀಗ ಅತ್ಯಂತ ಅಪಾಯಕಾರಿ ಸನ್ನಿವೇಶವನ್ನು ಎದುರಿಸುತ್ತಿದ್ದೇವೆ. ಆದರೆ, ಧರ್ಮದ ಆದರ್ಶಗಳನ್ನು ನಾವು ಪಾಲಿಸಿದ್ದೇ ಆದಲ್ಲಿ, ನಮ್ಮ ಪ್ರಯತ್ನದಲ್ಲೂ ನಾವು ನಿಶ್ಚಿತವಾಗಿಯೂ ಸಫಲರಾಗಬಲ್ಲೆವು" ಎಂದಿದ್ದರು.

ಈ ಸಭೆಯಲ್ಲಿ 1966ರ ಕುಂಭಮೇಳದ ಪ್ರಸಂಗದಲ್ಲಿ ಪ್ರಯಾಗದಲ್ಲಿ ಒಂದು ವಿಶಾಲ ಹಿಂದು ಸಮ್ಮೇಳನವನ್ನು ಏರ್ಪಡಿಸಲು ನಿರ್ಧರಿಸಲಾಯಿತು. ಅದೇ ರೀತಿಯಲ್ಲಿ ವಿಶ್ವ ಹಿಂದು ಪರಿಷತ್ತಿಗಾಗಿ ಒಂದು ಸಂವಿಧಾನವನ್ನು ರಚಿಸಲು ಕರಡು ಸಮಿತಿಯೊಂದನ್ನು ಸಹ ನಿಯುಕ್ತಿಸಲಾಯಿತು. ಆರಂಭದ ಅನಂತರ ವಿಶ್ವ ಹಿಂದು ಪರಿಷತ್ತಿನ ಪ್ರಧಾನ ಲಕ್ಷ್ಯ ವಿಶಾಲ ಹಿಂದು ಸಮಾಜಕ್ಕೆ ತನ್ನನ್ನು ಪರಿಚಯಿಸುವುದು ಹಾಗೂ ಸಮಾಜದಲ್ಲಿ ಹಿಂದುತ್ವದ ಜಾಗೃತಿಯುಂಟುಮಾಡುವುದು ಇವೆರಡರ ಕಡೆ ಕೇಂದ್ರೀಕೃತವಾಯಿತು. ಕೆಲವೇ ಮಂದಿ ಒಂದು ಆಶ್ರಮದಲ್ಲಿ ಸೇರಿ ಎರಡು ದಿನಗಳ ಕಾಲ ಚರ್ಚಿಸಿ ಕೈಗೊಂಡ ಬೃಹತ್ ನಿರ್ಧಾರವನ್ನು ವ್ಯಾಪಕ ಪ್ರಮಾಣದಲ್ಲಿ ಹಾಗೂ ಪ್ರಭಾವಿಯಾಗಿ ಸಮಾಜಕ್ಕೆ ತಲುಪಿಸುವುದೇ ಆಗಿನ ತುರ್ತು ಅಗತ್ಯವಾಗಿತ್ತು.

ಸಮಾಜಕ್ಕೆ ತನ್ನನ್ನು ಪರಿಚಯಿಸುವುದು ಮತ್ತು ಸಮಾಜದಲ್ಲಿ ಹಿಂದುತ್ವದ ಜಾಗೃತಿಯುಂಟುಮಾಡುವುದು ಇವೆರಡರಲ್ಲಿ ಒಂದೊಂದು ಸಹ ಇನ್ನೆರಡು ರೀತಿಗಳಲ್ಲಿ ಮಹತ್ತ್ವದ್ದಾಗಿದ್ದವು. ಉದಾಹರಣೆಗಾಗಿ ಸಮಾಜಕ್ಕೆ ತನ್ನನ್ನು ಪರಿಚಯಿಸುವುದರಲ್ಲಿ.


1. ವಿವಿಧ ಜಾತಿ, ಮತ, ಪಂಥಗಳಿಂದ ಕೂಡಿದ ಹಿಂದು ಸಮಾಜವು ಎಂದೂ ಸಂಘಟಿತವಾಗುವಂಥದ್ದಲ್ಲ, ಸಮಾಜದ ಸಂಘಟನೆ ಹಿಂದುಗಳ ಸ್ವಭಾವದಲ್ಲಿ ಇಲ್ಲ ಎಂಬ ಭ್ರಮೆ ಹುಸಿಯಾಗಬೇಕು, ನೂರೆಂಟು ವಿವಿಧ ವೈವಿಧ್ಯ, ಭಿನ್ನತೆಗಳು ಮೇಲ್ನೋಟಕ್ಕೆ ಕಂಡರೂ ಹಿಂದು ಸಮಾಜ ಅದೆಲ್ಲವಿದ್ದೂ ತಾನೊಂದು ಸಂಘಟಿತ ಶಕ್ತಿಯಾಗಿ ನಿಲ್ಲಬಲ್ಲದು ಎಂಬ ಭರವಸೆಯ ವಾತಾವರಣ ಸೃಷ್ಟಿಯಾಗಬೇಕು.

2. ಸರ್ವಸಾಮಾನ್ಯ ಹಿಂದುವಿಗೆ ತಾನು ಒಂಟಿಯಲ್ಲ ತನ್ನ ಜತೆ ಒಂದು ಬೃಹತ್ ಸಂಘಟಿತ ಸಮಾಜ ಶಕ್ತಿಯಿದೆ ಎಂಬ ಅನುಭೂತಿಯಾಗಬೇಕು, ಆಗ ಅವನು ಇನ್ನೂ ಹೆಚ್ಚಿನ ಸಾಹಸದ ಹೆಜ್ಜೆ ಮುಂದೆ ಇಡಲು ಆತ್ಮವಿಶ್ವಾಸ ಬೆಳೆಸಿಕೊಂಡಾನು – ಇವೆರಡು ಪೂರಕ ಉದ್ದೇಶಗಳು ಅದರಲ್ಲಿದ್ದವು.

ಅದೇ ರೀತಿಯಲ್ಲಿ ಹಿಂದುತ್ವದ ಜಾಗೃತಿಯಲ್ಲೂ ಎರಡು ಪೂರಕ ಉದ್ದೇಶಗಳು.

1. ಪ್ರತಿಯೊಬ್ಬ ಹಿಂದುವಿನಲ್ಲೂ ಅತಿ ಪ್ರಾಚೀನ ಕಾಲದಿಂದ ತನಗೆ ಬಳುವಳಿಯಾಗಿ ಬಂದಿರುವ ಹಿಂದುತ್ವದ ಹಿರಿಮೆ, ಗರಿಮೆಗಳ ಅರಿವು ಮೂಡಬೇಕು. ಗುಲಾಮಗಿರಿಯ ಕಾಲಾವಧಿಯಲ್ಲಿ ಆಗಿರುವ ಮೈಮರೆವನ್ನು ದೂರಸರಿಸಿ ಪುನಃ ತನ್ನ ಸಾಟಿಯಿಲ್ಲದ ಶ್ರೇಷ್ಠತೆಯ ಬಗ್ಗೆ ಅವನು ಹೆಮ್ಮೆಪಡುವಂತಾಗಬೇಕು.

2. ತನ್ನ ಸಾಮಾಜಿಕ ಜೀವನದಲ್ಲಿ ಅಂತರ್ನಿಹಿತವಾಗಿರುವ ದೋಷ, ದೌರ್ಬಲ್ಯಗಳ ಬಗ್ಗೆಯೂ ಅವನು



ಕಣ್ತೆರೆಯುವಂತಾಗಬೇಕು. ಇತಿಹಾಸ ಕಾಲದಲ್ಲಿ ತನ್ನ ಸಮಾಜ ಎಡವಿದುದೆಲ್ಲಿ, ಅದನ್ನೀಗ ಸರಿಪಡಿಸುವ ರೀತಿ ಹೇಗೆ ಇತ್ಯಾದಿ ಸಹ ಅವನು ತಿಳಿಯಬೇಕು. ಆ ಮೂಲಕ ತನ್ನ ಸಮಾಜವನ್ನು ಸರಿಪಡಿಸಲು ತಾನು ಮುಂದಾಗಬೇಕಾದ ಅಗತ್ಯವನ್ನು ಅವನು ಮನಗಾಣಬೇಕು. ಇವು ಹಿಂದುತ್ವದ ಜಾಗೃತಿಗಿದ್ದ ಇನ್ನೆರಡು ಮುಖಗಳು.


ಹೀಗೆ ಇವೆರಡು ಉದ್ದೇಶಗಳಿಗಾಗಿ ವಿಶ್ವ ಹಿಂದು ಪರಿಷತ್ ಮುಂದಿನ ಕೆಲವು ವರ್ಷಗಳ ಕಾಲ ದೇಶಾದ್ಯಂತ ಮತ್ತು ವಿದೇಶಗಳಲ್ಲೂ ಕೆಲವು ಕಡೆಗಳಲ್ಲಿ ಬೃಹತ್ ಸಮ್ಮೇಳನಗಳನ್ನು ಏರ್ಪಡಿಸಿತು. ಅವುಗಳಲ್ಲಿ ಕೆಲವು ಕುಂಭಮೇಳದಂಥ ರಾಷ್ಟ್ರೀಯ ಮಟ್ಟದ ಸಂದರ್ಭಗಳಲ್ಲಿ ಅದೇ ಸ್ತರದ ಸಮ್ಮೇಳನಗಳಾದಲ್ಲಿ; ಇನ್ನೂ ಕೆಲವು ಪ್ರಾದೇಶಿಕವಾಗಿ ಅಲ್ಲಿನ ಹಿಂದು ಬಾಂಧವರು ಮತ್ತು ಸಾಧು-ಸಂತರು ಪಾಲ್ಗೊಳ್ಳುವಂಥವು ಆಗಿದ್ದವು.

## ಸಂಸ್ಕಾರಗಳು – ವ್ಯಕ್ತಿಯನ್ನು ರೂಪಿಸುವ ಸಾಧನ:

ಹಿಂದು ನಂಬಿಕೆಗಳ ಪರಿಣಾಮವಾಗಿ ನಡೆವಳಿಕೆಗಳ ಸೂತ್ರಗಳು ಬಂದವು. ಮಾನವನಿಗೆ ವಿವೇಕವಿದೆ ಆ ವಿವೇಕವೇ ಅವನಿಗೆ ಸ್ವಾತಂತ್ರದ ಕಲ್ಪನೆಯನ್ನು ಕೊಟ್ಟಿದೆ. ಯಾವುದು ಯೋಗ್ಯ, ಯಾವುದು ಅಯೋಗ್ಯ ಎಂದು ಗುರುತಿಸಬಲ್ಲ ವಿವೇಕವೇ ಯೋಗ್ಯವಾದುದನ್ನು ಒಪ್ಪಿ ನಡೆಸುವ ಸ್ವಾತಂತ್ರ್ಯವನ್ನೂ, ಅಯೋಗ್ಯವಾದುದನ್ನು ತಿರಸ್ಕರಿಸುವ ಶಕ್ತಿಯನ್ನು ಕೊಟ್ಟಿದೆ. ಪ್ರಾಣಿಗಳು ಪ್ರವೃತ್ತಿಗಳನ್ನು ಅವಲಂಬಿಸಿ ನಡೆದರೆ, ಮಾನವ ವಿವೇಕವನ್ನು ಅವಲಂಬಿಸಿ ನಡೆವ ಸಾಮರ್ಥ್ಯ ಸ್ವಾತಂತ್ರ್ಯವನ್ನು ಸಂಪಾದಿಸಿದ್ದಾನೆ.

ಇಂತಹ ಸ್ವಾತಂತ್ರ್ಯದ ಸದುಪಯೋಗ ಆಗಬೇಕು. ಮಾನವ ತನಗಿರುವ ಸ್ವಾತಂತ್ರ್ಯದ ದುರುಪಯೋಗ ಮಾಡಬಾರದು. ಅದಕ್ಕಾಗಿ ಅವನ ಮನೋಬುದ್ಧಿಗಳಿಗೂ ಶರೀರಕ್ಕೂ ಉತ್ತಮ ಶಕ್ತಿ ಬರಬೇಕು. ಆ ಶಕ್ತಿ ತುಂಬುವ – ಸಾಧನಗಳೇ ಸಂಸ್ಕಾರಗಳು, ಸತತ ಕ್ರಿಯೆಗಳು ಅಭ್ಯಾಸಗಳಾಗಿ, ಅಭ್ಯಾಸಗಳು ಶರೀರ-ಮನ-ಬುದ್ಧಿಗಳ ಮೇಲೆ ಬೀರುವ ಪರಿಣಾಮವೇ ಸಂಸ್ಕಾರ. ಇಂತಹ ಸಂಸ್ಕಾರಗಳಿಗೆ ಒಳಪಡಿಸಿದಾಗ ಮಾನವನ ವ್ಯಕ್ತಿತ್ವ ಬಲಗೊಳ್ಳುತ್ತದೆ. ಕುಸಂಸ್ಕಾರಗಳಿಗೆ ಒಳಗಾದಾಗ ವ್ಯಕ್ತಿತ್ವವು ದುರ್ಬಲಗೊಳ್ಳುತ್ತದೆ. ಹೀಗೆ ಮಾನವ ಸಂಸ್ಕಾರಕ್ಷಮನಾಗಿರುವುದರಿಂದ ಅವನಿಗೆ ಉತ್ತಮ ಸಂಸ್ಕಾರಗಳನ್ನು ನೀಡಲು ಯೋಗ್ಯ ವ್ಯವಸ್ಥೆ ಆಗಬೇಕು. ಈ ಸಂಸ್ಕಾರಗಳನ್ನು ನೀಡಲು ಅನೇಕ ವ್ಯವಸ್ಥೆಗಳು, ಸಂಸ್ಥೆಗಳನ್ನು ಹಿಂದೂ ಸಮಾಜ ರೂಪಿಸಿತು.

# ಮೊದಲ ಸಮ್ಮೇಳನ– ಪ್ರಯಾಗ 1966



1966ರ ಪ್ರಯಾಗ ಕುಂಭಮೇಳದ ಸಂದರ್ಭದಲ್ಲಿ ಜನವರಿ 22, 23 ಮತ್ತು 24ರಂದು ವಿಶ್ವ ಹಿಂದು ಪರಿಷತ್ತಿನ ಪ್ರಪ್ರಥಮ ವಿಶಾಲ ಜಾಗತಿಕ ಸಮ್ಮೇಳನ ನಡೆಯಿತು. ದೇಶದ ಮೂಲೆ ಮೂಲೆಗಳಿಂದ ಬಂದಿದ್ದ ವಿವಿಧ ಪಂಥ, ಸಂಪ್ರದಾಯಗಳ ಪೂಜ್ಯರಾದ ಧರ್ಮಾಚಾರ್ಯರು, ಸಾಧು, ಸನ್ಯಾಸಿಗಳು, ಅನ್ಯ ಹಿರಿಯ ಸಾಮಾಜಿಕ ಮುಖಂಡರು ಹಾಗೂ ಸಹಸ್ರಾವಧಿ ಜನಸಾಮಾನ್ಯರು ಪಾಲ್ಗೊಂಡಿದ್ದಂಥ ಈ ಸಮ್ಮೇಳನ ಹಿಂದು ಇತಿಹಾಸದಲ್ಲಿ 'ನ ಭೂತೋ' ಎನ್ನಿಸುವಂಥದಾಯಿತು. ವಿಶೇಷ ಅತಿಥಿಗಳಾಗಿ ವಿದೇಶಗಳಿಂದಲೂ ನೂರಾರು ಹಿಂದು ನಾಯಕರು ಆಗಮಿಸಿದ್ದರು. ಆಗ ಇನ್ನೂ ಪ್ರಾರಂಭಿಕ ಸ್ಥಿತಿಯಲ್ಲಷ್ಟೇ ಇದ್ದ ವಿಶ್ವ ಹಿಂದು ಪರಿಷತ್ತಿಗೆ ಈ ಸಮ್ಮೇಳನ ವಿಶ್ವಾಸಪೂರ್ವಕ ಮುನ್ನಡೆಯ ಚಾಲನೆ ನೀಡಿತು.

ಒಂದೇ ವೇದಿಕೆಯ ಮೇಲೆ, ಒಂದೇ ಉದ್ದೇಶಕ್ಕಾಗಿ ತಮ್ಮೊಳಗಿನ ತಾರತಮ್ಯಗಳೆಲ್ಲವನ್ನು ಬದಿಗಿರಿಸಿ ಸಮಾನ ಎತ್ತರದಲ್ಲಿ ನೂರಾರು ಧರ್ಮಾಚಾರ್ಯರು ಈ ಸಮ್ಮೇಳನದಲ್ಲಿ ಕೂಡಿ ಕುಳಿತಿದ್ದುದು ಹಿಂದು ಇತಿಹಾಸದಲ್ಲೇ ಒಂದು ಅಪೂರ್ವ ವಿಶೇಷತೆ. ಮೇಲ್ನೋಟಕ್ಕೆ ಕಾಣಿಸುವಂಥ ವೈವಿಧ್ಯಗಳೇನೇ ಇದ್ದರೂ ತಾವೆಲ್ಲರೂ ಮೂಲತಃ ಒಂದೇ ಸಮಾಜವೆಂಬ ಅರಿವು ಮೂಡಿಸಿದ ಕಾರ್ಯಕ್ರಮವಾಯಿತದು.

ಹಿಂದು ಸಮಾಜಕ್ಕೆ 'ನ ಹಿಂದುಃ ಪತಿತೋ ಭವೇತ್' ಎಂಬ ಹೊಸ ದೃಷ್ಟಿಯನ್ನು ನೀಡಿದುದು ಸಹ ಈ ಸಮ್ಮೇಳನದ ಇನ್ನೊಂದು ವಿಶೇಷತೆ. ದೇಶದ ಸುದೀರ್ಘ ದಾಸ್ಯ ಕಾಲದಲ್ಲಿ ಕಾರಣಾಂತರಗಳಿಂದ ನಮ್ಮಿಂದ ಆಗ ದೂರವಾಗಿ ಅನ್ಯಮತಗಳಿಗೆ ಸೇರಿದ್ದಂಥ ಎಲ್ಲ ಹಿಂದು ಬಾಂಧವರನ್ನು ಮರಳಿ ಮಾತೃ ಸಮಾಜದಲ್ಲಿ ಬಂದು ಸೇರುವಂತೆ ಅವಕಾಶ ಮಾಡಲು ಹಾಗೂ ಅದಕ್ಕಾಗಿ ಶೀಘ್ರ ಕ್ರಮಗಳನ್ನು ಕೈಗೊಳ್ಳಲು ಒಂದು ಐತಿಹಾಸಿಕ ನಿರ್ಣಯವನ್ನು ಈ ಸಮ್ಮೇಳನವು ಸ್ವೀಕರಿಸಿತು. ಹಿಂದುವಾಗಿರುವವನು ಅನ್ಯಮತ ಸ್ವೀಕರಿಸಿದ್ದಲ್ಲಿ ಆತ ಶಾಶ್ವತವಾಗಿ ಭ್ರಷ್ಟನಾದಂತೆಯೇ, ಆತನಿಗೆ ಮರಳಿ ಹಿಂದುವಾಗಲು ಧಾರ್ಮಿಕವಾಗಿ ಮನ್ನಣೆಯಿಲ್ಲವೆಂಬ ಆತ್ಮಘಾತುಕ ದೃಷ್ಟಿ ಅದುವರೆಗೆ ನಮ್ಮದಾಗಿತ್ತು. ಆದರೆ ತಮ್ಮಲ್ಲಿನ ತಲೆತಲಾಂತರಗಳ ಆಳವಾದ ಋಷಿ ಪರಂಪರೆಯ ಸಂಸ್ಕಾರದಿಂದಾಗಿ ಹಿಂದುವಾಗಿರುವವನು ಎಂದೂ ಭ್ರಷ್ಟನಾಗಲಾರ; ಯಾವುದೇ ಉಪಾಸನಾ ಪದ್ಧತಿಯನ್ನು ಅನುಸರಿಸಿದರೂ ಅವನು ಹಿಂದುವೇ. ಈ ಅರ್ಥದಲ್ಲಿ ಶತಮಾನಗಳ ಕಾಲ ನಾವಾಗಿಯೇ ಮುಚ್ಚಿದ್ದ ಧರ್ಮದ ಬಾಗಿಲನ್ನು 'ನ ಹಿಂದುಃ ಪತಿತೋ ಭವೇತ್' ಎಂಬ ಕರೆ ಮೂಲಕ ಮತಾಂತರಿತ ಬಂಧುಗಳ ಸ್ವಾಗತಕ್ಕೆ ತೆರೆಯಲಾಯಿತು. ವೇದಿಕೆಯ ಮೇಲಿದ್ದ ನೂರಾರು ಧರ್ಮಾಚಾರ್ಯರು ನೆರೆದಿದ್ದ ಭಾರೀ ಜನಸ್ತೋಮದ ಮುಂದೆ ಈ ನಿರ್ಣಯಕ್ಕೆ ತಮ್ಮ ಒಮ್ಮತದ ಸ್ವೀಕೃತಿಯ ಮುದ್ರೆಯನ್ನೊತ್ತಿದರು ವಿಶ್ವ ಹಿಂದು ಪರಿಷತ್‌ಗೆ ತನ್ನ ಮೂಲ ಉದ್ದೇಶದಲ್ಲಿ ಮೊತ್ತ ಮೊದಲ ಸಫಲತೆ ಅಂದು ಈ ಸಮ್ಮೇಳನದಲ್ಲಿ ದೊರೆಯಿತು.

# ಧರ್ಮ-ವಿಜ್ಞಾನ
# ಆತ್ಮ ಗೌರವ-ಆತ್ಮ ವಿಸ್ಮೃತಿ
# ಹಿಂದುತ್ವದಿಂದ ಏಕತೆ

-ಶ್ರೀ ಗುರೂಜಿ ಉದ್ಬೋಧ

(ಪೂರ್ಣ ಕುಂಭದ ಸಂದರ್ಭ ತೀರ್ಥರಾಜ ಪ್ರಯಾಗದಲ್ಲಿ ವಿಶ್ವ ಹಿಂದು ಪರಿಷತ್ತಿನ ಮೊದಲನೆಯ ಜಾಗತಿಕ ಸಮ್ಮೇಳನ ನಡೆಯಿತು. ಶ್ರೀ ಗುರೂಜಿ ಗೋಲ್ವಲ್‌ಕರ್ ರವರು 24ನೇ ಜನವರಿ 1966ರ ಮುಕ್ತಾಯ ಸಂದರ್ಭದಲ್ಲಿ ಮಾಡಿದ ಭಾಷಣ)

ಎರಡು ತಿಂಗಳುಗಳ ಹಿಂದೆ ದ್ವಾರಕಾ ಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯರು ಈ ಸಂದರ್ಭದಲ್ಲಿ ನನ್ನನ್ನು ಮಾತನಾಡಲು ಆಜ್ಞಾಪಿಸಿದರು. ಪೂಜ್ಯಮಹಾತ್ಮರುಗಳ ಆದೇಶವನ್ನು ಪರಿಪಾಲಿಸುವುದನ್ನು ಬಿಟ್ಟರೆ ನನಗೆ ಬೇರೆ ಮಾರ್ಗವೇ ಇಲ್ಲದ್ದರಿಂದ ನಾನು ಇಂದು ನಿಮ್ಮೆಲ್ಲರ ಸೇವೆಗಾಗಿ ನಿಂತಿದ್ದೇನೆ.

ನನ್ನ ಪ್ರಕಾರ ವಿಶ್ವ ಹಿಂದು ಪರಿಷತ್ತಿನ ಉದಯ ಯಾವುದೋ ಪವಿತ್ರವಾದ ಭಗವದ್ ಇಚ್ಛೆಯಿಂದಲೇ ಆಗಿದೆ. ಪರಿಷತ್ತಿನ ಕಾರ್ಯದರ್ಶಿ ಆಪ್ಟೆಯವರು, ಶ್ರೀ ಚಿನ್ಮಯಾನಂದ ಸ್ವಾಮಿಗಳು ಮತ್ತು ಅನೇಕ ಜನಗಳ ಅಭಿಪ್ರಾಯ ಇದೇ ರೀತಿಯದಾಗಿತ್ತು. ಸುಮಾರು ಎರಡು-ಮೂರು ವರ್ಷಗಳ ಮೊದಲು ನಮ್ಮ ದೇಶದಲ್ಲಿ ಹಿಂದು ಮಹಾಸಭೆಯ ಒಬ್ಬ ಹಿರಿಯ ಕಾರ್ಯಕರ್ತರು ಇಡೀ ಜಗತ್ತಿನ ಹಿಂದುಗಳ ಒಂದು ಸಮ್ಮೇಳನವನ್ನು ಕರೆಯಬೇಕೆಂದು ಹೇಳಿದ್ದರು. ಆಗ ಈ ರೀತಿಯ ಸಮ್ಮೇಳನ ಯಾವುದೇ ರಾಜನೈತಿಕ ದಳದ ಮೂಲಕ ಆಯೋಜಿಸಲ್ಪಡಬಾರದು ಎಂದು ಪ್ರಾರ್ಥಿಸಿದ್ದೆ. ಇದು ಯಾವಾಗಲೂ ಅಲಿಪ್ತವಾಗಿದ್ದು ನಮ್ಮ ಸಮಾಜದ ಪ್ರಮುಖ ವ್ಯಕ್ತಿಗಳ ಸಮಿತಿಯ ಮೂಲಕ, ಅದನ್ನು ಆಯೋಜಿಸಬೇಕು ಮತ್ತು ಮುಂದೂ ಸಹ ಈ ಕಾರ್ಯವನ್ನು ರಾಜನೀತಿಯಿಂದ ದೂರವಿದ್ದೇ ನಡೆಸಬೇಕು. ಈ ಮಾತು ನಮ್ಮನಮ್ಮಲ್ಲಿ ವಿಚಾರ ವಿನಿಮಯವಾಗಿ ನಿಶ್ಚಯವಾದ ನಂತರ ನಾನು ದಾದಾಸಾಹೇಬ್ ಆಪ್ಟೆಯವರನ್ನು ದೇಶದಲ್ಲೆಲ್ಲಾ ಪ್ರವಾಸಮಾಡಿ, ಜನಗಳನ್ನು ಭೇಟಿಮಾಡಿ, ಈ ಕೆಲಸಕ್ಕೆ ಎಲ್ಲರ ಸಹಕಾರ ದೊರಕಿಸಿಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನಿಸಬೇಕೆಂದು ಕೇಳಿಕೊಂಡೆ.

ಈ ಸಂದರ್ಭದಲ್ಲಿ, ಪ್ರಥಮ ಸಮಾವೇಶವು ಪವಯಿ (ಮುಂಬಯಿ)ಯಲ್ಲಿ ಇರುವ ಸಾಂದೀಪಿನಿ ಸಾಧನಾಲಯದಲ್ಲಿ ಶ್ರೀ ಚಿನ್ಮಯಾನಂದ ಸ್ವಾಮೀಜಿಯವರ ಮೂಲಕ ನಡೆಸಲ್ಪಟ್ಟಿತು. ಪ್ರಯಾಗರಾಜ್‌ನಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ, ಮೌನಿ ಅಮಾವಾಸ್ಯೆಯ ಸಮಯದಲ್ಲಿ, ಕುಂಭಮೇಳ ನಡೆಯುತ್ತಿದೆ. ಆ ಪವಿತ್ರ ಸಂದರ್ಭದಲ್ಲಿ ಅನೇಕ ಪಂಥಗಳ ಹಾಗೂ ಸಂಪ್ರದಾಯಗಳ ಜನರು ಅನಾಯಾಸವಾಗಿ ಒಟ್ಟಾಗಿ ಸೇರುತ್ತಾರೆ. ಇದೇ ಸಮಯದಲ್ಲಿ ದೇಶ ವಿದೇಶಗಳಲ್ಲಿ ವಾಸಿಸುತ್ತಿರುವ ಹಿಂದುಗಳ ಸಮ್ಮೇಳನಮಾಡಬೇಕೆಂದು ಅಲ್ಲಿ ನಿಶ್ಚಯವಾಯಿತು. ಅದೇ ನಿಶ್ಚಯದ ಫಲ ನಮ್ಮ ಮುಂದಿದೆ.

**ವಿಜ್ಞಾನದ ದೃಷ್ಟಿಯಿಂದ ಧರ್ಮದಲ್ಲಿ ಪರಿವರ್ತನೆ ವಿನಾಶಕಾರಿ**

ಮುಂಬಯಿಯ ಡಾ॥ ಕನ್ಹಯ್ಯಲಾಲ್ ಮುನ್ಶಿ, ಚಿದಂಬರಮ್ ವಿಶ್ವವಿದ್ಯಾಲಯದ ಕುಲಗುರು ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಮೊದಲಾದ ಅಸಂಖ್ಯ ಮಹಾನುಭಾವರು ಮತ್ತು ಶ್ರೇಷ್ಠ ಪುರುಷರು ಇದನ್ನು ಸಫಲ ಮಾಡುವುದಕ್ಕಾಗಿ ಅತ್ಯಂತ ಪರಿಶ್ರಮ ಪಟ್ಟಿದ್ದಾರೆ. ಈ ಸಮ್ಮೇಳನದ ಮಾರ್ಗದರ್ಶನದ ಸಂಪೂರ್ಣ ಜವಾಬ್ದಾರಿಯನ್ನು ದ್ವಾರಕಾ ಪೀಠಾಧೀಶ್ವರರಾದ ಶ್ರೀಮದ್ ಜಗದ್ಗುರು ಶಂಕರಾಚಾರ್ಯರು ತೆಗೆದುಕೊಂಡಿದ್ದರು. ಅವರು ಅತ್ಯಂತ ಪ್ರೀತಿಯಿಂದ, ಸ್ನೇಹದಿಂದ, ಎಲ್ಲರನ್ನೂ ಪ್ರೋತ್ಸಾಹಿಸುತ್ತಾ, ಕಷ್ಟಗಳನ್ನು ಸಹಿಸುತ್ತಾ, ಎಲ್ಲಾ ಸಮಾವೇಶಗಳಲ್ಲೂ

ಉಪಸ್ಥಿತರಾಗಿದ್ದು ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡಿದರು. ಅವರ ಆಶೀರ್ವಾದದಿಂದಲೇ ಈ ಕಾರ್ಯವು ಸಫಲವಾಯಿತು.

ಇಲ್ಲಿ ಮಂಡಿಸಲ್ಪಟ್ಟಿದ್ದ ವಿವಿಧ ರೀತಿಯ ಪ್ರಸ್ತಾವಗಳ ಮೂಲಕ ಈ ಪರಿಷತ್ತಿನ ಕಾರಣ ಹಾಗೂ ಉದ್ದೇಶಗಳು ಎಲ್ಲರಿಗೂ ತಿಳಿಯುವಂತಾಯಿತು. ನಮ್ಮ ಈ ಕೆಲಸವು ಧರ್ಮದಲ್ಲಿ ಪರಿವರ್ತನೆ ಮಾಡುವುದಲ್ಲ ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇದು ವಿಜ್ಞಾನಯುಗ, ಈ ವಿಜ್ಞಾನಯುಗದ ಜೊತೆ ಹೋಗಬೇಕಾದರೆ ನಮ್ಮ ಧರ್ಮದಲ್ಲಿ ಪರಿವರ್ತನೆಗಳನ್ನು ತರಬೇಕು ಎಂಬ ವಿಚಾರವನ್ನು ಆಗಾಗ ಜನಗಳು ಹೇಳುತ್ತಿರುತ್ತಾರೆ. ವಿಜ್ಞಾನ ವಿಷಯಗಳು ಎಷ್ಟರಮಟ್ಟಿಗೆ ಧರ್ಮದ ಜೊತೆ ಬೇರೆಯಬಲ್ಲದೋ ಅಷ್ಟುಮಾತ್ರ ಅದನ್ನು ಬಳಸಬೇಕು; ಇಲ್ಲದಿದ್ದರೆ ಧರ್ಮವು ಧರ್ಮವಾಗಿ ಉಳಿಯಲಾರದು. ಧರ್ಮವಿಲ್ಲದ ಕಡೆ ಸಮಾಜಕ್ಕೆ ಪ್ರೇರಣೆ ಸಿಗುವುದಿಲ್ಲ; ಜನಗಳ ಕರ್ತವ್ಯಗಳನ್ನು ನಿರ್ಧರಿಸಲಾಗುವುದಿಲ್ಲ. ಜನಗಳಿಗೆ ಇಹಲೋಕ ಮತ್ತು ಪರಲೋಕಗಳ ಕಲ್ಯಾಣದ ಮಾರ್ಗಗಳು ಸಿಗುವುದಿಲ್ಲ ಮತ್ತು ಮನುಷ್ಯರಲ್ಲಿ ಸಮಗ್ರರೂಪದಲ್ಲಿ ಭ್ರಮೆ ಉತ್ಪನ್ನವಾಗುತ್ತದೆ. ಆದ್ದ-ರಿಂದ ವಿಜ್ಞಾನದ ಸಂಶೋಧನೆಗಳ ಜೊತೆಗೆ, ಧರ್ಮದಲ್ಲಿ ಪರಿವರ್ತನೆಗಳನ್ನು ಮಾಡುವ ವಿಚಾರ ಅನಿಷ್ಟಕಾ-ರಿಯಾದದ್ದು.

ನಮ್ಮ ಜೀವನವು ಒಂದು ವಿಶಿಷ್ಟವಾದ ಸಿದ್ಧಾಂತ, ವಿಶಿಷ್ಟವಾದ ಪದ್ಧತಿ ಮತ್ತು ವಿಶಿಷ್ಟವಾದ ಆಚಾರಗಳಂತೆ ನಡೆಯುತ್ತದೆ. ಕಾಲಕ್ಕೆ ತಕ್ಕಂತೆ ವಿಜ್ಞಾನದ ಸಂಶೋಧನೆಗಳ ಕಾರಣದಿಂದಾಗಿ ನಾವುಗಳು ಅವುಗಳನ್ನು ಬಿಟ್ಟುಬಿಟ್ಟರೆ ಒಂದು ರಾಷ್ಟ್ರ, ಒಂದು ಧರ್ಮ-ಸಂಸ್ಕೃತಿ ಹಾಗೂ ಒಂದು ಸಮಾಜದವರಾಗಿ ಜೀವಿಸುವುದಕ್ಕೆ ಬೇಕಾದ ನಮ್ಮ ಯೋಗ್ಯತೆಗಳೇ ಸಮಾಪ್ತವಾಗಿ ಹೋಗುತ್ತವೆ. ಆದ್ದರಿಂದ ಪ್ರಪಂಚದಲ್ಲಿ ಸುಖವನ್ನು ಕೊಡುವುದಕ್ಕಾಗಿರುವ ಸಂಶೋಧನಾತ್ಮಕ ವಿಷಯಗಳ ಸಂಪೂರ್ಣ ಉಪಯೋಗ ಮಾಡಿಕೊಳ್ಳುತ್ತಿರುವಾಗಲೂ ನಮ್ಮ ಸ್ವಂತ ಜೀವನದ ಸಿದ್ಧಾಂತಗಳು ಮತ್ತು ಅವುಗಳ ಮೇಲೆ ಆಧಾರಿತವಾಗಿರುವ ನಮ್ಮ ವ್ಯವಹಾರಗಳು ಹಾಗೂ ಆಚರಣೆಗಳನ್ನು ಬಿಡಬಾರದು. ಅವುಗಳ ಜೊತೆಯಲ್ಲೇ ವಿಜ್ಞಾನವನ್ನೂ ರೂಢಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು.

ಕಳೆದ ಸಹಸ್ರಾಧಿಕ ವರ್ಷಗಳಲ್ಲಿ ಭಾರತದ ಮೇಲೆ ಅನೇಕ ಆಕ್ರಮಣಗಳು ಆದವು. ಅವುಗಳ ಕಾರಣದಿಂದಾಗಿ ಅನೇಕ ಜನಗಳ ಮನಸ್ಸಿನ ಆತ್ಮವಿಶ್ವಾಸವೇ ನಾಶವಾಯಿತು. ಬೇರೆಯವರನ್ನು ಅನುಕರಣೆ ಮಾಡುವ ಅಂತಃಪ್ರವೃತ್ತಿ ಉತ್ಪನ್ನವಾಯಿತು. ಅದರಿಂದ ನಮ್ಮ ಧರ್ಮದಂತೆ ಆಚ-ರಣೆ ಮಾಡುವುದನ್ನು ಅವಹೇಳನ ಮಾಡುವ, ಅನಾದರಣೆ ತೋರುವ, ಕೆಲವು ಸಂದರ್ಭಗಳಲ್ಲಿ ಧಿಕ್ಕರಿಸುವ ಅನಿಷ್ಟ ಪ್ರವೃತ್ತಿಗಳು ಪ್ರಬಲವಾಗಿವೆ. ಪರಕೀಯರ ಜೀವನವನ್ನು ಸ್ವೀಕರಿಸುವುದರಿಂದ ಹಿಂದುಗಳ ಜೀವನ ಯವನರಂತೆ ಆಗಿಹೋಗಿದೆ. ಸಂಸ್ಕಾರರಹಿತ ಸಮಾಜವನ್ನು ಮೆಲ್ಲಮೆಲ್ಲನೆ ನಮ್ಮ ಧರ್ಮದ ಶ್ರೇಷ್ಠತೆ, ತತ್ವಜ್ಞಾನ ಮತ್ತು ನಮ್ಮ ಆಚ-ರಣೆಗಳ ಪರಂಪರೆಯ ಶ್ರೇಷ್ಠತೆಯ ತಿಳುವಳಿಕೆ ಮೂಡಿಸುತ್ತ ಅದನ್ನು ಪುನಃ ಪ್ರತಿಷ್ಠಾಪನೆ ಮಾಡುವ ಪ್ರಯತ್ನ ಮಾಡಬೇಕು. ಈ ರೀತಿಯ ಪ್ರಯತ್ನ ಮಾಡಬೇಕಾದರೆ ಬಹಳ ಚಿಕ್ಕ ವಯಸ್ಸಿನಿಂದಲೇ ಪ್ರಾರಂಭಮಾಡುವ ಆವಶ್ಯಕತೆ ಇರುತ್ತದೆ. ಈ ದೃಷ್ಟಿಯಿಂದ ಕೆಲವು ನ್ಯೂನತಮ ಸಂಸ್ಕಾರಗಳನ್ನು ಪ್ರದಾನ ಮಾಡುವ ವ್ಯವಸ್ಥೆಯನ್ನು ನಮ್ಮ ವಿದ್ವಾಂಸರುಗಳಿಂದ ಬೇಡುವ ಪ್ರಸ್ತಾಪ ಇಲ್ಲಿ ಆಗಿದೆ.

ಈ ಎಲ್ಲಾ ಮಾತುಗಳೂ ವಿದೇಶಗಳಲ್ಲಿ ವಾಸಿಸುವಂತಹ ನಮ್ಮ ಅನೇಕ ಬಂಧುಗಳು ಹಿಂದುಗಳೇ ಆಗಿರುವುದರಿಂದ ಅತಿ ಆವಶ್ಯಕವಾಗಿವೆ. ಅವರು ಬಹಳ ಶ್ರದ್ಧಾವಂತರು. ಅವರ ಅಂತಃಕರಣದಲ್ಲಿ ಹಿಂದುಗಳಾಗಿಯೇ ಉಳಿಯುವ ಅಭಿಲಾಷೆ ಬಹಳ ದೃಢವಾಗಿದೆ. ನಮ್ಮ ದೇಶದಲ್ಲಿ ಎಲ್ಲ ರೀತಿಯ ಸಂತರು ಮಹಾತ್ಮರು ಇದ್ದಾರೆ. ಆದರೆ ಹತ್ತಿರದಲ್ಲೇ ಇರುವ ಕಾರಣ ನಾವು ಅವರನ್ನು ಸೂಕ್ತವಾಗಿ ಆದರಿಸುವುದಿಲ್ಲ. ನಾವು ಅವರಿಗೆ ಎಷ್ಟು ಸನಿಹದಲ್ಲಿರುತ್ತೇವೆಯೋ, ಬಹುಶಃ ಅವರ ಶ್ರೇಷ್ಠತೆಯು ನಮಗೆ ಅಷ್ಟೇ ಕಮ್ಮಿ ಕಾಣುತ್ತದೆ. ಆದರೆ ದೂರದಲ್ಲಿ ಇರುವಂತಹ ನಮ್ಮ ಬಂಧುಗಳ ಮನಸ್ಸಿನಲ್ಲಿ ನಮ್ಮ ಧರ್ಮದ ಬಗ್ಗೆ ಅತಿಯಾದ ಶ್ರದ್ಧೆ ಮತ್ತು ಭಕ್ತಿ ಇದೆ. ಎಲ್ಲ ರೀತಿಯಿಂದಲೂ ಅವರು ಒಳ್ಳೆಯ ಹಿಂದುಗಳಾಗಿಯೇ ಇರಬೇಕೆಂದು ಬಯಸುತ್ತಾರೆ. ಆದರೆ ಅವರ ಸಂಸ್ಕಾರ, ಜ್ಞಾನ, ಪ್ರವಚನ ಮೊದಲಾದವುಗಳ ಮೂಲಕ ಅಂತಃ-ಕರಣದ ಭಾವನೆಗಳನ್ನು ಜಾಗೃತವಾಗಿ ಇಟ್ಟುಕೊಳ್ಳುವುದಕ್ಕೆ ಯಾವುದೇ ರೀತಿಯ ವ್ಯವಸ್ಥೆಯೂ ಇರುವಂತೆ ಕಾಣುವುದಿಲ್ಲ. ದೇಶವಿದೇಶಗಳಲ್ಲಿರುವ ಬಹಳ ಜನಗಳು ತಮ್ಮನ್ನು ಹಿಂದುಗಳು ಎಂದು ಕರೆದುಕೊಳ್ಳುವುದಿಲ್ಲ ಎಂದು ಇಲ್ಲಿನ ಸ್ವಾಗತಾಧ್ಯಕ್ಷರಾದ ಮಹಾಮಂಡಲೇಶ್ವರ ಶ್ರೀಮದ್ ಮಹದೇಶಾನಂದಗಿರಿ ಮಹೋದಯರು ತಿಳಿಸಿದರು. ಅವರಲ್ಲಿ ಅನೇಕರು ತಮ್ಮನ್ನು ಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಆದರೆ ಅಲ್ಲಿ ಅವರಿಗೆ ಸಂಸ್ಕಾರವನ್ನು ಕೊಡುವಂತಹವರು ಯಾರೂ ಇಲ್ಲ. ಇದರಿಂದ ಮನುಷ್ಯ ಆದರ್ಶಗಳಿಂದ ದೂರವಾಗುತ್ತಾನೆ ಎಂದು ಶಾಸ್ತ್ರಗಳು ಹೇಳುತ್ತವೆ. ಅಂತಹ ಸ್ಥಿತಿ ಅವರಿಗೆ ಪ್ರಾಪ್ತವಾಗಿದೆ. ನಮ್ಮ ಅನೇಕ ಹಿಂದು ಬಾಂಧವರು ದಶಕಗಳಿಂದ ಬೇರೆ ಬೇರೆ ದೇಶಗಳಲ್ಲಿ ಇರುತ್ತಿರುವ ಕಾರಣ, ಅವರ ಮನಸ್ಸಿನಾಳದಲ್ಲಿ ತೀವ್ರವಾದ ಅಭಿಲಾಷೆ ಇದ್ದರೂ ನಿಜವಾದ ರೀತಿಯಲ್ಲಿ

ಸಂಸ್ಕಾರ ಪಡೆಯುವುದರಲ್ಲಿ ಅ ಸಮರ್ಥರಾಗಿದ್ದಾರೆ. ಇವರೆಲ್ಲರಿಗಾಗಿ ಸಮುಚಿತವಾದ ವ್ಯವಸ್ಥೆಯನ್ನು ನಾವು ಮಾಡಬೇಕು.

**ಆತ್ಮ ವಿಸ್ಮೃತ ಹಿಂದು ಸಮಾಜ**

ಇಲ್ಲಿಯವರೆಗೆ ನಾವು ನಮ್ಮ ಮನೆಯ ಬಗ್ಗೆಯೂ ಯೋಚಿಸುತ್ತಿರಲಿಲ್ಲ. ನಮ್ಮ ಮನೆಯ ನಾಲ್ಕೂಕಡೆ ಇರುವ ಬಂಧುಗಳ ಬಗ್ಗೆ ಯೋಚಿಸುವ ಪ್ರೇರಣೆಯಾಗಲೀ ಪ್ರವೃತ್ತಿಯಾಗಲೀ ಅಥವಾ ಅನುಕೂಲವಾಗಲಿ ನಮ್ಮ ಅಂತಃಕರಣದಲ್ಲಿ ಇರಲೇ ಇಲ್ಲ. ಆದರೆ ನಮ್ಮ ಸಮಾಜವು ಜಾಗೃತಗೊಂಡು ತನ್ನ ಜವಾಬ್ದಾರಿಯನ್ನು ತಿಳಿದುಕೊಳ್ಳುತ್ತಾ ಬಂದಂತೆ ಬೇರೆ ಬೇರೆ ದೇಶಗಳಲ್ಲಿ ಇರುವಂತಹ ನಮ್ಮ ಬಂಧುಗಳನ್ನು ಸುಸಂಸ್ಕೃತರನ್ನಾಗಿ ಮಾಡಿ, ಪ್ರಾಚೀನಕಾಲದಿಂದ ಅಖಂಡವಾಗಿ ನಡೆದು ಬರುತ್ತಿರುವ ಹಿಂದುತ್ವದ ಪ್ರಬಲವಾದ ಸೂತ್ರದಲ್ಲಿ ಎಲ್ಲರನ್ನು ಸೇರಿಸಿ ನಿಲ್ಲಿಸುವ ತನ್ನ ಕರ್ತವ್ಯವನ್ನು ಗುರುತಿಸುತ್ತಿದೆ. ಈ ತಿಳುವಳಿಕೆಯ ಪ್ರಥಮ ಆವಿಷ್ಕಾರದ ರೂಪದಲ್ಲಿ ಈ ಸಮ್ಮೇಳನವು ತಮ್ಮ ಮುಂದಿದೆ. ನಮ್ಮ ಸಮಾಜದ ಬಗ್ಗೆ ಹೆಚ್ಚು ಶ್ರದ್ಧಾಪೂರ್ವಕವಾಗಿ ವಿಚಾರಮಾಡಿ ಅದನ್ನು ಪ್ರಬಲವಾದ ಹಿಂದುವನ್ನಾಗಿ ಮಾಡುವ ಆವಶ್ಯಕತೆಯಿದೆ.

ದುರದೃಷ್ಟವಶಾತ್ ನಾವು ಇತ್ತೀಚೆಗೆ ಆತ್ಮವಿಶ್ವಾಸ ಶೂನ್ಯರಾಗುತ್ತಿದ್ದೇವೆ. ಇಂದು ಮನಃಶಾಸ್ತ್ರದ ಪ್ರಕಾರ ಯಾವುದನ್ನು ಹೀನ ಭಾವನೆ ಎಂದು ಕರೆಯುತ್ತೇವೆಯೋ ಅದನ್ನು ತುಂಬಿಕೊಂಡಿದ್ದೇವೆ. ಆದ್ದರಿಂದ ನಮಗೆ ಪ್ರಪಂಚದ ಯಾರೊಡನೆಯೂ ಸ್ವಂತ ಭಾಷೆಯಲ್ಲಿ ಮಾತಾಡುವ ಮತ್ತು ಸ್ವಂತ ವೇಷಭೂಷಣಗಳಲ್ಲಿ ಸುತ್ತಾಡುವುದಕ್ಕೂ ನಾಚಿಕೆ ಎನಿಸುತ್ತದೆ, ಎಲ್ಲಿ ಸ್ವಾಭಾವಿಕವಾಗಿ ಸ್ವಂತ ವೇಷಕ್ಕೇ ಲಜ್ಜೆ ಪಡುತ್ತೇವೆಯೋ ಅಲ್ಲಿ ಸ್ವಧರ್ಮ ಮತ್ತು ಸ್ವಸಂಸ್ಕೃತಿಯನ್ನು ಆತ್ಮವಿಶ್ವಾಸದಿಂದ ಮಂಡಿಸಿ ಅದರಿಂದ ಜನರನ್ನು ಪ್ರಭಾವಿಸುವುದು ಹೇಗೆ ಸಾಧ್ಯ? ವಾಸ್ತವಿಕವಾಗಿ ಪ್ರತಿಯೊಬ್ಬ ಹಿಂದುವೂ ಬರೀ ಹುಲ್ಲಿನ ರಾಶಿಯಂತಾಗಿರುವ ಇಡೀ ಸಮಾಜವನ್ನು ತನ್ನ ಹಾಗೆಯೇ ಅಗ್ನಿ ಶಿಖೆಯಂತೆ ತನ್ನ ಪ್ರಾಚೀನ ಶ್ರೇಷ್ಠ ಮತ್ತು ಸತ್ಯಧರ್ಮಗಳ ಅನುಗಾಮಿಗಳಂತೆ ಸಿದ್ಧಪಡಿಸುವೆನೆಂಬ ಆತ್ಮವಿಶ್ವಾಸದಿಂದ ಇರಬೇಕು ಎಂಬ ಅಪೇಕ್ಷೆ ಇದೆ. ಹಾಗೂ ನಮ್ಮ ಧರ್ಮ ಮತ್ತು ಸಂಸ್ಕೃತಿಯ ಸಂಬಂಧದಲ್ಲಿ ಜ್ಞಾನ ಪ್ರಾಪ್ತಿಮಾಡಿಕೊಂಡು, ನಿರ್ಭಯ ಹಾಗೂ ನಿಶ್ಶಂಕಿತರಾಗಿ ಎಲ್ಲರನ್ನೂ ಆಹ್ವಾನಿಸುವ ಶಕ್ತಿ ಪ್ರತಿಯೊಬ್ಬನಲ್ಲೂ ಬರಬೇಕು. ಆ ದೃಷ್ಟಿಯಿಂದ ಒಂದು ಪ್ರಬಲವಾದ ವಾತಾವರಣವನ್ನು ನಿರ್ಮಿಸುವ ಆವಶ್ಯಕತೆ ಇದೆ. ನಮ್ಮ ಸಮಾಜದ ವ್ಯಕ್ತಿ ಇದನ್ನು ಮಾಡಲಾರ ಅಥ-ವಾ ಅವನಲ್ಲಿ ಅಷ್ಟೊಂದು ಬುದ್ಧಿ ಇಲ್ಲ ಎಂದಲ್ಲ, ಆದರೆ ಅವನು ಒಂದು ರೀತಿಯ ಕೀಳರಿಮೆಯಿಂದ ತುಂಬಿದ್ದಾನೆ. ಅವನ ಸ್ವಾಭಿಮಾನವೇ ನಷ್ಟವಾದಂತಾಗಿದೆ.

1200 ವರ್ಷಗಳ ವರೆಗೆ ಪರಕೀಯರ ಆಕ್ರಮಣಗಳಿಂದ ಏಟು ತಿಂದು ತಿಂದು ನಮ್ಮ ಶಕ್ತಿ ಕುಂಠಿತವಾಗಿರುವುದೇ ಇದಕ್ಕೆ ಕಾರಣ. ನಮ್ಮ ಈ ಮಾತೃಭೂಮಿಯಲ್ಲೇ ನಮ್ಮನ್ನು ಹಿಂದುಗಳು ಎಂದು ಕರೆದುಕೊಳ್ಳುವುದಕ್ಕೆ ನಮಗೆ ಸಂಕೋಚ ಹಾಗೂ ಭಯವಾಗುತ್ತಿದೆ.ಆದರೆ ನಾನು ಹಿಂದು, ಈ ಭಾರತದ ಪುಣ್ಯ ಪರಂಪರೆಯನ್ನು ಸಂರಕ್ಷಿಸುವುದು, ಸಂವರ್ಧಿಸುವುದು ಮತ್ತು ಇದನ್ನು ಪೂರ್ಣಗೊಳಿಸುವುದಕ್ಕೆ ನಾನು ಮುನ್ನುಗುತ್ತೇನೆ ಎನ್ನುವ ಸಾಹಸ ಪ್ರಕಟವಾಗಬೇಕು. ಈ ರೀತಿಯ ಆತ್ಮವಿಶ್ವಾಸಯುಕ್ತ ವಾತಾವರಣವನ್ನು ನಮ್ಮ ಈ ಭೂಮಿಯಲ್ಲಿ ನಮ್ಮ ದೊಡ್ಡ ದೊಡ್ಡ ನಾಯಕರು ನಿರ್ಮಿಸಿಯೇ ಇಲ್ಲ.

**ಆತ್ಮಗೌರವವನ್ನು ಹೆಚ್ಚಿಸುವುದಕ್ಕಾಗಿ**

ನಮ್ಮ ಹಿಂದು ಸಮಾಜದ ಎಲ್ಲ ಪಂಥಗಳು, ಉಪ ಪಂಥಗಳಿಗೆ ಅತ್ಯಂತ ಪ್ರಿಯವಾದುದು, ಆದರಣೀಯ ವಾದದ್ದು ಮತ್ತು ಸಂರಕ್ಷಣೆಗೆ ಯೋಗ್ಯವಾದುದು "ಗೋಮಾತೆ". ಇಲ್ಲಿ ಆಂಗ್ಲರ ಪರಕೀಯ ರಾಜ್ಯವಿದ್ದಾಗ ಅವರು ನಮ್ಮ ಆತ್ಮಾಭಿಮಾನವನ್ನು ಮುರಿಯುವುದಕ್ಕಾಗಿ ಗೋಹತ್ಯೆಯನ್ನು ಜಾರಿಗೆ ತಂದರು. ಈಗ ಆಂಗ್ಲರು ಹೊರಟು ಹೋದಮೇಲೂ ನಮ್ಮ ದೇಶದ ಸಮಗ್ರ ಸಮಾಜದ ಸ್ವಾಭಿಮಾನವನ್ನು ಪುನಃ ಸ್ಥಾಪಿಸುವುದಕ್ಕೆ ಗೋವಧೆಯನ್ನು ನಿಲ್ಲಿಸುವ ನಿಶ್ಚಯಮಾಡಿ, ಸಂವಿಧಾನದ ಅನುಸಾರ ಕಾನೂನನ್ನು ರಚಿಸುವ ಸಾಹಸವನ್ನು ನಮ್ಮ ಜನಗಳು ಪ್ರಕಟಿಸಲಿಲ್ಲ. ಈ ರೀತಿಯ ಸ್ಥಿತಿಯಲ್ಲಿ ಬೇರೆ ಬೇರೆ ದೇಶಗಳಲ್ಲಿ ವಾಸಿಸುವ ನಮ್ಮ ಜನಗಳು ಯಾವ ಆಧಾರದ ಮೇಲೆ ಆತ್ಮವಿಶ್ವಾಸದಿಂದ ತಲೆಯೆತ್ತಿ ನಿಲ್ಲಬಲ್ಲರು?

ಈ ಆಧಾರವನ್ನು ಇಲ್ಲಿ ನಾವು ನಿರ್ಮಿಸಬೇಕು. ಇದು ದೇವಭೂಮಿ, ಧರ್ಮಭೂಮಿ, ಇದರಿಂದಲೇ ಈ ಆಧಾರವು ಉತ್ಪನ್ನವಾಗುತ್ತದೆ. ಇದನ್ನು ಉತ್ಪನ್ನಮಾಡುವ ಪ್ರಥಮ ಪ್ರಯತ್ನವಾಗಿ ನಾವೆಲ್ಲರೂ ಹಿಂದುಗಳು ಎಂದು ಸ್ವಾಭಿಮಾನದಿಂದ ಹೇಳೋಣ; ಇಡೀ ವಿಶ್ವದಲ್ಲಿ ಸುತ್ತಾಡೋಣ. ವಿಶ್ವದ ಎಲ್ಲ ಜನಗಳಿಗೆ ತನ್ನ ಮಹಾನ್ ಸನಾತನ ಧರ್ಮದ ಸಿದ್ಧಾಂತಗಳನ್ನು ತಿಳಿಯಹೇಳಿ ಅವರಿಗೆ ಈ ರೀತಿಯ ಜೀವನವನ್ನು ನಡೆಸುವುದಕ್ಕೆ ಪ್ರೋತ್ಸಾಹಿಸೋಣ. ಅಂದರೆ ಕೇವಲ ಸಂಖ್ಯೆಗಳನ್ನು ಹೆಚ್ಚಿಸುವುದು ನಮ್ಮ ಕೆಲಸವಲ್ಲ. ತಮ್ಮ ಸಿದ್ಧಾಂತಗಳ ಮೇಲೆ ವಿಶ್ವಾಸವಿಲ್ಲದಿರುವವರು ಕೇವಲ ಸಂಖ್ಯಾಬಲದ ಮೇಲೆ ವಿಶ್ವಾಸವಿಟ್ಟು ನಡೆಯಬೇಕಾಗುತ್ತದೆ;

ಅವರು ನಡೆಯಲಿ. ನಮ್ಮ ಸಿದ್ಧಾಂತಗಳು ಅವಿಚಲಿತ, ಶ್ರೇಷ್ಠ ಹಾಗೂ ಸನಾತನ ಮತ್ತು ಅಮರವಾಗಿವೆ. ಎಲ್ಲ ರೀತಿಯಿಂದಲೂ ಮನುಷ್ಯನನ್ನು ಅಮರರನ್ನಾಗಿ ಮಾಡುವಂಥವು. ಆದ್ದರಿಂದ ನಮಗೆ ಚಿಂತೆ ಮಾಡುವ ಆವಶ್ಯಕತೆಯೇ ಇಲ್ಲ.

ಭಿನ್ನ ಭಿನ್ನವಾದ ಸಂಪ್ರದಾಯಗಳನ್ನು ಮುಗಿಸುವುದಕ್ಕೆ ನೀವು ಹೊರಟಿದ್ದೀರಾ ಎಂದು ಕೆಲವು ಜನಗಳು ಹೇಳುತ್ತಾರೆ. ಸ್ವಾಮಿ ವಿವೇಕಾನಂದರ ಮಾತುಗಳಲ್ಲಿ ಹೇಳುವುದಾದರೆ ನಮಗೆ ಈ ಯಾವ ಸಂಕಲ್ಪಗಳೂ ಇಲ್ಲ. ನೀವು ಕ್ರೈಸ್ತರಾಗಬೇಡಿ, ಇಸ್ಲಾಂ ರೀತಿಯ ಕುರಾನನ್ನು ಓದಬೇಡಿ ಅಥವಾ ಐದುಬಾರಿ ನಮಾಜ್ ಮಾಡುವುದು ಸರಿಯಲ್ಲ ಎಂದು ನಾವು ಯಾರಿಗೂ ಹೇಳುವುದಿಲ್ಲ. ಬದಲಾಗಿ ಏನೇ ಮಾಡಿದರೂ ಪ್ರಾಮಾಣಿಕರಾಗಿ ಮಾಡಿ, ಚಾರಿತ್ರ್ಯ ಸಂಪನ್ನರಾಗಿ ಮಾನವೀಯತೆಯ ಮೇಲೆ ಪ್ರೇಮವಿಟ್ಟು ಮಾಡಿ ಎಂದು ಮಾತ್ರ ನಾವು ಹೇಳುತ್ತೇವೆ. ಸದಾಚರಣೆ ಮೊದಲಾದ ಸರ್ವ ಶ್ರೇಷ್ಠ ಸದ್ಗುಣಗಳು ಪ್ರಪಂಚದ ಎಲ್ಲ ಮಾನವರಿಗಾಗಿ ಇದೆ. ಅವುಗಳನ್ನು ಪರಿಪಾಲಿಸುತ್ತ ನಡೆಯಿರಿ. ಅವುಗಳ ಹೆಸರಿನಲ್ಲಿ ನಿಮ್ಮ ಸ್ವಾರ್ಥವನ್ನು ಸಾಧಿಸಬೇಡಿ. ಸದಾಚಾರದಿಂದ ವಿಮುಖರಾಗಬೇಡಿ ಮತ್ತು ವಿನಾಶಮಾಡಬೇಡಿ ಎಂಬುದೇ ನಮ್ಮ ಒತ್ತಾಯ.

**ಅನೇಕತೆಯಲ್ಲಿ ಏಕತೆ**

ಹಿಂದೆ ಭಾರತದಲ್ಲಿ ಪಂಥಗಳು ಹಾಗೂ ಸಂಪ್ರದಾಯಗಳಲ್ಲಿ ತಮ್ಮತಮ್ಮಲ್ಲೇ ಸಂಘರ್ಷ ಉಂಟಾದಾಗ ಎಲ್ಲದರ ಸಮನ್ವಯ ಮಾಡುವುದಕ್ಕೆ ಧರ್ಮದ, ತತ್ವಜ್ಞಾನದ ಪ್ರಬಲವಾದ ಅಧಿಷ್ಠಾನದ ಮೇಲೆ ಒಂದು ದೊಡ್ಡದಾದ ಆಂದೋಳನವನ್ನು ಶ್ರೀಮತ್ ಆದಿ ಶಂಕರಾಚಾರ್ಯರು ನಡೆಸಿದರು ಮತ್ತು ಅದರಲ್ಲಿ ಯಶಸ್ಸನ್ನು ಪಡೆದರು. ಇಂದು ನಮ್ಮ ಮುಂದೆ ಎಲ್ಲರ ಬಗ್ಗೆ ಅಂತಃಕರಣದಲ್ಲಿ ಸದ್ಭಾವನೆ ಮತ್ತು ಪ್ರೇಮವಿರಿಸಿ ಈ ಮಹಾನ್, ಚಿರಂಜೀವಿ, ಸನಾತನ ಧರ್ಮದ ಆಧಾರದ ಮೇಲೆ ಎಲ್ಲರೂ ಪ್ರಬಲವಾದ ಪ್ರಯತ್ನ ಮಾಡೋಣ ಎಂಬ ವಿಚಾರ ಇರಬೇಕು. ಇಂದು ಕೆಲವರು ತಮ್ಮನ್ನು ಸನಾತನಿಗಳು ಎಂದು ಮತ್ತೆ ಕೆಲವರು ತಮ್ಮನ್ನು ಆರ್ಯಸಮಾಜಿಗಳು ಎಂದು ಕರೆದುಕೊಳ್ಳುತ್ತಾರೆ. ಈ ಶಬ್ದ ಪ್ರಯೋಗಗಳಿಗೂ ಯಾವುದನ್ನು ನಾನು ಸನಾತನ ಧರ್ಮ ಎನ್ನುತ್ತೇನೋ ಅದಕ್ಕೂ ಸಂಬಂಧವಿಲ್ಲ. ಸನಾತನ ಎಂದರೆ ಎಂದೆಂದಿಗೂ ಇರುವಂತಹುದು. ಇದು ಮೊದಲು ಇತ್ತು. ಈಗ ಇದೆ ಮತ್ತು ಮುಂದೆಯೂ ಇರುತ್ತದೆ. ಹೀಗೆ ನಮ್ಮ ಮಹಾನ್, ಚಿರಂಜೀವಿ, ಸಿದ್ಧಾಂತಮಯ ಮತ್ತು ಆಚಾರಯುಕ್ತವಾದ ಧರ್ಮವು ಸನಾತನ ಧರ್ಮ. ನಮ್ಮ ಈ ಮಹಾನ್ ಪರಂಪರೆಯಲ್ಲಿ ಹುಟ್ಟಿರುವ ಬೌದ್ಧ, ಜೈನ ಮುಂತಾದ ಎಲ್ಲ ಪಂಥಗಳ ಅಂತರ್ಭಾವ ಇದರಲ್ಲಿ ಇರುತ್ತದೆ. ನಮ್ಮಲ್ಲಿನ ದಶಾವತಾರಗಳಲ್ಲಿ ಭಗವಾನ್ ಬುದ್ಧನದೂ ಒಂದು ಅವತಾರ. ಜಯದೇವ ಕವಿಯು ಅವನ ವಿಷಯದಲ್ಲಿ ಹಿಂಸಾತ್ಮಕವಾದ ಯಜ್ಞವನ್ನು ಭಗವಾನ್ ಬುದ್ಧ ವಿರೋಧಿಸಿದ್ದಾನೆಂದು ಹೇಳಿದ್ದಾನೆ.

ನನ್ನ ಪ್ರವಾಸ ಕಾಲದಲ್ಲಿ ನನಗೆ ಒಬ್ಬ ಜೈನ ಮುನಿಗಳು ಸಿಕ್ಕಿದ್ದರು. ನಮ್ಮ ಮೇಲೆ ಅವರ ಅಪಾರ ಕೃಪೆ ಇದೆ. ಒಮ್ಮೆ ನನ್ನ ಮುಂದೆ ಕೆಲವು ಜೈನ ಬಂಧುಗಳು ನಮಗೆ ನಮ್ಮದೇ ಆದ ಜೈನ ಅನುಶಾಸನವಿದೆ. ನಾವು ನಮ್ಮನ್ನು ಹಿಂದುಗಳೆಂದು ಹೇಗೆ ಒಪ್ಪಿಕೊಳ್ಳಲು ಸಾಧ್ಯ? ಎಂದು ಪ್ರಶ್ನಿಸಿದರು. 'ನನಗೆ ಈ ಬಗ್ಗೆ ಹೇಳುವ ಅಧಿಕಾರವಿಲ್ಲ. ನಾನು ಮುನಿಗಳನ್ನೇ ಕೇಳುತ್ತೇನೆ' ಎಂದು ತಿಳಿಸಿದೆ. ನಾನು ಮುನಿಗಳ ಹತ್ತಿರ ಹೋಗಿ, ಜೈನ ಭಗವಾನ್ ಆದೇಶವೇನು ಎಂಬುದನ್ನು ತಿಳಿಸಿ ಎಂದು ಕೇಳಿದೆ. ವೇದಗಳಲ್ಲಿ ಎಲ್ಲ ರೀತಿಯ ಜ್ಞಾನವನ್ನೂ ತಿಳಿಸಿದೆ. ಎಲ್ಲ ರೀತಿಯ ಉಪಾಸನೆಯನ್ನೂ ತೋರಿಸಿದೆ. ಕೆಲವು ಉಪಾಸನೆಗಳು ರಜೋಗುಣಿ ಮನುಷ್ಯರ ಅನುಕೂಲಕ್ಕಾಗಿ, ಇನ್ನೂ ಕೆಲವು ತಮೋಗುಣಿಗಳಿಗಾಗಿ; ವೇದಮಾತೆಯು ಯಾವುದನ್ನೂ ನಿಷೇಧಿಸಿಲ್ಲ. ಎಲ್ಲರಿಗೂ ಅವರವರ ಸ್ವಭಾವಗಳಿಗನುಗುಣವಾಗಿ ಉಪಾಸನೆಯನ್ನು ವಿವರಿಸಿ ಅವನನ್ನು ಮುಂದೆ ತರಲು ಪ್ರಯತ್ನ ಮಾಡಲಾಗಿದೆ. ಪರಮ ಕರುಣಾಳುವಾದ ವೇದಮಾತೆಯು, ಯಾರು ಕೇವಲ ಅತ್ಯಂತ ಸತ್ವಗುಣಿಳಾಗಬಲ್ಲರೋ ಅವರಿಗೆ ದಾರಿ ತೋರಿಸಿದ್ದಾಳೆ. ಈ ಸಿದ್ಧಾಂತಗಳನ್ನು ಹಿಡಿದು ಜೈನ ಸಂಪ್ರದಾಯವು ನಡೆದುಬರುತ್ತಿದೆ. ವೇದದ ಪರಂಪರೆ, ಅದರ ತತ್ವಜ್ಞಾನದ ಆಧಾರದ ಮೇಲೆ ತನ್ನ ಹಿಂದು ಸಮಾಜದ ಜೀವನವನ್ನು ಶುದ್ಧ ಸಾತ್ವಿಕ ರೂಪದಿಂದ ಪರಿಪುಷ್ಟವನ್ನಾಗಿ ಮಾಡಲು ಈ ಜೈನಾನುಶಾಸನವು ನಡೆಯುತ್ತದೆ. ಯಾರು ತಮ್ಮನ್ನು ಹಿಂದುಗಳು ಎಂದು ಒಪ್ಪುವುದಿಲ್ಲವೋ ಅವರು ಜೈನರಾಗಿ ಹೇಗೆ ಇರಬಲ್ಲರು ಎಂದು ಕಡೆಯದಾಗಿ ಅವರು ಹೇಳಿದರು. ಇಷ್ಟುದೊಡ್ಡ ಶ್ರೇಷ್ಠ ಆತ್ಮಾನುಭೂತಿಸಂಪನ್ನರಾದ ಮಹಾ ಪುರುಷರ ಶಬ್ದಗಳು ಅಂತಃಕರಣದ ಮೇಲೆ ಅಂಕಿತವಾಗಿ ಬಿಟ್ಟವು.

ನಮ್ಮ ಎಲ್ಲಾ ಸಂಪ್ರದಾಯಗಳು ಇದೇ ಪರಂಪರೆಯಲ್ಲೇ ಉತ್ಪನ್ನವಾಗಿವೆ. ಕೆಲವರು ಕೆಲವು ವಿಶಿಷ್ಟ ಪದ್ಧತಿಯನ್ನು ನಿಷೇಧಿಸಿರಬಹುದು. ನಿಷೇಧಿಸುವಾಗ ಅವರ ಭಾಷೆ ಆಗಾಗ ಉಗ್ರ ಆಗಿರಬಹುದು. ಆದರೆ ಎಲ್ಲ ಸಂಪ್ರದಾಯಗಳು ತಮ್ಮ ಮೂಲದ ಪರಂಪರೆಯನ್ನು ಹಿಡಿದುಕೊಂಡೇ ಇವೆ. ಆದ್ದರಿಂದ ಎಲ್ಲವೂ ನಮಗೆ ಗ್ರಾಹ್ಯವಾಗಿವೆ, ಪೂಜನೀಯವಾಗಿವೆ. ಅದರಲ್ಲಿ ಎಲ್ಲ ರೀತಿಯ ಸಾಮಂಜಸವನ್ನು ಸ್ಥಾಪಿಸಿ ನಮ್ಮ ಇಡೀ ಸಮಾಜದ ವೈಭವವನ್ನು ಸಾಧಿಸುವುದು ನಮ್ಮ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಇಲ್ಲಿಗೆ ಎಲ್ಲ ಸಂಪ್ರದಾಯಗಳ ಮಹಾನ್

ಆಚಾರ್ಯರುಗಳನ್ನು ಪ್ರಾರ್ಥಿಸಿ, ನಿಮಂತ್ರಿಸಿದ್ದೇವೆ. ಎಲ್ಲರೂ ಸಮಾಜದ ಇಂದಿನ ಸ್ಥಿತಿ, ಅದರಲ್ಲಿ ಏಕೀಕರಣದ ಅತಿ ಅವಶ್ಯಕತೆ, ಪಂಥ ಸಂಪ್ರದಾಯಗಳು ಇತ್ಯಾದಿಗಳ ಬಗ್ಗೆ ತಮ್ಮತಮ್ಮಲ್ಲೇ ಆನಂದದಿಂದ ವಾದವಿವಾದವನ್ನು ಮಾಡುತ್ತಿದ್ದರೂ ಪ್ರತ್ಯಕ್ಷ ವ್ಯವಹಾರದಲ್ಲಿ ಎಲ್ಲರೂ ಸೇರಿ ಒಂದೇ ಆಧಾರದ ಮೇಲೆ ಸಮಾಜ ಹಾಗೂ ರಾಷ್ಟ್ರದ ಹಿತಕ್ಕಾಗಿ ಸಿದ್ಧವಾಗಬೇಕು ಎಂಬ ಆವಶ್ಯಕತೆಯನ್ನು ಮನಗಂಡಿದ್ದಾರೆ. ಎಲ್ಲರೂ ಆಹ್ವಾನವನ್ನು ಸ್ವೀಕರಿಸಿ ಇಲ್ಲಿ ಉಪಸ್ಥಿತರಾಗಿ ಈ ಪರಿಷತ್ತನ್ನು ಆಶೀರ್ವದಿಸಿದ್ದಾರೆ. ಎಲ್ಲರೂ ಈ ಏಕೀಕರಣ, ಸಾಮಂಜಸ್ಯ ಮತ್ತು ಏಕಾತ್ಮತೆಯನ್ನು ಸಮರ್ಥಿಸಿದ್ದಾರೆ.

ಈ ಎರಡು ಎರಡೂವರೆ ದಿನಗಳ ಸುಸಂದರ್ಭ. ಸ್ವರ್ಣಾಕ್ಷರಗಳಲ್ಲಿ ಬರೆಯುವಂಥಾದ್ದಾಗಿದೆ. ಇದು ನಮಗೆ ಭಾಗ್ಯದ ಸಮಯ. ಇಷ್ಟು ವರ್ಷಗಳ ವರೆಗೆ ನಿದ್ರಿಸಿದ್ದ ನಮ್ಮ ಭಾಗ್ಯವು ಮಗ್ಗುಲು ಬದಲಾಯಿಸಿದೆ. ಈಗ ಪ್ರಪಂಚದಲ್ಲಿ ಹಿಂದುತ್ವದ ನಗಾರಿ ಬಾರಿಸುವುದು, ವಿಶ್ವದ ಮಸ್ತಕದ ಮೇಲೆ ನಮ್ಮ ಬಾವುಟವು ಹಾರಾಡುವುದು, ಎಂದು ಸ್ವಾಮಿ ವಿವೇಕಾನಂದರಂತಹ ಮಹಾಪುರುಷರು ಇಡೀ ವಿಶ್ವವನ್ನೇ ಸುತ್ತಾಡಿ ಹೇಳಿದ ಮಾತು ನಿಜ. ಆ ದಿನ ಹತ್ತಿರ ಬರುತ್ತಿದೆ, ಇದರಲ್ಲಿ ಯಾವ ಸಂಶಯವೂ ಇಲ್ಲ.


**ಹಿಂದುತ್ವದ ಪ್ರಬಲವಾದ ಭಾವನೆಯನ್ನು ಜಾಗೃತಗೊಳಿಸೋಣ**

ಈಗ ಕಷ್ಟಪಟ್ಟು ಎಲ್ಲರನ್ನೂ ಸೇರಿಸಿ ಹಿಂದುತ್ವದ ಪ್ರಬಲವಾದ ಭಾವನೆಯನ್ನು ಜಾಗೃತಗೊಳಿಸುವ ಆವಶ್ಯಕತೆಯಿದೆ. ಇದನ್ನು ನಾವು ನಮ್ಮಿಂದ ಪ್ರಾರಂಭಿಸೋಣ. ಇದರಲ್ಲಿ ಉಪದೇಶ ಕೊಡುವಂಥದ್ದೇನೂ ಇಲ್ಲ. ಪ್ರತಿಯೊಬ್ಬನೂ 'ನಾನು ಹಿಂದುವಾಗಿದ್ದೆ. ಹಿಂದುವಾಗಿದ್ದೇನೆ ಮತ್ತು ಹಿಂದುವಾಗಿಯೇ ಇರುವೆನು' ಎಂದು ಹೇಳಲು ಪ್ರಾರಂಭಿಸಲಿ. 'ಶ್ರದ್ಧೆಯಿಂದ ಈ ಮತದ ಆಚರಣೆ ಹಾಗೂ ನಿಯಮಗಳನ್ನು ಪಾಲಿಸುತ್ತೇನೆ. ನನ್ನ ಜೀವನವನ್ನು ಉದ್ಧಾರ ಮಾಡಿಕೊಳ್ಳುತ್ತೇನೆ. ಗುಣ ಸಂಪನ್ನನಾಗಿ, ಚಾರಿತ್ರ ಸಂಪನ್ನನಾಗಿ, ಶೀಲಸಂಪನ್ನನಾಗಿ, ಜಗತ್ತಿನ ಮಾನವರೆದುರು ಆದರ್ಶ ಪ್ರಾಯನಾಗುತ್ತೇನೆ. ಏನಾದರೂ ಕೆಟ್ಟತನವಿದ್ದರೆ, ಅದನ್ನು ಬೇರುಸಮೇತವಾಗಿ ಕಿತ್ತೆಸೆಯಲು ಭಗವಂತನನ್ನು ಪ್ರಾರ್ಥಿಸಿ, ಎಲ್ಲ ರೀತಿಯಿಂದಲೂ ಯಶಸ್ವಿಯಾಗುತ್ತೇನೆ' ಎಂಬ ಪ್ರಯತ್ನವನ್ನು ಪ್ರತಿಯೊಬ್ಬರೂ ಮಾಡಬೇಕು. ಸ್ವತಃ ಈ ಪರಿವರ್ತನೆಯನ್ನು ತಂದುಕೊಳ್ಳುತ್ತಾ ನಾವೆಲ್ಲರೂ ಪರಸ್ಪರ ಜೊತೆಯಲ್ಲಿ ಹೃದಯಗಳನ್ನು ಜೋಡಿಸಿಕೊಂಡು ಪರಸ್ಪರರ ಈ ದೃಢ ವಿಶ್ವಾಸದ ಮತ್ತು ನಿಶ್ಚಯದ ಅನುಭವವನ್ನು ಹಂಚಿಕೊಳ್ಳುತ್ತಾ ಸಮಗ್ರ ಹಿಂದು ಸಮಾಜದಲ್ಲಿ ನಾನು ಹಿಂದು, ಹಿಂದುವಾಗಿರುವುದರಿಂದ, ಹಿಂದುತ್ವದ ಸೂತ್ರದಲ್ಲಿ ಬದ್ಧನಾಗಿರುತ್ತೇನೆ ಎಂದು ಸಂಕಲ್ಪಮಾಡಬೇಕು. ಎಲ್ಲ ಪಂಥಗಳೂ ಸಂಪ್ರದಾಯಗಳು ನನ್ನವು, ಎಲ್ಲಾ ಜಾತಿಗಳೂ ನಮ್ಮವೇ, ಬೆಟ್ಟಗುಡ್ಡಗಳಲ್ಲಿ ಇರುವಂಥ ಜನರೂ ನನ್ನವರೇ, ಅವರು ದುಃಖಿಗಳಾಗಿದ್ದರೆ ಅದು ನಮ್ಮ ದೋಷದಿಂದಲೇ ಎಂದು ತಿಳಿಯಬೇಕು. ಬುದ್ಧಿವಂತರೆಂದು ಕರೆಸಿಕೊಳ್ಳುವ ನಮ್ಮ ಹಿಂದು ಸಮಾಜದ ಉಚ್ಚ ವರ್ಗದ ಕಾರಣದಿಂದಾಗಿ ಉಪೇಕ್ಷಿತರಾಗಿರುವ ನಮ್ಮ ವನ್ಯ ಸಮಾಜವು ನನ್ನದೇ ಅಭಿನ್ನ ಅಂಗ, ಇವರ ಜೊತೆ ಇಷ್ಟು ವರ್ಷಗಳವರೆಗೂ ಮಾಡಿದ ಅನ್ಯಾಯವನ್ನು ತೊಳೆಯಲು, ಏನೇನು ಅವಶ್ಯಕವೋ, ಅವೆಲ್ಲವನ್ನೂ ನಾನು ಮಾಡುತ್ತೇನೆ ಎಂಬ ಪ್ರಬಲ ಭಾವನೆಯು ಎಲ್ಲರಲ್ಲೂ ಉತ್ಪನ್ನವಾಗಬೇಕು. ಒಂದೇ ಸೂತ್ರದಲ್ಲಿ ಬದ್ಧವಾಗಿ, ಶಕ್ತಿಸಂಪನ್ನವಾದ ಜಗತ್ತಿನಲ್ಲಿ ತಲೆಎತ್ತಿ ನಿಲ್ಲುವ ಹಿಂದು ಸಮಾಜವು, ತನ್ನ ಜನ್ಮಸ್ಥಾನವಾದ ಈ ಮೂಲಭೂಮಿಯಲ್ಲಿ ಆಸೇತು ಹಿಮಾಚಲ ನಿಲ್ಲುವುದು ಎಂಬ ದೃಢ ನಿಶ್ಚಯವನ್ನು ಮಾಡಿ ಕೆಲಸದಲ್ಲಿ ತೊಡಗೋಣ.

ಈ ನಿಶ್ಚಯದಿಂದಲೇ ಜಗತ್ತಿನ ಮೂಲೆಮೂಲೆಗಳಿಗೂ ಹೋಗಿ ನಾವು ನಮ್ಮ ಧರ್ಮದ ಪ್ರಚಾರ ಮಾಡಿ, ಅಲ್ಲಿಯ ಎಲ್ಲ ಹಿಂದುಗಳನ್ನು ಜಾಗೃತಗೊಳಿಸಿ ಅವರನ್ನು ಸುಸಂಸ್ಕೃತರನ್ನಾಗಿ ಮಾಡಬಲ್ಲೆವು. ಜ್ವಲಂತ ಅಗ್ನಿಶಿಖೆಯಂತೆ ಪ್ರತಿಯೊಬ್ಬ ವ್ಯಕ್ತಿಯೂ ಕೆಲಸಮಾಡಬಲ್ಲ. ಈ ಪ್ರಕಾರವಾಗಿ ನಮ್ಮ ಮಹಾನ್ ಧರ್ಮದ ಅಮರ ತೇಜಸ್ಸಿನಿಂದ ಜಗತ್ತನ್ನು ನಿಶ್ಚಯವಾಗಿ ಹಿಂದುಗಳು ಅಲಂಗಿಸಬಲ್ಲೆವು ಎಂದು ನಿಶ್ಚಯಿಸಿ ನಾವು ಕೆಲಸಮಾಡಲು ಮುನ್ನುಗ್ಗಬೇಕು. ಈ ಕೆಲಸದ ಪ್ರಾರಂಭ ಇದು.

ಸಮ್ಮೇಳನದಲ್ಲಿ ಮಂಡಿಸಿದ ಪ್ರಸ್ತಾವನೆಗಳಿಗನುಸಾರವಾಗಿ ಸ್ಥಾಯೀ ಸಮಿತಿ ರಚಿಸಲಾಗುತ್ತದೆ. ಅದರ ಕಾರ್ಯ ಪ್ರಾರಂಭವಾಗುತ್ತದೆ. ಅದರ ಕಾರ್ಯಕರ್ತರು ಕೆಲಸ ಮಾಡುತ್ತಾರೆ. ಆದರೆ, ಪೂರ್ಣಶಕ್ತಿಯನ್ನು ವಿನಿಯೋಗಿಸಿ ಅದನ್ನು ಒಳ್ಳೆಯ ರೀತಿಯಲ್ಲಿ ಪೋಷಿಸುವುದು ನಮ್ಮೆಲ್ಲರ ಕರ್ತವ್ಯ. ಯಾವ ಯಾವ ಕೆಲಸಗಳನ್ನು ಮಾಡಬೇಕಾದ ಆವಶ್ಯಕತೆ ಉಂಟಾಗುತ್ತದೋ, ಅವುಗಳನ್ನು ಪೂರೈಸಲು ಎಂದೂ ಹಿಂಜರಿಯುವುದಿಲ್ಲ ಎಂಬ ನಿಶ್ಚಯಮಾಡಿ ನಾವು ಕೆಲಸ ಮಾಡೋಣ. ನಮ್ಮ ಮುಂದಿರುವ ಕರ್ತವ್ಯ ಬಹಳ ದೊಡ್ಡದು. ಎಲ್ಲ ಬಂಧುಗಳಿಗೂ ಜ್ಞಾಪಿಸುವ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ಎಲ್ಲ ಸಾಧು ಸಂತರ ಆಶೀರ್ವಾದವನ್ನು ಪಡೆದು, ವಿಶ್ವ ಹಿಂದು ಪರಿಷತ್ತನ್ನು ಸದಾಕಾಲಕ್ಕೂ ಪ್ರಬಲವಾಗಿ, ಶಕ್ತಿಶಾಲಿಯಾಗಿ ಮಾಡುವ ದೃಢನಿಶ್ಚಯದಿಂದ ನಾವು ಇಲ್ಲಿಂದ ತೆರಳೋಣ.

# ಉಡುಪಿ ಸಮ್ಮೇಳನ – 1969



1969 ಡಿಸೆಂಬರ್ 13, 14ರಂದು ಉಡುಪಿಯಲ್ಲಿ ನಡೆದಿದ್ದ ವಿಶ್ವ ಹಿಂದು ಪರಿಷತ್ತಿನ ಕರ್ನಾಟಕ ಪ್ರಾಂತೀಯ ಸಮ್ಮೇಳನ ಅಸ್ಪೃಶ್ಯತೆಯ ನಿವಾರಣೆಯ ನಿಟ್ಟಿನಲ್ಲಿ ಒಂದು ಐತಿಹಾಸಿಕ ಪ್ರಸಂಗವಾಯಿತು.

ಈ ಸಮ್ಮೇಳನದ ಮುಖ್ಯ ಸಭೆಯಿದ್ದುದು ಡಿಸೆಂಬರ್ 13ರ ಮಧ್ಯಾಹ್ನ. ಬೌದ್ಧ, ಜೈನ, ಸಿಕ್ಖ್, ವೀರಶೈವ, ಸ್ಮಾರ್ತ, ವೈಷ್ಣವ ಮೊದಲಾದ ವಿವಿಧ ಪಂಥ, ಪಂಗಡಗಳನ್ನು ಪ್ರತಿನಿಧಿಸಿ ಸುಮಾರು 45ರಷ್ಟು ಧರ್ಮಾಚಾರ್ಯರು ಅಲಂಕರಿಸಿದ್ದ ವೇದಿಕೆ. ಜತೆಯಲ್ಲಿ ವಿಶ್ವ ಹಿಂದು ಪರಿಷತ್ತಿನ ಆಗಿನ ಅಧ್ಯಕ್ಷ ಉದಯಪುರದ ಮಹಾರಾಣಾ, ಗ್ವಾಲಿಯರದ ರಾಜಮಾತೆ, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ, ಪೂರ್ವ ಸೇನಾಪತಿ ಜನರಲ್ ಕೆ.ಎಂ. ಕಾರ್ಯಪ್ಪ, ಮಣಿಪಾಲದ ಶಿಲ್ಪಿ ಡಾ. ಟಿ.ಎಂ.ಎ.ಪೈ, ಹಿರಿಯ ಲೇಖಕಿ ಜಯದೇವಿ ತಾಯಿ ಲಿಗಾಡೆ ಮೊದಲಾದ ಗಣ್ಯ ಸಾಮಾಜಿಕ ಮುಖಂಡರೂ ಅಲ್ಲಿ ವಿರಾಜಮಾನರಾಗಿದ್ದರು. ಅಧ್ಯಕ್ಷತೆ ವಹಿಸಿದ್ದವರು ಪಬ್ಲಿಕ್ ಸರ್ವಿಸ್ ಕಮಿಶನ್‌ನ ಹಿರಿಯ ಐಎಎಸ್ (ನಿವೃತ್ತ) ಅಧಿಕಾರಿ ಶ್ರೀ ಆರ್. ಭರಣಯ್ಯನವರು. ಈ ಸಭೆ ಅಸ್ಪೃಶ್ಯತೆಯ ಆಚರಣೆಗೆ ಧಾರ್ಮಿಕ ಮನ್ನಣೆ ಇಲ್ಲವಾದುದರಿಂದ ಅದನ್ನು ತಪ್ಪೆಂದು ಒಪ್ಪಿಕೊಂಡು ಹಾಗೂ ಪ್ರತ್ಯಕ್ಷ ವ್ಯವಹಾರದಿಂದ ಅದನ್ನು ಪೂರಾ ತೊಲಗಿಸಿಕೊಂಡು, ಹಿಂದುಗಳೆಲ್ಲರೂ ಪರಸ್ಪರ ಸೋದರರಂತೆ ನಡೆದುಕೊಳ್ಳಬೇಕೆಂದು ಒಂದು ಠರಾವಿನ ಮೂಲಕ ಸಮಾಜಕ್ಕೆ ಕರೆ ನೀಡಿತು. ಎಲ್ಲ ಧರ್ಮಾಚಾರ್ಯರು ತಮ್ಮ ಸಹಿ ಸಹಿತ ಪ್ರಸ್ತುತಪಡಿಸಿದ್ದ, "ಸಮಸ್ತ ಹಿಂದು ಸಮಾಜವನ್ನು ಸಂಘಟಿಸಬೇಕೆಂಬ ಘನ ಉದ್ದೇಶದಿಂದ ವಿಶ್ವ ಹಿಂದು ಪರಿಷತ್ ಶ್ರಮಿಸುತ್ತಿರುವುದು ಸರ್ವ ವಿದಿತವಾಗಿದೆ. ಸಂಪೂರ್ಣ ಹಿಂದು ಸಮಾಜವನ್ನು ಅವಿಭಾಜ್ಯ ಏಕಾತ್ಮಭಾವದಿಂದ ಸಂಘಟಿತಗೊಳಿಸಬೇಕೆಂಬ ಹಾಗೂ ಸ್ಪೃಶ್ಯ–ಅಸ್ಪೃಶ್ಯ ಎನ್ನುವಂಥ ಭಾವನೆ, ಪ್ರವೃತ್ತಿಗಳಿಂದಾಗಿ ಸಮಾಜ ಜೀವನವು ಒಡೆದು ಹೋಗಬಾರದೆಂಬ ಘನ ಉದ್ದೇಶಕ್ಕನುಗುಣವಾಗಿ

ವಿಶ್ವದಲ್ಲಿರುವ ಸರ್ವ ಹಿಂದುಗಳು ತಮ್ಮ ಪರಸ್ಪರ ವ್ಯವಹಾರಗಳೆಲ್ಲದರಲ್ಲಿ ಏಕತೆ ಹಾಗೂ ಸಮಾನತೆಯ ಭಾವದಿಂದ ವರ್ತಿಸತಕ್ಕದ್ದು" (ಮೂಲ ಸಂಸ್ಕೃತದಿಂದ ಅನುವಾದಿತ) ಎಂಬ ಠರಾವನ್ನು ಸಭೆಯು ಒಕ್ಕೊರಲ ಓಂಕಾರದೊಂದಿಗೆ ಸ್ವೀಕರಿಸಿತು. ಹಿಂದು ಸಮಾಜದ ವಿವಿಧ ಸವರ್ಣೀಯ ಮತ, ಪಂಥಗಳಿಗೆ ಸೇರಿದ ಧರ್ಮಾಚಾರ್ಯರು, ಅನೇಕ ಜಾತಿ, ವರ್ಗಗಳಿಗೆ ಸೇರಿದ ಸಾಮಾಜಿಕ ನಾಯಕರು, ಅಸ್ಪೃಶ್ಯರೆನಿಸುವ ವರ್ಗದ ಓರ್ವ ಸುಶಿಕ್ಷಿತ ಗೌರವಾನ್ವಿತ ಸಜ್ಜನರ ಅಧ್ಯಕ್ಷತೆಯಲ್ಲಿ ಒಂದುಗೂಡಿ ಬಂದು ಹಲವು ಶತಮಾನಗಳಿಂದ ಆಚರಣೆಯಲ್ಲಿದ್ದ ಅನಿಷ್ಟ ಕಲಂಕವೊಂದನ್ನು ನಿರ್ಣಾಯಕವಾಗಿ ತೊಲಗಿಸಲು ಮತ್ತು ಹಿಂದು ಸಮಾಜವನ್ನು ಶುದ್ಧೀಕರಿಸಲು ಸಂಕಲ್ಪಿಸಿದ್ದ ಐತಿಹಾಸಿಕ ಪ್ರಸಂಗವಾಯಿತದು. ಠರಾವು ಸ್ವೀಕಾರವಾದಂತೆಯೇ ಹರ್ಷಾತಿರೇಕದಿಂದ ಶ್ರೀ ಗುರೂಜಿಯವರ ಮುಖದಿಂದ ಚಿಮ್ಮಿದ ಉದ್ಗಾರ, ಅವರೇ ನೀಡಿದ್ದ ಕರೆಯಂತೆ ಹಲವು ನಿಮಿಷಗಳ ಕಾಲ ಸಭಾಮಂಟಪವೆಲ್ಲ ಪ್ರಚಂಡ ಕರತಾಡನದಿಂದ ಗುಡುಗುಡಿಸಿತು. 'ಸನಾತನ ಹಿಂದು ಧರ್ಮ ಕೀ ಜಯ್', 'ಸಬ ಸಂತಗಣ ಕೀ ಜಯ್' ಘೋಷಣೆಗಳು ಅಲೆ ಅಲೆಯಾಗಿ ಉಕ್ಕಿ ಹರಿದವು. ಪೂಜ್ಯ ಪೇಜಾವರ ಶ್ರೀಯವರು ಹೇಳಿಕೊಟ್ಟ 'ಹಿಂದವಃ ಸೋದರಾಃ ಸರ್ವೇ' (ಹಿಂದುಗಳೆಲ್ಲರೂ ಸೋದರರು) ಎಂಬ ಘೋಷಣೆಯನ್ನು ಸಭೆಯಲ್ಲಿದ್ದ ಅಪಾರ ಜನಸ್ತೋಮ ಬೋರ್ಗರೆದು ಮಾರ್ದನಿಸಿತು.

ಶ್ರೀ ಭರಣಯ್ಯನವರ ಬಗ್ಗೆ ಒಂದು ಮಾತು. ಓರ್ವ ಐಎಎಸ್ ಅಧಿಕಾರಿಯಾಗಿದ್ದು ಡಾ॥ ಅಂಬೇಡ್ಕರರಂತೆ ಸ್ವತಃ ಅಸ್ಪೃಶ್ಯತೆಯ ಕಹಿ, ನೋವು, ಅವಮಾನ ಇತ್ಯಾದಿ ಉಂಡು ಬೆಳೆದಿದ್ದವರು ಅವರು. ಅಷ್ಟಾದರೂ ಹಿಂದುತನದ ಶ್ರದ್ಧೆಯನ್ನೂ ಉಳಿಸಿಕೊಂಡಿದ್ದರು. ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಆಹ್ವಾನಿತರಾದಾಗ ತನ್ನೊಂದಿಗೆ ಇತರರ ವ್ಯವಹಾರ, ತನಗೆ ಸಿಗಬಹುದಾದ ಗೌರವ ಇತ್ಯಾದಿ ಬಗ್ಗೆ ಸಂದೇಹಗ್ರಸ್ತರಾಗಿದ್ದುಕೊಂಡೇ ಬಂದಿದ್ದರು ಅವರು. ಆದರೆ ಯಾವುದೇ ಐಬಿ ಅಥವಾ ಹೊಟೇಲಲ್ಲಿ ಉಳಿಸದ ಓರ್ವ ಉಚ್ಚಕುಲದವರೆನಿಸುವ ಸವರ್ಣೀಯ ಸದ್ಗೃಹಸ್ಥರ ಮನೆಯಲ್ಲಿ ಅತಿಥಿಯಾಗಿ ಉಳಿಸಿದುದೇ ಅವ–ರಿಗೆ ಆಶ್ಚರ್ಯವುಂಟುಮಾಡಿತ್ತು. ಆ ಮನೆಯಲ್ಲಿನ ತುಂಬುಮನದ ಆತಿಥ್ಯ, ಒಮ್ಮೆ ಶ್ರೀ ಗುರೂಜಿಯವರ ಸಮೀಪವೇ ಕುಳಿತು ಸಹಪಂಕ್ತಿ ಭೋಜನ, ಜತೆಯಲ್ಲಿ ಬಿಚ್ಚುಮನದ ಮಾತುಕತೆ ಇವೆಲ್ಲದರಿಂದ ಸಮ್ಮೇಳನದ ವ್ಯವಸ್ಥಾಪಕರ ಪಾರದರ್ಶಕತೆ ಮತ್ತು ಅಸ್ಪೃಶ್ಯತೆಯ ನಿವಾರಣೆಯ ಕುರಿತು ಪ್ರಾಮಾಣಿಕ ಹಂಬಲ ಅವ–ರಿಗೆ ಅನುಭೂತವಾಯಿತು. ಅದಕ್ಕೆ ಕಲಶವಿಟ್ಟಂತೆ ಸಮ್ಮೇಳನದ ಆ ಅಭೂತಪೂರ್ವ ಸಭೆ, ಅಲ್ಲಿ ವಿವಿಧ





ಧರ್ಮಾಚಾರ್ಯರೇ ಅಸ್ಪೃಶ್ಯತೆಯ ಆಚರಣೆಗೆ ಧರ್ಮದ ಮನ್ನಣೆಯಿಲ್ಲವೆಂದು ಹಿಂದು ಸಮಾಜ–ಕ್ಕೆ ನೀಡಿದ್ದ ಆದೇಶ, ಆ ವಿಚಾರವನ್ನು ಬಿಂಬಿಸಿದ ಠರಾವು, ಅದಕ್ಕೆ ಸಭೆಯಿಂದ ಮೂಡಿ ಬಂದ ಅತ್ಯದ್ಭುತ ಸ್ವಯಂಪ್ರೇರಿತ ಸ್ವಾಗತ, ಸಮ್ಮೇಳನದ ಎರಡೂ ದಿನಗಳ ಕಾಲ ನಡೆದಿದ್ದ ವಿವಿಧ ಕಲಾಪಗಳು – ಇವೆಲ್ಲವೂ ಅಸ್ಪೃಶ್ಯತೆಯ ಶಾಪದಿಂದ ಮುಕ್ತಗೊಂಡು, ಹಿಂದು ಸಮಾಜವು ತನ್ನ ಆಂತರಿಕ ಶುದ್ಧೀಕರಣಕ್ಕಾಗಿ ಮನಃಪೂರ್ವಕ ಸಿದ್ಧವಾಗಿದೆಯೆಂಬ ಭರವಸೆಯನ್ನು ಅವರಲ್ಲಿಮೂಡಿಸಿತ್ತು.

ಉಡುಪಿ ಆಗ ಸುಮಾರು 30,000ದಷ್ಟು ಜನಸಂಖ್ಯೆಯ ಸಣ್ಣ ನಗರ. ಆದರೆ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳು ಸುಮಾರು 15,000. ಸುಮಾರು 6,000 ಪ್ರತಿನಿಧಿಗಳಿಗಾಗಿ ಮಾಡಲಾಗಿದ್ದ ಆಹಾರ, ವಸತಿ ಇತ್ಯಾದಿ ವ್ಯವಸ್ಥೆಗಳೆಲ್ಲ ಕುಸಿದು ಬೀಳಬಹುದಾದ ಸ್ಥಿತಿ ಏರ್ಪಟ್ಟಾಗ, ದೂರ ದೂರದಿಂದ – ಸುಮಾರು 2,500ರಷ್ಟು ಊರುಗಳಿಂದ – ಬಂದಿದ್ದ ಪ್ರತಿನಿಧಿಗಳಿಗೆ ಯಾವುದೇ ಅನಾನುಕೂಲತೆಯಾಗದಂತೆ ಎಲ್ಲ ಸೌಕರ್ಯಗಳನ್ನು ಒದಗಿಸಲು ಸಂಪೂರ್ಣ ಉಡುಪಿ ನಗರ ಒಂದಾಗಿ ಎದ್ದು ನಿಂತಿತು. ಜಾತಿ, ವರ್ಗ, ಸಾಮಾಜಿಕ ಸ್ತರ ಇತ್ಯಾದಿ ಏನೂ ಲೆಕ್ಕಿಸದೆ ಪೂರಾ ಅಪರಿಚಿತರೇ ಆಗಿದ್ದ ಪ್ರತಿನಿಧಿಗಳಿಗೆ ಕಡು ಸಂಪ್ರದಾಯ ನಿಷ್ಠರದೂ ಒಳಗೊಂಡಂತೆ ಮನೆ ಮನೆಗಳೂ ಬಾಗಿಲು ತೆರೆದವು. ಹಲವು ಶತಮಾನಗಳ ಹಿಂದೆ ಜಾತಿಯ ಕಾರಣಕ್ಕಾಗಿ ಸಂತ ಕನಕದಾಸರಿಗೆ ಮಂದಿರದ ಪ್ರವೇಶ ನಿರಾಕರಿಸಿದ್ದ ಅದೇ ಉಡುಪಿ ತನ್ನ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯವನ್ನು ತೆರೆಯಿತು. ಸಮ್ಮೇಳನದ ಆರಂಭವೇ ಒಂದು ನೂತನ ಮೌನ ಸಾಮಾಜಿಕ ಕ್ರಾಂತಿಯಿಂದಾಯಿತು.

**ಕಾಲವನ್ನು ತಿದ್ದ ಬಲ್ಲ ವ್ಯಕ್ತಿಗಳು:** ಸಂಸ್ಕಾರ ಪಡೆದ ವ್ಯಕ್ತಿಗಳೇ ಗುಣಸಂಪನ್ನರಾಗಿ ತಮ್ಮ ನಿಃಸ್ಪೃಹ ಜೀವನದಿಂದ ಸಮಾಜವನ್ನು ತಿದ್ದಬಲ್ಲರು, ತಿದ್ದುತ್ತಿದ್ದರು. ಅವರು ಯಾವ ಕ್ಷೇತ್ರದಲ್ಲೇ ಪ್ರವೇಶಿಸಿದರೂ ಆ ಕ್ಷೇತ್ರ ಉತ್ತಮಗೊಳ್ಳುತ್ತದೆ. ಇಂದು ಜಗತ್ತಿನಲ್ಲಿ ನಡೆದಿರುವ ಪ್ರಯೋಗಗಳಲ್ಲಿ ಬಹುಪಾಲು ಈ ಅಂಶವನ್ನು ಮರೆತು, ವ್ಯವಸ್ಥೆಯ ಮೂಲಕ ಮಾನವನನ್ನು ತಿದ್ದಲು ಹೊರಟಿವೆ, ಸೋತಿವೆ. ವ್ಯವಸ್ಥೆ ಮಾನವನನ್ನು ತಿದ್ದುವುದೋ ಮಾನವ ವ್ಯವಸ್ಥೆಯನ್ನು ತಿದ್ದುವವನೋ ಎಂಬ ಚರ್ಚೆ ನಡೆದಿದೆ, ನಡೆಯುತ್ತಿವೆ. ಚರ್ಚೆ ಕೊನೆಗೊಳ್ಳುವುದೂ ಇಲ್ಲ. 'ವೃಕ್ಷ ಮೊದಲೋ ಬೀಜ ಮೊದಲೋ' ಎಂಬ ಪ್ರಶ್ನೆ ಇದ್ದಂತೆ ಇದು. ಆದರೂ ವ್ಯವಸ್ಥೆ ತನ್ನದೇ ಆದ ರೀತಿಯಲ್ಲಿ ಇದಕ್ಕೆ ಉತ್ತರ ನೀಡಿದೆ.


ಭೀಷ್ಮರು ಧರ್ಮರಾಯನಿಗೆ ಮಹಾಭಾರತದಲ್ಲೇ ಉತ್ತರ ನೀಡಿದ್ದಾರೆ.

**ಕಾಲೋ ವಾ ಕಾರಣಂ ರಾಜ್ಞಃ ರಾಜಾ ವಾ ಕಾಲಕಾರಣಂ।**
**ಇತಿ ತೇ ಸಂಶಯೋ ಮಾಭೂತ್ ರಾಜಾ ಕಾಲಸ್ಯ ಕಾರಣಂ॥**

"ಕಾಲದಿಂದ ರಾಜನೋ ರಾಜನಿಂದ ಕಾಲವೋ ಎಂಭ ಗೊಂದಲಬೇಡ. ರಾಜನೇ ಕಾಲವನ್ನು ನಿರ್ಮಿಸುವವನು. ಇಲ್ಲಿ ರಾಜ ಎಂದರೆ ದೊರೆ ಎಂದರ್ಥವಲ್ಲ. ರಾಜ ಎಂದರೆ ಜನಗಳ ಒಲವು ಗಳಿಸಿದ ಜನನಾಯಕ. ಅಂಥವರೇ ಕಾಲವನ್ನು ನಿರ್ವಹಿಸಬಲ್ಲರು.

# ದಾರಿದೀಪ

– ಶ್ರೀ ಗುರೂಜಿ ಗೋಳವಲ್ಕರ್



ವಿಶ್ವ ಹಿಂದು ಪರಿಷತ್ತಿನ ಕರ್ನಾಟಕ ಪ್ರಾಂತೀಯ ಸಮ್ಮೇಳನವು ಕೊನೆಗೊಂಡಿದೆ. ಅದು ಸಂಯೋಜಕರ, ಕಾರ್ಯಕರ್ತರ ಪರಮೋಚ್ಚ ನಿರೀಕ್ಷೆಯನ್ನೂ ಮೀರಿಸುವಷ್ಟು ವಿಜೃಂಭಣೆಯಿಂದ ಜರುಗಿತು. ಸಮ್ಮೇಳನದ ಈ ಯಶಸ್ಸಿನಿಂದಾಗಿ ಜನಮನದಲ್ಲಿ ಸಹಜವಾಗಿಯೇ ಆಸೆ–ನಿರೀಕ್ಷಣೆಗಳು ಆಗಾಧವಾಗಿ ಬೆಳೆದಿವೆ. ಆದರೆ ಯಕ್ಷಿಣಿ ಪ್ರಯೋಗದಂತೆ ತಕ್ಷಣದಲ್ಲೇ ಎಲ್ಲವೂ ಉತ್ತಮಗೊಂಡೀತೆಂದು ಭಾವಿಸುವುದು ಸರಿಯಲ್ಲ. ಅದಕ್ಕಾಗಿ ಅವಿರತ ಪರಿಶ್ರಮ ಅಗತ್ಯ. ವಾಸ್ತವವಾಗಿ, ಈ ಸಮ್ಮೇಳನವು ಹಿಂದು ಜನಾಂಗದ ಸರ್ವತೋಮುಖ ಉನ್ನತಿ ಹಾಗೂ ಸಂಘಟನೆಗಾಗಿ ಅವಿಶ್ರಾಂತ ದುಡಿಮೆಗೈಯಲು ಸ್ಫೂರ್ತಿಯ ಕರೆ ನೀಡಿದೆ ಎಂದು ತಿಳಿಯುವುದೇ ಯೋಗ್ಯ. ಸಮ್ಮೇಳನದ ಯಶಸ್ಸು ನಮ್ಮಲ್ಲಿ ಆತ್ಮಸಂತೃಪ್ತಿ ಮೂಡಿಸುವಂತಾಗಬಾರದು.

ಉದಾಹರಣೆಗೆ, ಅಸ್ಪೃಶ್ಯತೆಯ ಬಗ್ಗೆ ಮಾಡಿರುವ ನಿರ್ಣಯವನ್ನೇ ತೆಗೆದುಕೊಳ್ಳಿ, ನಮ್ಮ ಆಚಾರ್ಯರು, ಧರ್ಮ ಗುರುಗಳು, ಮಠಾಧಿಪತಿಗಳು ಮತ್ತು ಇನ್ನಿತರ ಸಾಧುಸಂತರೆಲ್ಲರ ಆಶೀರ್ವಾದವೂ ಆದಕ್ಕಿದೆ. ಆದರೆ ನಾವು ನಿರ್ಣಯ ಮಾಡಿ ಸದ್ಭಾವನೆ ಪ್ರಕಟ ಮಾಡಿದ ಮಾತ್ರಕ್ಕೆ ಅದನ್ನು ಪ್ರತ್ಯಕ್ಷ ಜೀವನದಲ್ಲಿ ತಂದಂತಾಗುವುದಿಲ್ಲ. ಶತಮಾನಗಳಿಂದ ಬೆಳೆದು ಬಂದಿರುವ ಪೂರ್ವಾಗ್ರಹಗಳು ಬರಿಯ ಮಾತುಗಳಿಂದಾಗಲೀ, ಸದಿಚ್ಛೆಗಳಿಂದಾಗಲೀ ಮಾಯವಾಗುವುದಿಲ್ಲ. ಅದಕ್ಕಾಗಿ ಬೆವರು ಹರಿಸಬೇಕು. ಊರಿಂದ ಊರಿಗೆ, ಗ್ರಾಮದಿಂದ ಗ್ರಾಮಕ್ಕೆ, ಮನೆಯಿಂದ ಮನೆಗೆ ಸರಿಯಾದ ಪ್ರಚಾರ ನಡೆಸಬೇಕು. ನಿರ್ಣಯವನ್ನು ಮನಸಾರೆ ಒಪ್ಪಿ ರೂಢಿಯಲ್ಲಿ ತರುವಂತೆ ಜನಕ್ಕೆ ಶಿಕ್ಷಣ ನೀಡಬೇಕು. ಪ್ರಸ್ತುತ ಪರಿಸ್ಥಿತಿಯ ಒತ್ತಡಕ್ಕಾಗಿ ತೋರಿದ ಏನೋ ಅನಿವಾರ್ಯ ರಿಯಾಯಿತಿ ಎನ್ನುವ ರೀತಿಯಲ್ಲಲ್ಲ, ಆದರೆ ಹಿಂದಿನ ಅಪರಾಧಗಳಿಗೆ ಪ್ರಾಯಶ್ಚಿತ್ತವೆಂಬ ವಿನಮ್ರಭಾವನೆಯಿಂದ, ಚಿರಕಾಲಿಕ ಸಿದ್ಧಾಂತವಾಗಿ ಹಾಗೂ ಜೀವನ ವಿಧಾನವಾಗಿ ಇದನ್ನು ಕೈಗೊಳ್ಳಬೇಕು. ಅದಕ್ಕಾಗಿ ಸಮಗ್ರ ಸಮಾಜದಲ್ಲಿ ಹೃದಯ ಪರಿವರ್ತನೆಯಾಗಿ ಮನಃ ಪ್ರವೃತಿಯಲ್ಲೂ ನಡವಳಿಕೆಯಲ್ಲೂ ನೈತಿಕ ಹಾಗೂ ಭಾವನಾತ್ಮಕ ಬದಲಾವಣೆ ಆಗಬೇಕಾಗಿದೆ. ಇಲ್ಲಿವರೆಗೆ ಕೆಳಗೆ ಬಿದ್ದಿದ್ದವರನ್ನು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಮೇಲೆತ್ತಿ ಅವರು ನಮ್ಮ ಉಳಿದ ಸಮಾಜಬಾಂಧವರೊಂದಿಗೆ ಸರಿಸಮನಾಗಿ ನಿಲ್ಲುವಂತೆ ಮಾಡುವುದು ನಿಜಕ್ಕೂ ಭಗೀರಥ ಪ್ರಯತ್ನವೇ ಸರಿ. ಆದರೆ ಇದಿಷ್ಟೇ ಸಾಲದು, ಏಕೆಂದರೆ, ಅವರು ಪ್ರತ್ಯೇಕವೆಂಬ ಭಾವನೆಯನ್ನು ಬಿಟ್ಟುಕೊಡದೆಯೇ ಅಂತಹ ಸಮಾನತೆಯನ್ನು ತರಲು ಸಾಧ್ಯ. ನಾವು ಇಚ್ಛಿಸಬೇಕಾದುದು, ಪ್ರಯತ್ನಿಸಬೇಕಾದುದು ಕೇವಲ ಆರ್ಥಿಕ ಹಾಗೂ ರಾಜಕೀಯ 'ಸಮಾನತೆ'ಗಾಗಿ ಮಾತ್ರವಲ್ಲ. ನಮಗೆ ಬೇಕಾದುದು ನಿಜವಾದ ಪರಿವರ್ತನೆ, ಸಂಪೂರ್ಣ ಭಾವೈಕ್ಯ ಇಂಥ ಬದಲಾವಣೆಯು, ರಾಜಕಾರಣದಿಂದಾಗಲೀ, ಸರಕಾರಿ ಯೋಜನೆಗಳಿಂದಾಗಲೀ ಸಾಧ್ಯವಿಲ್ಲ. ಭಾವೈಕ್ಯದ ಹೆಸರಿನಲ್ಲಿ ತೇಪೆ ಕೆಲಸ ಮಾಡುತ್ತಿರುವ ರಾಜಕೀಯ ಪಕ್ಷಗಳ ಯುಕ್ತಿ ಪ್ರಯುಕ್ತಿಗಳಿಂದಲೂ ಇದು ಸಾಧ್ಯವಾಗದು. ಹೃತ್ಪೂರ್ವಕವಾಗಿ ಹೊರಹೊಮ್ಮಿ, ದಿನನಿತ್ಯದ ನಡವಳಿಕೆಯಲ್ಲಿ ಎದ್ದುಕಾಣುವಂಥ ಕಠಿಣ ಪರಿಶ್ರಮವನ್ನು ಆಧ್ಯಾತ್ಮಿಕ, ನೈತಿಕ ಹಾಗೂ ಸಾಮಾಜಿಕ ಸ್ತರಗಳಲ್ಲಿ ಸು–

ರಿಯಬೇಕು. ಸಮ್ಮೇಳನದಲ್ಲಿ ಭಾಗವಹಿಸಿದ್ದವರೂ, ಸಹಾನುಭೂತಿ ಹಾಗೂ ಸಹಕಾರ ನೀಡಿದ್ದ ಸರ್ವರೂ ಮುಂದೆ ಬಂದು, ಒಟ್ಟಿಗೆ ಕೈಹಾಕಿ, ಒಂದೇ ಒಂದು ಪ್ರಚಂಡ ಪ್ರಹಾರದಿಂದ ಹಳೆಯ ಅನಿಷ್ಟ ಪೂರ್ವಾಗ್ರಹಳೆಲ್ಲವನ್ನು ಧೂಳೀಪಟ ಮಾಡಬೇಕು.

ಮತ್ತೊಂದು ಮಹತ್ವದ ಕೆಲಸ ಇದೆ. ನಮ್ಮ ಜನರಿಗೆ ಧರ್ಮದ ಎರಡು ಮುಖಗಳಲ್ಲೂ, ಅವುಗಳ ಸಿದ್ಧಾಂತ ಹಾಗೂ ಆಚರಣೆಯಲ್ಲಿ, ಶಿಕ್ಷಣ ನೀಡಬೇಕು. ಒಂದು: ಸರ್ವರಿಗೂ ಅನ್ವಯಿಸುವ ಸಮಗ್ರವಾದ ಸಮಾಜಧರ್ಮ; ಇನ್ನೊಂದು, ತಾನು ಹುಟ್ಟಿದ ಅಥವಾ ಅನಂತರ ಸ್ವೀಕ–ರಿಸಿದ ಮತದ ರೀತಿ ನೀತಿಗಳ ಕುಲಧರ್ಮ. ಈ ಶಿಕ್ಷಣ ಮೊದಲಿಗೆ ನಮ್ಮಿಂದಲೇ ಪ್ರಾರಂಭವಾಗಬೇಕು. ಯಾರೇ ಆಗಲಿ, ಸ್ವತಃ ತಾನು ಆ ಶಿಕ್ಷಣ ಪಡೆಯದೆ, ತಾನು ಕಲಿತುದನ್ನು, ಕಲಿಸಬೇಕಾದುದನ್ನು ತನ್ನ ನಡವಳಿಕೆಯಲ್ಲಿ ತೋರಿಸದೆ, ಬೇರೆಯವರಿಗೆ ಎಂದಿಗೂ ಪರಿಣಾಮಕಾರಿಯಾಗಿ ಕಲಿಸಿಕೊಡಲಾರ. ಜ್ವಲಂತ ಶ್ರದ್ಧೆ, ಪರಿಪೂರ್ಣಭಕ್ತಿ, ಧವಳ ಚಾರಿತ್ರ್ಯ ಮತ್ತು ಕಾಯ ವಾಚಾ ಮನಸಾ ಪರಿಶುದ್ಧತೆ ಇದ್ದಲ್ಲಿ ಮಾತ್ರ ಬೇರೆಯವ–ರಿಗೆ ಹೇಳಿಕೊಡುವ ಅಧಿಕಾರ ಬಂದೀತು. ಆದ್ದರಿಂದ ನಾವೆಲ್ಲರೂ ಈ ಶ್ರೇಷ್ಠ ಗುಣಗಳನ್ನು ತತ್ಪರತೆಯಿಂದ ಬೆಳೆಸಿಕೊಳ್ಳಬೇಕು.

ನಾವು ಈ ಶಿಕ್ಷಣವನ್ನು ದೇಶದ ಮೂಲೆ ಮೂಲೆಗಳಿಗೂ ಕೊಂಡೊಯ್ಯುವುದು ಅಗತ್ಯ. ಕೆಲವೊಂದು ಅನಾಗ–ರಿಕ ಮೂಢಾಚರಣೆಗಳನ್ನೆ ಧರ್ಮವೆಂದು ಭಾವಿಸಿರುವ, ಹಾಗೂ ಧರ್ಮವನ್ನು ಅರಿಯಲಾಗಲೀ ಆಚರಿಸಲಾಗಲೀ ಎಂದೂ ಅವಕಾಶವೇ ಇದುವರೆಗೆ ದೊರೆಯದಿರುವ, ದೂರದೂರದ ಗ್ರಾಮವಾಸಿ, ವನವಾಸಿ, ಗಿರಿವಾಸಿಗಳವರೆಗೆ ಈ ಶಿಕ್ಷಣವನ್ನು ಒಯ್ದು ಮುಟ್ಟಿಸಬೇಕು. ಈ ಕಾರ್ಯದಲ್ಲಿ ಅಡ್ಡಿ ಆತಂಕಗಳು, ತೊಂದರೆಗಳು, ಪರೀಕ್ಷೆಯ ಕ್ಷಣಗಳು ಬರುವುದು ಸಹಜವೇ. ಎಷ್ಟೋ ವೇಳೆ ಇದೊಂದು ಕೃತಜ್ಞತೆಯೂ ದೊರಕದಂಥ ಕೆಲಸವೆಂದು ನಮಗನಿಸಬಹುದು. ಆದರೆ ಇದರಲ್ಲಿ ಕ್ಷಿಪ್ರ ಫಲವನ್ನಾಗಲೀ, ಪವಾಡಗಳನ್ನಾಗಲೀ ನಿರೀಕ್ಷಿಸದೆ ನಾವು ಕಠೋರ ವಸ್ತುಸ್ಥಿತಿಯನ್ನು ದಿಟ್ಟವಾಗಿ ಎದುರಿಸಬೇಕು. ನಿಜವಾದ ಕರ್ಮಯೋಗಿಯಂತೆ ಅಪಾರ ಸಹನೆಯಿಂದ ಹೆಜ್ಜೆ ಮುಂದಿಡುತ್ತಾ ವಿಜಯದೆಡೆಗೆ ಸಾಗಬೇಕು.

ಅನೇಕ ಕಾರ್ಯಕರ್ತರಿಗೆ, ನಮ್ಮಲ್ಲಿನ ಕೆಡುಕುಗಳಿಗೆಲ್ಲ ಇತರರನ್ನು ದೂರುವುದರಲ್ಲೆ ಆನಂದವಿರುವಂತೆ ಕಾಣುತ್ತದೆ. ಕೆಲವರು ಇಂದಿನ ರಾಜಕಾರಣದ ವಿಕೃತಿಗಳನ್ನು ದೂಷಿಸಿದರೆ, ಇನ್ನು ಕೆಲವರು ಕ್ರೈಸ್ತರ ಅಥವಾ ಮುಸ್ಲಿಮರ ಹಾಗೂ ಅಂಥದೇ ಇನ್ನಿತರ ಸಂಪ್ರದಾಯಗಳ ಆಕ್ರಮಕ ಚಟುವಟಿಕೆಗಳನ್ನು ದೂರುತ್ತಾರೆ. ನಮ್ಮ ಕಾರ್ಯಕರ್ತರು ಇಂತಹ ಪ್ರವೃತ್ತಿಗಳನ್ನು ಬಿಟ್ಟು, ಪರಿಶುದ್ಧ ಪ್ರೇರಣೆಯಿಂದ ನಮ್ಮ ಸಮಾಜಕ್ಕಾಗಿ, ನಮ್ಮ ಧರ್ಮಕ್ಕಾಗಿ ಕಾರ್ಯನಿರತರಾಗಬೇಕು. ಅಸಹಾಯಕ ಸೋದರರೆಲ್ಲ–ರಿಗೂ ನೆರವಿನ ಕೈನೀಡಿ, ಜನರ ದುಃಖದುಮ್ಮಾನಗಳು ಕಣ್ಣಿಗೆ ಬಿದ್ದಲ್ಲೆಲ್ಲಾ ಅದರ ನಿವಾರಣೆಗಾಗಿ ದುಡಿಯಬೇಕು. ಇಂತಹ ಸೇವಾ ಕಾರ್ಯದಲ್ಲಿ ಮನುಷ್ಯ, ಮನುಷ್ಯರ ನಡುವೆ ಭೇದ ಎಣಿಸಬಾರದು. ಈಸಾಯಿ ಮುಸ್ಲಿಂ ಅಥವಾ ಇನ್ನಾವುದೇ ಮತಸ್ಥರಾಗಲಿ, ನಾವು ಎಲ್ಲರಿಗೂ ಸೇವೆಯನ್ನು ಸಲ್ಲಿಸಬೇಕು. ಏಕೆಂದರೆ ಪ್ರಕೃತಿ ವಿಕೋಪಗಳು, ದುರಂತ ದೌರ್ಭಾಗ್ಯಗಳು ಅಂತಹ ಯಾವ ಭೇದಗಳನ್ನೂ ಎಣಿಸದೆ ಎಲ್ಲರಿಗೂ ಸಮನಾಗಿ ತಟ್ಟುತ್ತದೆ.

ಮಾನವಮಾತ್ರನ ದುಃಖದೈನ್ಯಗಳನ್ನು ಪರಿಹರಿಸುವ ಕಾರ್ಯ ಮಾಡುವಾಗ ತಾನು ಉದ್ಧಾರಕನೆಂಬ ಅಥವಾ ದಯೆ ತೋರುವೆನೆಂಬ ಮನೋಭಾವ ಸಲ್ಲದು. ಸಮಸ್ತ ಜೀವರಾಶಿಗಳ ಅಂತರಂಗದಲ್ಲಿ ನೆಲೆಸಿರುವ ಭಗವಂತನ ಶ್ರದ್ಧಾಪೂರ್ವಕ ಅರ್ಚನೆಯೇ ಅದೆಂದು ಭಾವಿಸಬೇಕು. ನಮ್ಮೆಲ್ಲರಿಗೂ ತಾಯಿ–ತಂದೆ, ಬಂಧು–ಸಖ ಎಲ್ಲವೂ ಆದ ಭಗವಂತನ ವಿನಮ್ರ ಸೇವೆಯಲ್ಲಿ ನಮ್ಮ ಸರ್ವಸ್ವವನ್ನೂ ಸಮರ್ಪಿಸಬೇಕೆಂಬ ನಮ್ಮ ಧರ್ಮದ ಆದೇಶದಂತೆ ನಾವು ನಡೆಯಬೇಕು.

ನಮ್ಮ ಸನಾತನ ಧರ್ಮದ ಹಿರಿಮೆಗರಿಮೆಗಳನ್ನು ಉಜ್ವಲಗೊಳಿಸುವ ನಮ್ಮ ಪ್ರಯತ್ನ ಯಶಃಪ್ರದವಾಗಲಿ.


ಮಕರ ಸಂಕ್ರಮಣ
ಶಕೆ 1891
ದಿನಾಂಕ : 14–1–1970

**– ಮಾ. ಸ. ಗೋಳವಲ್ಕರ್**

**ಸುಧಾರಕರೆಲ್ಲ ಋಷಿಗಳು:**

ಈ ದೃಷ್ಟಿಯಲ್ಲಿ ಅತ್ಯಂತ ರೋಚಕ ಅಂಶ ಒಂದಿದೆ. ಈ ಧರ್ಮವನ್ನೊಪ್ಪಿ ನಡೆದ ಸಮಾಜದಲ್ಲಿ ಎಲ್ಲ ಕಾಲದಲ್ಲೂ ಪ್ರಗತಿಪರರು, ಸುಧಾರಕರು ಎಂಬ ಒಂದು ಗುಂಪು ಇದ್ದೇ ಇತ್ತು. ಎಲ್ಲ ಸಮಾಜಗಳಲ್ಲೂ ಅಂತಹ ಗುಂಪು ಇರುತ್ತದೆ. ಆದರೆ ಒಂದು ವ್ಯತ್ಯಾಸ. ಇಲ್ಲಿ ಅಂತಹವರು ಪ್ರಾಮಾಣಿಕರೂ ಸಮಾಜ ನಿಷ್ಠರೂ ಆಗಿದ್ದುದರಿಂದಅವರನ್ನು ವಿರೋಧಿಸಿ, ನಾಶ ಮಾಡಲಿಲ್ಲ. ಬದಲಾಗಿ ಅವರನ್ನು ಋಷಿಗಳು ಎಂದು ಗೌರವಿಸಿದರು. ಚಾರ್ವಾಕ, ಕಣಾದ ಇತ್ಯಾದಿಗಳು ಋಷಿಗಳಾದರು. ದೇವರನ್ನು ಧಿಕ್ಕ–ರಿಸಿದ ಬುದ್ಧ ಭಗವಂತನಾದ.


# ದ್ವಿತೀಯ ಪ್ರಯಾಗ ಸಮ್ಮೇಳನ–1979



ಇದು ನಡೆದುದು 1979ರ ಜನವರಿ 25, 26 ಮತ್ತು 27ರಂದು. ಪ್ರಯಾಗದ ಕುಂಭಮೇಳದ ಸಂದರ್ಭದಲ್ಲಿ, ಅಲ್ಲಿನ ತ್ರಿವೇಣಿ ಸಂಗಮದಲ್ಲಿ ಸಮ್ಮೇಳನಕ್ಕಾಗಿಯೇ ವಿಶೇಷವಾಗಿ ರಚಿಸಲಾಗಿದ್ದ ಮಹರ್ಷಿ ವೇದವ್ಯಾಸ ಮಹಾನಗರದಲ್ಲಿ, ಭಾರತಾದ್ಯಂತ ಮತ್ತು 18 ವಿದೇಶಗಳಿಂದಲೂ ಆಗಮಿಸಿದ ಸುಮಾರು 50,000ದಷ್ಟು ಪ್ರತಿನಿಧಿಗಳ ಈ ಸಮ್ಮೇಳನವನ್ನು ಉದ್ಘಾಟಿಸಿದವರು ಟಿಬೆಟ್‌ನ ಬೌದ್ಧ ಗುರು ಪೂಜ್ಯ ದಲಾಯಿ ಲಾಮಾ ಅವರು. ಈ ಸಮ್ಮೇಳನದ ವಿಶೇಷತೆ ಇದ್ದುದೇ ಅದರಲ್ಲಿ. ಸುಮಾರು 2500 ವರ್ಷಗಳ ಹಿಂದೆ ಗೌತಮ ಬುದ್ಧನಿಗೆ ಕಾಶಿನಗರಕ್ಕೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಅಂದಿನಿಂದಲೂ ವೈದಿಕ ಮತಗಳು ಮತ್ತು ಬೌದ್ಧ ಮತದ ಅನುಯಾಯಿಗಳ ನಡುವೆ ಘರ್ಷಣೆ ಮುಂದುವರಿದುಕೊಂಡೇ ಬಂದಿತ್ತು. ಈ ಕೃತಕ ಗೋಡೆಯನ್ನು ಕೆಡವಿಹಾಕುವ ಐತಿಹಾಸಿಕ ಕ್ಷಣ ಈ ಸಮ್ಮೇಳನದ ಸಂದರ್ಭದಲ್ಲಿ ಒದಗಿತು. ದಲಾಯಿ ಲಾಮಾ ಅವರು ರೈಲಿನಿಂದ ಇಳಿಯುತ್ತಿದ್ದಂತೆಯೇ ಕಾಶಿಯ ಗಣ್ಯ ವೈದಿಕ ಪಂಡಿತರು ಅವರನ್ನು ನಾಲ್ಕು ವೇದಗಳಲ್ಲಿನ ಮಂತ್ರಗಳಿಂದ ಸ್ವಾಗತಿಸಿ ಹಾರಾರ್ಪಣೆ ಮಾಡಿದರು. ಉದ್ಘಾಟನಾ ಸಮಾರಂಭದಲ್ಲೂ ಅವರನ್ನು ಸ್ವಾಗತಿಸಿದ್ದುದು ವೈದಿಕ ಪ್ರಾರ್ಥನೆಯೊಂದಿಗೆ. ಇದಕ್ಕೆ ಉತ್ತರವಾಗಿ ದಲಾಯಿಲಾಮಾ ಅವರು ಟಿಬೆಟ್‌ನ ಪದ್ಧತಿಯಂತೆ ವೇದ ಪಂಡಿತರಿಗೆ ಗೌರವ ಸಲ್ಲಿಸಿದರು. ತಮ್ಮ ಅತ್ಯಂತ ಹೃದಯಸ್ಪರ್ಶಿ ಮತ್ತು ವಿಚಾರಪೂರಿತ ಉದ್ಘಾಟನಾ ಭಾಷಣದಲ್ಲಿ ದಲಾಯಿಲಾಮಾ ಅವರು, "ಓರ್ವ ಬೌದ್ಧ ಭಿಕ್ಷುವಾಗಿರುವ ನಾನು ಒಂದು ಹಿಂದು ಸಮ್ಮೇಳನಕ್ಕೆ ಬಂದು ಭಾಗವಹಿಸಿರುವ ಸಂಗತಿ ಅನೇಕ–ರಿಗೆ ಅಚ್ಚರಿಯನ್ನುಂಟುಮಾಡಿರಬಹುದು. ಅಂಥವರಿಗೆ ನಮ್ಮೊಳಗಿರುವ ಆಂತರಿಕ ಏಕತೆಯ ಅರಿವಿಲ್ಲವೆಂದೇ ಹೇಳಬೇಕಾಗುತ್ತದೆ. ಗೌತಮ ಬುದ್ಧ ಈ ಮಣ್ಣಿನ ಓರ್ವ ಶ್ರೇಷ್ಠ ಪುತ್ರ. ಹಾಗಾಗಿ ಬೌದ್ಧಮತದ ತಾಯಿನಾಡು ಭಾರತವೇ ಆಗಿದೆ. ಇಲ್ಲಿಗೆ ಬಂದ ಮೇಲೆ ಇಲ್ಲಿನ ವೈದಿಕ ಪಂಡಿತರೊಡನೆ ತಮ್ಮ ತತ್ತ್ವ ಜ್ಞಾನಗಳ ಮೂಲ ತಿರುಳು ಹಾಗೂ ಸಾಧನಾ ಮಾರ್ಗದ ವಿಶೇಷ ಲಕ್ಷಣಗಳನ್ನು ಕುರಿತು ಚರ್ಚಿಸಿದಾಗ ನಮ್ಮೆರಡು ವಿಚಾರಗಳಲ್ಲಿ ತೀರ ಸಮೀಪದ ಸಾಮ್ಯವಿರುವುದು ನನ್ನ ಗೋಚರಕ್ಕೆ ಬಂತು' ಎಂದರು. ಬೌದ್ಧ ಮತವು ಹಿಂದುತ್ವದ ವಿಶಾಲ ವಟವೃಕ್ಷದ್ದೇ ಒಂದು ಶಾಖೆ ಎಂಬ ಸನಾತನ ಸತ್ಯದ ಸಾಕ್ಷಿ ಹೇಳುವಂತಿತ್ತು ಅಂದಿನ ಆ ಪ್ರಸಂಗ.




# ಉಜಿರೆ ಸಮ್ಮೇಳನ 1983



ಕರ್ನಾಟಕದ ಸುವಿಖ್ಯಾತ ಪುಣ್ಯಕ್ಷೇತ್ರ ಧರ್ಮಸ್ಥಳದ ಸಮೀಪವಿರುವ ಉಜಿರೆಯಲ್ಲಿ 1983ರ ಡಿಸೆಂಬರ್ ಎರಡನೆಯ ವಾರದಲ್ಲಿ ನಡೆದ ದ್ವಿತೀಯ ಪ್ರಾಂತೀಯ ಸಮ್ಮೇಳನದಲ್ಲಿ ವಿವಿಧ ಜಾತಿ, ಮತ, ಪಂಥ, ಸಂಪ್ರದಾಯಗಳಿಗೆ ಸೇರಿದ 170ರಷ್ಟು ಧರ್ಮಾಚಾರ್ಯರಲ್ಲದೆ 2500ರಷ್ಟು ಊರುಗಳಿಂದ ಬಂದಿದ್ದ 60,000ದಷ್ಟು ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದ ಮುಖ್ಯ ಒತ್ತು ಇದ್ದುದು ಅಸ್ಪೃಶ್ಯತೆಯ ನಿವಾರಣೆ ಮತ್ತು ಮತಾಂತರ ತಡೆಯ ಮೇಲೆ. ಇವೆರಡೂ ಸಂಗತಿಗಳನ್ನು ಬಿಂಬಿಸುವಂತೆ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪೂಜ್ಯ ಶ್ರೀ ಪೇಜಾವರ ಶ್ರೀಗಳವರು ಪ್ರತಿನಿಧಿಗಳಿಗೆ ಹೇಳಿಕೊಟ್ಟು ಅವರಿಂದ ಹೇಳಿಸಿದ 'ಮಮ ದೀಕ್ಷಾ ಹಿಂದು ರಕ್ಷಾ, ಮಮ ಮಂತ್ರಃ ಸಮಾನತಾ' (ನಮ್ಮ ದೀಕ್ಷೆ ಹಿಂದುಗಳ ರಕ್ಷಣೆಯದು, ನಮ್ಮ ಮಂತ್ರ ಹಿಂದುಗಳ ಸಮಾನತೆಯದು) ಎಂಬೆರಡು ಘೋಷಣೆಗಳು, ಸಂಪೂರ್ಣ ಹಿಂದು ಸಮಾಜಕ್ಕೆ ಮುಂದಿನ ದಿನಗಳಲ್ಲಿ ಕ್ರಿಯಾಸೂಚಿಯಾಯಿತು.

ಸಮ್ಮೇಳನದ ಸಂದರ್ಭದಲ್ಲೆ ಪ್ರಥಮ ಏಕಾತ್ಮತಾ ಯಜ್ಞದ ಎರಡು ರಥಗಳು–ಪವಿತ್ರ ಗಂಗಾಜಲ ತುಂಬಿಕೊಂಡಿರುವ ಕಲಶ ಹೊತ್ತ ರಥ ಮತ್ತು ಭಾರತಮಾತೆಯ ವಿಗ್ರಹ ಹಾಗೂ ದೇಶದ ಎಲ್ಲ ನದಿಗಳ ನೀರು ಸಂಗ್ರಹವಾದ ಕಲಶ ಹೊತ್ತ ಇನ್ನೊಂದು ರಥ – ಉಜಿರೆಗೆ ತಲಪಿದ್ದವು. ಹೀಗಾಗಿ ಅಂದು ಅಲ್ಲಿದ್ದ ಸುಮಾರು ಒಂದು ಲಕ್ಷ ಮಂದಿಗೆ ಭಾರತಮಾತೆಯ ಪೂಜೆಯ ಹಾಗೂ ಗಂಗಾತೀರ್ಥ ಸ್ವೀಕರಿಸುವ ಸೌಭಾಗ್ಯವೂ ಲಭಿಸಿತು.



# ಮಾರ್ಗದರ್ಶಕ ಮಂಡಲ







ವಿವಿಧ ಮತ, ಪಂಥಗಳ ಧರ್ಮಾಚಾರ್ಯರನ್ನು ಒಂದು ವೇದಿಕೆಗೆ ತಂದ ಸಫಲ ಪ್ರಯತ್ನದ ಪ್ರಕ್ರಿಯೆಗೆ ಪ್ರತ್ಯಕ್ಷ ಕಾರ್ಯರೂಪ ನೀಡಲು ವಿಶ್ವ ಹಿಂದು ಪರಿಷದ್ ಮುಂದಿನ ಹೊಸ ಹೆಜ್ಜೆಯಿರಿಸಿತು. ಈ ನಿಟ್ಟಿನಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ಒಂದು ಕೇಂದ್ರೀಯ ಮಾರ್ಗದರ್ಶಕ ಮಂಡಲವನ್ನು 1972ರಲ್ಲಿ ರಚಿಸಲಾಯಿತು. ಆರಂಭದ ಹಂತದಲ್ಲಿ ಇದರಲ್ಲಿ ಇದ್ದವರು ಪೂಜ್ಯ ಸತ್ಯಮಿತ್ರಾನಂದ ಮಹಾರಾಜ್ ಮತ್ತು ಪೂಜ್ಯ ಪ್ರಭುದತ್ತ ಬ್ರಹ್ಮಚಾರಿ ಇವರಿಬ್ಬರು ಮಾತ್ರ. ಆದರೆ ವರ್ಷಗಳುರುಳಿದಂತೆ ಹಿಂದು ಸಮಾಜದ ವೈದಿಕ ಪರಂಪರೆಯ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ದತ್ತ ಇತ್ಯಾದಿ ಪಂಥಗಳ ಧರ್ಮಗುರುಗಳು ಮತ್ತು ಮಹಾ ಮಂಡಲೇಶ್ವರರುಗಳಲ್ಲದೆ ನಾಥ ಸಂಪ್ರದಾಯ, ಸ್ವಾಮಿ ನಾರಾಯಣ ಸಂಪ್ರದಾಯ, ದಾದುಪಂಥ, ಕಬೀರ ಪಂಥ, ರೈದಾಸ್ ಪಂಥ, ಸಿಖ್ಖ್ ಪಂಥ, ವಿವಿಧ ಆಖಾಡಾಗಳ ಸಂತರು, ಮಹಂತರು, ಜೈನ, ಬೌದ್ಧ, ಆರ್ಯ ಸಮಾಜದ ಗುರುಗಳು ಇವರೆಲ್ಲರ ಸೇರ್ಪಡೆಯಾಗುತ್ತ, ಈಗ 400 ಕ್ಕೂ ಅಧಿಕ ಧರ್ಮಾಚಾರ್ಯರು ಮಾರ್ಗದರ್ಶಕ ಮಂಡಲದ ಗೌರವಾನ್ವಿತ ಸದಸ್ಯರಾಗಿದ್ದಾರೆ. ಹೀಗೆ ಒಂದು ಕಾಲದಲ್ಲಿ ಕೇವಲ ತಮ್ಮ ಸಂಪ್ರದಾಯಕ್ಕಷ್ಟೇ ಸೀಮಿತಗೊಂಡಿದ್ದು, ತಮ್ಮ ಮಠ ಮತ್ತು ಆಶ್ರಮದ ಆವರಣದ ಹೊರಗೆ ಯಾರೊಂದಿಗೂ ಬೆರೆಯಲು ಒಪ್ಪದಿರುವವರು, ಈಗ ಎಲ್ಲರೂ ಸಮಾನರಂತೆ ಹಾಗೂ ಒಟ್ಟು ಹಿಂದುಹಿತದ ಕಾಳಜಿ ವಹಿಸಿ, ಒಂದೇ ವೇದಿಕೆಯ ಮೇಲೆ ಒಂದುಗೂಡಿ ವಿರಾಜಮಾನರಾಗಲು ತಯಾರಾದುದು ವಿಶ್ವ ಹಿಂದು ಪರಿಷತ್ತಿನ ಒಂದು ಬಹುದೊಡ್ಡ ಸಾಧನೆಯೇ ಎನಿಸಿತು.

# ಧರ್ಮಸಂಸತ್–1985




ವಿದ್ವತ್ ಸಭೆಯಿಂದ ಮಂಡಿತವಾದ ಸಲಹೆಗಳನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸಲು ವಿಶ್ವ ಹಿಂದು ಪರಿಷದ್ 'ಧರ್ಮಸಂಸತ್' ಎಂಬ ವಿಶೇಷ ಕಾರ್ಯಾಂಗವೊಂದನ್ನು 1984ರಲ್ಲಿ ಹುಟ್ಟುಹಾಕಿತು.

ಈ ಧರ್ಮಸಂಸತ್ ಅಗತ್ಯವಿರುವಾಗಲೆಲ್ಲ ಒಂದೆಡೆ ಸೇರಿ, ವ್ಯಾಪಕ ಚರ್ಚೆ ನಡೆಸಿ, ಅದರಲ್ಲಿ ಮೂಡಿ ಬರುವ ಸಂಗತಿಗಳನ್ನು ಅನುಷ್ಠಾನಗೊಳಿಸುವಂತಹ ಕ್ರಮಗಳನ್ನು ನಿರ್ಧರಿಸಿ ಹಿಂದು ಸಮಾಜಕ್ಕೆ ಆದೇಶ ನೀಡುತ್ತದೆ. ಧರ್ಮ ಸಂಸತ್ತಿನಲ್ಲಿ ಮಾರ್ಗದರ್ಶಕ ಮಂಡಲದಲ್ಲಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಧರ್ಮಾಚಾರ್ಯರು, ಸಾಧುಗಳು, ಸಂತರು ಇರುವುದರಿಂದಾಗಿ ಅದು ಸಹಜವಾಗಿ ಹಿಂದು ಸಮಾಜವನ್ನು ಹೆಚ್ಚು ಪ್ರತಿನಿಧಿಸುವಂತಹದಾಗಿರುತ್ತದೆ. ಹೀಗಾಗಿ ಅದರ ಆದೇಶವು ಹಿಂದುಗಳೆಲ್ಲರನ್ನು ಕಾರ್ಯೋನ್ಮುಖಗೊಳ್ಳಲು ಪ್ರೇರೇಪಿಸುವಂತಹದಾಗಿರುತ್ತದೆ.

ಮಾರ್ಗದರ್ಶಕ ಮಂಡಲವು ಸಾಮಾನ್ಯವಾಗಿ ವರ್ಷದಲ್ಲೊಮ್ಮೆ ಸೇರುತ್ತದೆ. ಆದರೆ ಅಗತ್ಯವೆನಿಸಿದಾಗ ಇನ್ನೂ ಹೆಚ್ಚು ಬಾರಿ ಸೇರುವುದೂ ಇದೆ.

ಧರ್ಮಸಂಸತ್‌ನ ಆದೇಶದಂತೆ ಎಲ್ಲ ಹಿಂದುಗಳು ಪ್ರತಿ ವರ್ಷ ಆಚರಿಸಬೇಕಾದ ಹಬ್ಬಗಳು (1) ವಿಜಯದಶಮಿ, (2) ದೀಪಾವಳಿ, (3) ಮಕರಸಂಕ್ರಾಂತಿ, (4) ವೈಶಾಖಿ, (5) ಗುರುಪೂರ್ಣಿಮೆ, (6) ರಕ್ಷಾಬಂಧನ, ಈ ಆರು ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸಬೇಕು. ಇವುಗಳಲ್ಲಿ ಮಕರಸಂಕ್ರಾಂತಿಯನ್ನು ವಿಶ್ವದಾದ್ಯಂತ ವಿಶ್ವ ಹಿಂದು ಕಲ್ಯಾಣ ದಿನವಾಗಿ ಆಚರಿಸಬೇಕು.

ಹೀಗೆ ಮಾರ್ಗದರ್ಶಕ ಮಂಡಲ ಮತ್ತು ಧರ್ಮಸಂಸತ್ ಎಂಬ ಎರಡು ವ್ಯವಸ್ಥೆಗಳ ಮೂಲಕ ಹಿಂದುಗಳೆಲ್ಲರ ಅಪಾರ ಶ್ರದ್ಧೆಗೌರವಗಳಿಗೆ ಪಾತ್ರರಾಗಿರುವ ಮತ್ತು ಹಿಂದು ಸಮಾಜಕ್ಕೆ ನಿಜಕ್ಕೂ ನೇತೃತ್ವ ನೀಡುವಂತಹವರಾಗಿರುವ ಧರ್ಮಾಚಾರ್ಯರು ಸಮಗ್ರ ಹಿಂದು ಸಮಾಜದ ಹಿತಾಸಕ್ತಿಗಳ ರಕ್ಷಣೆಗಾಗಿ ಕಾಳಜಿ ವಹಿಸುವವರಾಗಿ ಈ ನಿಟ್ಟಿನಲ್ಲಿ ಕ್ರಿಯಾಶೀಲರೂ ಆಗಿರುವುದೂ ಒಂದು ಅತ್ಯಂತ ಭರವಸೆಯ ವಿದ್ಯಮಾನವೆಂಬುದು ನಿಸ್ಸಂದೇಹ.





# “ಹಿಂದೂ ಸಮಾಜದ ಸಮಸ್ಯೆ ಎಂದರೆ ರಾಷ್ಟ್ರದ ಸಮಸ್ಯೆ”

■ **ಶ್ರೀ ಬಾಳಾಸಾಹೇಬ ದೇವರಸ್**

ಉಡುಪಿ ಧರ್ಮಸಂಸತ್ತಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರೂ, ಪರಿಷತ್ತಿನ ಕೇಂದ್ರೀಯ ವಿಶ್ವಸ್ತರಲ್ಲಿ ಒಬ್ಬರೂ ಆದ ಪೂಜನೀಯ ಶ್ರೀ ಬಾಳಾಸಾಹೇಬ ದೇವರಸರು ಉದ್ಘಾಟನಾ ಅಧಿವೇಶನದಲ್ಲಿ ಮಾತನಾಡುತ್ತಾ “ಹಿಂದು ಸಮಾಜದ ಸಮಸ್ಯೆಗಳು ಎಂದರೆ ಇಡೀ ದೇಶದ್ದೇ ಸಮಸ್ಯೆ”. ಆದ್ದರಿಂದ ಹಿಂದು ಸಮಾಜದ ಸಮಸ್ಯೆಗಳ ನಿವಾರಣೆಗಾಗಿ ಎಲ್ಲರೂ ಕೂಡಿ ವಿಚಾರಮಾಡಬೇಕು.

ಹಿಂದು ಸಮಾಜದ ಬಗ್ಗೆ ಚಿಂತನೆಮಾಡುವುದು ಮತೀಯವೂ ಅಲ್ಲ, ಜಾತ್ಯಾತೀತ ನೀತಿಗೆ ವಿರೋಧವೂ ಅಲ್ಲ. ನಮ್ಮ ಸಮಾಜದ ಸಂಕಟ, ಸಮಸ್ಯೆಗಳು ಸಹಸ್ರ ವರ್ಷಗಳಿಂದ ಇವೆ. ಹಿಂದು ಸಮಾಜ ದುರ್ಬಲವಾದಾಗಲೆಲ್ಲ ನಮ್ಮ ದೇಶಕ್ಕೆ ಸಮಸ್ಯೆಗಳು ನಿರ್ಮಾಣವಾಗಿವೆ. 1,200 ವರ್ಷಗಳಿಗೂ ಮುಂಚೆ ಈಗಿನ ಆಫಘಾನಿಸ್ತಾನ ಗಾಂಧಾರವಾಗಿತ್ತು. ಕಾಲಾಂತರದಲ್ಲಿ ಬಲಾತ್ಕಾರ, ದಬ್ಬಾಳಿಕೆಗಳಿಂದಾಗಿ ಆಫಘಾನಿಸ್ಥಾನವಾಯಿತು. ಅಷ್ಟೇಕೆ, 1947 ರ ಮುಂಚಿನ ಹಿಂದೂಸ್ಥಾನದ ನಕಾಶೆಗೂ, ಈಗಿನ ಹಿಂದೂಸ್ತಾನದ ನಕಾಶೆಗೂ ಎಷ್ಟು ಅಂತರವಿದೆ ! ಎಷ್ಟೊಂದು ಪ್ರದೇಶಗಳು ಕಡಿದುಹೋಗಿವೆ ! ಸಿಂಧೂ, ಅರ್ಧ ಪಂಜಾಬ್, ಅರ್ಧ ಬಂಗಾಲ ಕೈಬಿಟ್ಟು ಹೋಗಿವೆ. ಕಾರಣ ಅಲ್ಲೆಲ್ಲಾ ಹಿಂದು ಅಲ್ಪ ಸಂಖ್ಯಾತನಾದದ್ದು. ಇಂದಿಗೂ ಅದೇ ರೀತಿಯಲ್ಲಿ ಅನೇಕ ರಾಜ್ಯಗಳಲ್ಲಿ ಹಿಂದುಗಳನ್ನು ಅಲ್ಪ ಸಂಖ್ಯಾತರಾಗಿಸುವ ಪ್ರಯತ್ನಗಳು ನಡೆಯುತ್ತಿವೆ. ಇಡೀ ಹಿಂದೂಸ್ಥಾನವನ್ನು ಪಾಕಿಸ್ತಾನ ಮಾಡುವ ಹವಣಿಕೆ ನಡೆದಿದೆ.

**ಧರ್ಮಾಚರಣೆಯ ಅಧಿಕಾರ ಧರ್ಮಾಂತರಕ್ಕೆ ಸಲ್ಲದು**

“ಕ್ರೈಸ್ತರು ಎರಡನೇ ಶತಮಾನದಲ್ಲಿ ಭಾರತಕ್ಕೆ ಬಂದರು. ಏಳನೇ ಶತಮಾನದಲ್ಲಿ ಮುಸಲ್ಮಾನರು ಬಂದರು. ದಕ್ಷಿಣಕೇರಳದಲ್ಲಿ ಕ್ರೈಸ್ತರಿಗೆ ಚರ್ಚ್ ಕಟ್ಟಲು ಅವಕಾಶ ಕಲ್ಪಿಸಿಕೊಡಲಾಯಿತು. ಆದರೆ ಧರ್ಮಾಚರಣೆಗೆ ನೀಡಿದ ಅಧಿಕಾರ, ಧರ್ಮಾಂತರಕ್ಕೆ ನೀಡಿದ್ದು ತಪ್ಪಾಯಿತು. ಈಗ ಕೇರಳದಲ್ಲಿ ಪ್ರತಿಶತ 20ರಿಂದ 25ರವರೆಗೆ ಕ್ರೈಸ್ತರು ಮುಸ್ಲಿಮರು ಇದ್ದಾರೆ. ಅಲ್ಲಿನ ಪ್ರಬಲ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಕಮ್ಯುನಿಷ್ಟರು ದೇಶದ ಹಿತಕ್ಕೆ ತಿಲಾಂಜಲಿ ಇತ್ತು ಅಧಿಕಾರದ ಆಶೆಗಾಗಿ ಇವರನ್ನು ತೃಪ್ತಿಪಡಿಸುತ್ತಾರೆ. ಹಿಂದುವಿನ ಸಂಖ್ಯೆ ಕಡಿಮೆ ಆದಂತೆ ಆ ಭಾಗ ಕೈಬಿಟ್ಟು ಹೋಗುತ್ತದೆ ಎಂಬ ಮೂಲಭೂತ ತಿಳುವಳಿಕೆಯೂ ಅವರಿಗಿಲ್ಲ. ಈಗ ಈ ಸಮಸ್ಯೆಯನ್ನು ಪರಿಹರಿಸುವ ಹೊಣೆಗಾರಿಕೆ ನಮ್ಮ ಮೇಲೆಯೇ ಇದೆ. ಇಲ್ಲಿ ಬಹು ಸಂಖ್ಯಾತರ ಸಂಘಟಿತ ಸಮಾಜವನ್ನು ನಿರ್ಮಿಸಬೇಕಾಗಿದೆ. ಇಲ್ಲಿ ನೆರೆದಿರುವ ಸಂತ ಮಹಾತ್ಮರ ಮೇಲೆ ಇದರ ವಿಶೇಷ ಜವಾಬ್ದಾರಿ ಇದೆ.

‘ಏಕಂ ಸತ್, ವಿಪ್ರಾ ಬಹುಧಾ ವದಂತಿ’ ವಿಚಾರವೇನೋ ತುಂಬಾ ಸರಿಯಾಗಿದೆ. ಆದರೆ ತತ್ವಜ್ಞಾನದ ಜೊತೆಗೆ ಸರಿಯಾದ ವ್ಯವಹಾರ ಜ್ಞಾನವೂ ಬೇಕು ನಮ್ಮ ನಂಬಿಕೆಗಳೇ ನಮಗೆ ಮುಳುವಾಗದಂತೆ ವ್ಯವಹಾರ ಮಾಡಬೇಕು ಇತರರೂ ನಮ್ಮಂತೆಯೇ ವಿಶಾಲ ಭಾವನೆಯಿಂದ ವ್ಯವಹರಿಸುವಾಗ ಇವೆಲ್ಲ ಸರಿ. ಇಲ್ಲವಾದರೆ, ನಾವು ಅವ–ರಿಗರ್ಥವಾಗುವ ರೀತಿಯಲ್ಲೇ ನಡೆದುಕೊಳ್ಳಬೇಕಾಗುತ್ತದೆ.

“ಹಿಂದುಗಳು, ಸಿಖ್ಖರು ಎಂಬ ರೀತಿಯಲ್ಲಿ ವ್ಯವಹಾರ ನಡೆಸಿ ಸಮಾಜವನ್ನು ಒಡೆಯುವ ಪ್ರಯತ್ನಗಳೂ ನಡೆದಿವೆ. ಆದರೆ ನಮಗೆ ಈ ವಿಭಜನೆಯ ಸಿದ್ಧಾಂತದಲ್ಲಿ ವಿಶ್ವಾಸವಿಲ್ಲ. ಏಕೆಂದರೆ ಕಳೆದ ಮಾರ್ಚ್‌ನಲ್ಲಿ ನಾನು ಪಂಜಾಬ್‌ನಲ್ಲಿ ಪ್ರವಾಸ ಮಾಡಿದಾಗ ನನ್ನ ಕಾರ್ಯಕ್ರಮಗಳಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಸಿಖ್ಖರು ಭಾಗವಹಿಸಿದ್ದರು. ಅಲ್ಲಿ ಸಾಮಾನ್ಯ ಸಿಖ್ಖರು ಮತ್ತು ಸಿಖ್ಖೇತರ ಹಿಂದುಗಳು ಐಕ್ಯಮತದಿಂದ ಸೌಹರ್ದದಿಂದ ಜೀವಿಸುತ್ತಿದ್ದಾರೆ. ಇದನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ನಾನು ನಮ್ಮ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಈ

ಬಗ್ಗೆ ಸ್ಪಷ್ಟವಾಗಿ ಹೇಳಿದೆ. 'ಈ ಸಮಸ್ಯೆ ಕೇವಲ ರಾಜ-ಕಾರಣಿಗಳು ನಿರ್ಮಿಸಿದ್ದಾರೆ. ಇದಕ್ಕೆ ಜನ ಸಾಮಾನ್ಯರ ಬೆಂಬಲ ಇಲ್ಲ, ಆದ್ದರಿಂದ ಸಮಸ್ಯೆಯು ನಿವಾರಣೆ ಆಗುತ್ತದೆ' ಎಂದಿದ್ದೆ. ನಾನು ಭಾವಿಸಿದ್ದಂತೆಯೇ ಆಗಿದೆ.

**ಬಾಯಾರಿಕೆ ತಣಿಸದ**
**ಸಮುದ್ರವಾಗುವುದು ಬೇಡ**

"ನಮ್ಮ ಇಷ್ಟೊಂದು ಸಮಸ್ಯೆಗಳು ಹೇಗೆ ಹುಟ್ಟಿಕೊಂಡವು ಎನ್ನುವತ್ತ ನಮ್ಮ ಗಮನ ಹರಿಸಬೇಕಾಗಿದೆ. ಅನ್ಯಮತೀಯರು ಎಂದು ನಾವು ಸುಲಭವಾಗಿ ಹೇಳಿಬಿಡಬಹುದು. ಸ್ವಲ್ಪಮಟ್ಟಿಗೆ ಅದು ನಿಜವೂ ಸಹ. ಆದರೆ ನಮ್ಮ ಅನೈಕ್ಯತೆಯೇ ನಮ್ಮ ಸಮಸ್ಯೆಗೆ ಮೂಲಕಾರಣ. ಆದ-ರಿಂದ ನಾವು ನಮ್ಮ ಸಮಸ್ಯೆಗಳಿಗೆ ಅರಬ್ಬಿ ದೇಶದಿಂದ ಹರಿದುಬರುವ ಪೆಟ್ರೋಡಾಲರ್‌ಗಳ ಮೇಲೆ ಅಥವಾ ಮತಾಂತರ ಕಾರ್ಯದಲ್ಲಿ ತೊಡಗಿರುವ ಸಹಸ್ರಾರು ಕ್ರೈಸ್ತ ಪಾದರಿಗಳ ಮೇಲೆ ಆರೋಪ ಹೊರಿಸುವುದು ಬೇಡ. ಅವರಿಗಿಂತ ಹತ್ತುಪಟ್ಟು, ನೂರುಪಟ್ಟು ದೊಡ್ಡದಾದ ವಿಶಾಲವಾದ ಸಾಧು-ಸಂತ-ಮಹಾತ್ಮರ ಬಲ, ಶ್ರೀರಕ್ಷೆ ನಮಗಿದೆ. ಇದನ್ನು ನಾವು ಉಪಯೋಗಿಸಿಕೊಳ್ಳೋಣ. ವಿಶಾಲವಾದ ಸಾಗರದ ಮುಂದೆ ಇದ್ದೂ ಬಾಯಾ-ರಿಕೆಯಿಂದ ಗುಟುಕು ನೀರಿಲ್ಲದವನ ಪರಿಸ್ಥಿತಿಯಂತಾಗಿದೆ ನಮ್ಮ ಸ್ಥಿತಿ. ಈ ಪರಿಸ್ಥಿತಿಯನ್ನು ಹೋಗಲಾಡಿಸುವತ್ತ ಧರ್ಮಸಂಸದ್ ವಿಶೇಷ ಗಮನಹರಿಸುವುದೆಂಬ ನಿರೀಕ್ಷೆಯಿಂದ ಸಮಾಜ ಎದುರು ನೋಡುತ್ತಿದೆ."

## ವ್ಯಕ್ತಿ ಪರಮಾತ್ಮನ ಅಂಶ:

ವ್ಯಕ್ತಿ ಪರಮಾತ್ಮನ ಅಂಶ ಎಂದು ಹೇಳಿದಂತೆ ಸಮಾಜವೇ ಪರಮಾತ್ಮನು ಹೌದು. ವ್ಯಕ್ತಿಗಳೆಲ್ಲಾ ಈ ಸಮಾಜ ಪುರುಷನ ಅಂಗಗಳು. ಎಲ್ಲಾ ಅಂಗಗಳೂ ಸ್ವರೂಪದಲ್ಲಿ, ಕಾರ್ಯದಲ್ಲಿ, ಶಕ್ತಿಯಲ್ಲಿ ಭಿನ್ನವಾಗಿದ್ದರೂ ಎಲ್ಲವೂ ಈ ಶರೀರದ ಭಾಗಗಳು. ಯಾವುದೂ ಹೆಚ್ಚಲ್ಲ, ಕಡಿಮೆಯಲ್ಲ. ಪರಮಾತ್ಮನ ಸಮಸ್ತ ಅಂಗಗಳೂ ಪವಿತ್ರವೇ. ನಾವೆಲ್ಲ ನಮಸ್ಕರಿಸುವುದು ಪರಮಾತ್ಮನ ಕಾಲುಗಳಿಗೇ ಅದು ಕೀಳಲ್ಲ. ಸರ್ವರನ್ನೂ ಸಮಾನವಾಗಿ ನೋಡುವುದೇ ಯೋಗ್ಯ ದೃಷ್ಟಿ. ಅಂತಹವರನ್ನೇ ಪಂಡಿತ, ಜ್ಞಾನಿ ಎನ್ನುವುದು. ಗೀತೆಯಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿದೆ.

**ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ**

"ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣ, ಗೋವು, ಆನೆ, ನಾಯಿ, ನಾಯಿಯನ್ನು ತಿನ್ನುವ ಚಂಡಾಲ ಈ ಎಲ್ಲರನ್ನೂ ಪಂಡಿತರು ಸಮಭಾವದಿಂದ ನೋಡುತ್ತಾರೆ.

ಧರ್ಮ ತಿಳಿದವರು ಯಾರನ್ನೂ ಅಸ್ಪೃಶ್ಯರನ್ನರು, ಯಾವ ಜಾತಿಯನ್ನೂ ಹೀಗಳೆಯುವುದಿಲ್ಲ. ಬದಲಾಗಿ ಪ್ರತಿಯೊಂದು ಕುಲ, ಪ್ರತಿಯೊಂದು ಕಸುಬು ಸಮಾಜಕ್ಕೆ ಅವಶ್ಯಕ, ಅನಿವಾರ್ಯ ಎಂಬ ಕೃತಜ್ಞತೆ (Dignity of labour) ಇರಿಸಿಕೊಂಡೇ ವ್ಯವಹರಿಸುತ್ತಾರೆ. ನನ್ನ ದೇಶದ ಪ್ರಮುಖವಾದ ಪೂಜಾಮಂತ್ರ ಶ್ರೀರುದ್ರ ಸೂಕ್ತ, ಇಂತಹ ವಿರಾಟ್‌ಪುರುಷನ ಸ್ತುತಿ, ನಮನಗಳ ಸಂಕೇತ, ಸಮಾಜ ಪುರುಷನನ್ನು 'ರುದ್ರ' ಎಂದು ಗುರುತಿಸಿ ಎಲ್ಲಾ ಉದ್ಯೋಗಗಳು-ಅದರಲ್ಲಿ ಕಳ್ಳನನ್ನೂ ಕಳ್ಳರ ಅಧಿಪತಿಯನ್ನೂ ನಮಸ್ಕರಿಸುವ ಔನ್ನತ್ಯ, ಆತ್ಮೀಯತೆ ತೋಟ್ಟಿದೆ! "ಸ್ತೇನಾಭ್ಯಃ ಸೇನಾನಿಭ್ಯಃ ನಮೋ" ಎಂದು ವರ್ಣಿಸಿದೆ. ಭಗವಂತನ ನಾನಾ ರೂಪಗಳವು. ಕೆಲವೊಮ್ಮೆ ಸೌಮ್ಯ, ಕೆಲವೊಮ್ಮೆ ರೌದ್ರ, ಆದರೆ ಯಾವುದೂ ದೂರಬೇಕಾದುದಲ್ಲ ಎಂಬ ಏಕಾತ್ಮತೆಯ ಭಾವವನ್ನು ಪ್ರದರ್ಶಿಸಿದೆ.

# ತೃತೀಯ ವಿಶ್ವ ಹಿಂದು ಸಮ್ಮೇಳನ– 2007




12–2–2007 ಸೋಮವಾರ ಮಧ್ಯಾಹ್ನ 12 ಗಂಟೆಗೆ ತೃತೀಯ ವಿಶ್ವ ಹಿಂದು ಸಮ್ಮೇಳನದ ವಿಧಿವತ್ ಉದ್ಘಾಟನೆ ಆಯಿತು. ಹರಿದ್ವಾರದ ಭಾರತ ಮಾತಾ ಮಂದಿರದ ಶ್ರೀ ಸತ್ಯಮಿತ್ರಾನಂದಜೀ ಗಿರಿ ಅವರಿಂದ ದೀಪ ಪ್ರಜ್ವಾಲನ ಪೂರ್ವಕ ಉದ್ಘಾಟನೆ ನಡೆಯಿತು. ಶ್ರೀ ಶಂಕರಾಚಾರ್ಯ ವಾಸುದೇವಾನಂದ ಸರಸ್ವತಿ ಅವರು ಸಮಾರಂಭದ ಅಧ್ಯಕ್ಷ ಪೀಠದಲ್ಲಿ ವಿರಾಜಮಾನರಾಗಿದ್ದರು. ಶ್ರೀ ಪ್ರವೀಣಭಾಯ್ ತೊಗಾಡಿಯಾ, ಪ.ಪೂ. ಸರಸಂಘಚಾಲಕ ಶ್ರೀ ಕು.ಸೀ. ಸುದರ್ಶನಜೀ, ಮಾನ್ಯ ಸಿಂಘಾಲ್‌ಜೀ, ಸಾಧ್ವಿ ಋತಂಭರಾ, ಶ್ರೀ ದಯಾನಂದ ಸರಸ್ವತೀ ಮಹಾರಾಜ್, ಶ್ರೀ ಗೋವಿಂದ ದೇವ ಗಿರೀಜೀ ಮಹಾರಾಜ್, ಶ್ರೀ ವಿಶ್ವೇಶತೀರ್ಥ ಶ್ರೀಪಾದರು, ಹಾಲೆಂಡ್‌ನ ಸ್ವಾಮಿ ಬ್ರಹ್ಮದೇವ ಉಪಾಧ್ಯಾಯ, ಮಹಾಮಂಡಲೇಶ್ವರ ವಿಯೋಗಾನಂದಜೀ, ಮಹಾಮಂಡಲೇಶ್ವರಿ ಸಂತೋಷಿ ಮಾ, ಜಪಾನೀ ಬೌದ್ಧಸಾಧ್ವಿ ನೀಟೋ ಯಾಕೋ ಮುಂತಾದವರು ಮಾತನಾಡಿದರು.

ಪ.ಪೂ. ಕು.ಸೀ. ಸುದರ್ಶನಜೀ ಅವರು "ಹಿಂದುಸ್ಥಾನದಲ್ಲಿ ಹಿಂದು ತನ್ನ ಮಧ್ಯದಲ್ಲೇ ಅಪಮಾನಕ್ಕೆ ಗುರಿಯಾಗುತ್ತಿದ್ದಾನೆ. ಅನೇಕ ಭಾಷೆ, ದೇವ–ದೇವತೆಯರು, ನಾನಾ ಪ್ರಕಾರದ ಪೂಜಾ ಪದ್ಧತಿಗಳು, ಸಾವಿರಾರು ಜಾತಿಗಳು; ಹಾಗಿದ್ದರೂ ಅನೇಕತೆಯಲ್ಲಿ ಏಕತೆ ಹಿಂದೂಸ್ಥಾನದ ವೈಶಿಷ್ಟ್ಯ; ಆ ವೈಶಿಷ್ಟ್ಯವೇ ಹಿಂದುತ್ವ; ಅದೇ ಭಾರತದ ಹಿಂದೂ ರಾಷ್ಟ್ರೀಯತೆ; ರಾಷ್ಟ್ರೀಯತೆಯೆಂಬುದು ಸಮಾನ ಸಾಂಸ್ಕೃತಿಕ ಪರಂಪರೆ ಮತ್ತು ಜನರ ಭಾವನಾತ್ಮಕ ಆತ್ಮೀಯತೆಗೆ ಆಶ್ರಯವಾದ ಒಂದು ಭೌಗೋಳಿಕ ಪ್ರದೇಶ, ಇವುಗಳೊಂದಿಗೆ ಬೆಸೆದುಕೊಂಡಿದೆ; ಪ್ರಾದೇಶಿಕ ಹಾಗೂ ಭಾಷಾಸಂಬಂಧಗಳು, ಸಾಮಾಜಿಕ ಹಾಗೂ ಸಾಂಸ್ಕೃತಿಕ ನಡಾವಳಿಗಳು, ಇವುಗಳನ್ನು ಮೀರಿದ ಏಕತೆ ಹಿಂದೂಗಳಲ್ಲಿ ಮೂಡಿಬರಬೇಕು," ಎಂದು ಕರೆ ನೀಡಿದರು,

ಮಾನ್ಯ ಪ್ರವೀಣಭಾಯಿ ತೊಗಾಡಿಯಾ ಅವರು ಭಾರತದ ಮೂಲೆ ಮೂಲೆಗಳಲ್ಲಿ ಕೇಸರಿ ಧ್ವಜ ರಾರಾಜಿಸುವವರೆಗೆ ಯಾವ ಹಿಂದುವಿಗೂ ವಿಶ್ರಾಂತಿಯಿಲ್ಲ; ಹಿಂದೂ ರಾಷ್ಟ್ರವೆಂದರೆ, ಅದರಲ್ಲಿ ಮತೀಯತೆಯ ಯಾವುದೇ ಸೊಗಡಿಲ್ಲ. "ವಸುಧೈವ ಕುಟುಂಬಕಮ್" ಎಂಬ ಪರಿಕಲ್ಪನೆಯ ಸಾಕಾರರೂಪ ಅದು, ಎಂದು ಹೇಳಿದರು.

ಮಾನ್ಯ ಶ್ರೀ ಅಶೋಕ ಸಿಂಘಾಲ್‌ಜೀ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ವಿಶ್ವ ಹಿಂದು ಪರಿಷದ್ ಭಾರತ ಭೂಮಿಯ ಮೇಲೆ ಎಲ್ಲಿಯೂ ಧರ್ಮಾಂತರಣಕ್ಕಾಗಿ ಯಾವುದೇ ಚರ್ಚನ್ನು ನಿರ್ಮಿಸಲು ಬಿಡುವುದಿಲ್ಲ; ಮೂರು ವರ್ಷಗಳಲ್ಲಿ ನಿರಕ್ಷರತೆಯ ಕಲಂಕವನ್ನು ಕಳೆದು ಹಾಕಲು ಒಂದು ಲಕ್ಷ ಗ್ರಾಮಗಳಲ್ಲಿ ಯಾವುದೇ ಶುಲ್ಕವಿಲ್ಲದೆ ಏಕಲ್ ವಿದ್ಯಾಲಯಗಳನ್ನು ಪ್ರಾರಂಭಿಸುತ್ತದೆ; ಗೋಹತ್ಯೆಯನ್ನು ತಡೆಯಲು ಕೇಂದ್ರೀಯ ಕಾನೂನು ನಮ್ಮ



ಆಗ್ರಹದ ವಿಷಯವಾಗಿದೆ; ಸರಕಾರಗಳು ಆಕ್ರಮಿಸಿಕೊಂಡ ಮಂದಿರಗಳನ್ನು ಮುಕ್ತಗೊಳಿಸಲಾಗುವುದು, ಎಂದು ಘೋಷಿಸಿದರು.

ಪೂಜ್ಯ ಆಚಾರ್ಯ ಧರ್ಮೇಂದ್ರಜೀಯವರು 'ಹಿಂದೂ ವೋಟ್ ಬ್ಯಾಂಕ್' ವಿಷಯದ ಬಗ್ಗೆ ಮಾತನಾಡಿದರು.

ಜಪಾನಿನಿಂದ ಬಂದ ಪ್ರತಿನಿಧಿಗಳ ಗುಂಪಿನ ನೇತಾರಳಾಗಿದ್ದ ನೀಟೋ ಯಾಕೋ "We in japan looked towards India as our mother. This was because our religion (Buddhism) originated in this country", ಎಂದು ಹೇಳಿದರು. ಆಕೆ ಹಿಂದೊಮ್ಮೆ ಭಾರತಕ್ಕೆ ಬಂದಿದ್ದಾಗ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಕೊಟ್ಟಿದ್ದ "Whisper of Jasmine" ಎಂಬ ಗ್ರಂಥವನ್ನು ಆಧರಿಸಿದ 'ಕಮಲದ ಕುಣಿತ' (Lotus Dance) ಎಂಬ ಸಾಮೂಹಿಕ ಕಾರ್ಯಕ್ರಮವನ್ನು 12-2-2007 ರ ರಾತ್ರಿ ಪ್ರದರ್ಶಿಸಿದರು.

**ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು**

**ನಿರ್ಣಯ – 1**
**ಹಿಂದು ರಾಷ್ಟ್ರ ಮತ್ತು ಅದರ ಪುನಃ ಪ್ರತಿಷ್ಠಾಪನೆ**

ಹಿಂದೂ ರಾಷ್ಟ್ರದ ಅರ್ಥ ಸಂಕುಚಿತವಾಗಿರದೆ, ಸಮಗ್ರತೆಯಿಂದ ಕೂಡಿದ 'ಸರ್ವೇ ಭವಂತು ಸುಖಿನಃ' 'ಏಕಂ ಸದ್ ವಿಪ್ರಾ ಬಹುಧಾ ವದಂತಿ', 'ಆತ್ಮವತ್ ಸರ್ವಭೂತೇಷು', ಇವುಗಳೊಂದಿಗೆ 'ಯೋಗಃ ಕರ್ಮಸು ಕೌಶಲಮ್' ಹಾಗೂ 'ಯತ್ರ ವಿಶ್ವಂ ಭವತ್ಯೇಕನೀಡಮ್' ಎಂಬ ಭಾವಗಳಿಂದ ಸುತ್ತುವರೆಯಲ್ಪಟ್ಟು ಎಲ್ಲೆಡೆ ಸುಖ, ಶಾಂತಿಗಳಿಂದ ಕೂಡಿದ ಒಂದು ವಿಶ್ವ ಕುಟುಂಬದ ನಿರ್ಮಾಣ, ಎಂಬುದನ್ನು ಈ ಸಮ್ಮೇಳನವು ಸ್ಪಷ್ಟಪಡಿಸಲು ಇಚ್ಛಿಸುತ್ತದೆ. ಇದೇ ಹಿಂದುತ್ವ ಮತ್ತು ಹಿಂದೂ ರಾಷ್ಟ್ರದ ವ್ಯಾಪಕವಾದ ಅರ್ಥ.

**ನಿರ್ಣಯ – 2**
**ಹಿಂದೂ ಏಕತೆ**

ತೀರ್ಥರಾಜ ಪ್ರಯಾಗ, ತ್ರಿವೇಣೀ ಸಂಗಮದ ದಡದಲ್ಲಿ ನಡೆಯುತ್ತಿರುವ ತೃತೀಯ ವಿಶ್ವ ಹಿಂದೂ ಸಮ್ಮೇಲನದ ಈ ಸಭೆಯು ಭಾರತದಲ್ಲಿ ನಡೆಯುತ್ತಿರುವ ಅನೇಕ ಹಿಂದೂ ವಿರೋಧಿ ಚಟುವಟಿಕೆಗಳ ವಿರುದ್ಧ ನಗರ-ಗ್ರಾಮಗಳಲ್ಲಿ ಸಂಚರಿಸಿ ಸಂಪೂರ್ಣ ಹಿಂದೂ ಸಮಾಜವನ್ನು ಸಂಘಟಿತ ಹಾಗೂ ಜಾಗೃತಗೊಳಿಸಬೇಕೆಂದು ದೇಶದ ಸಂತರು ಮತ್ತು ಪ್ರಬುದ್ಧ ಜನರನ್ನು ಆಗ್ರಹಪಡಿಸುತ್ತದೆ.

ಈ ಭಾರತ ಹಿಂದುಗಳಿಗೆ ಸೇರಿದ್ದು. ಆದ್ದರಿಂದ ಹಿಂದೂ ಸಮಾಜದ ಕರ್ತವ್ಯವೆಂದರೆ ನಮ್ಮೆಲ್ಲ ಹಿಂದೂ ಬಂಧುಗಳನ್ನು ಸ್ನೇಹಸೂತ್ರದಿಂದ ಬಂಧಿಸಿ ಮೇಲೆದ್ದು ಭಾರತದ ಏಕತೆ ಮತ್ತು ಅಖಂಡತೆಯನ್ನು ರಕ್ಷಿಸುವುದೇ ಆಗಿದೆ.

**ನಿರ್ಣಯ – 3**
**ಶ್ರೀ ರಾಮ ಜನ್ಮಭೂಮಿ ಮತ್ತು ರಾಮಮಹೋತ್ಸವ**

1. ಶ್ರೀ ರಾಮ ಜನ್ಮಭೂಮಿಯಲ್ಲಿ ಈಗ ಎಲ್ಲಿ ರಾಮಲಲಾ ವಿರಾಜಮಾನನಾಗಿದ್ದಾನೋ ಅದೇ ಸ್ಥಾನದಲ್ಲಿಯೇ ಭವ್ಯ ಮಂದಿರ ನಿರ್ಮಿತವಾಗುವುದು

2. ಅಯೋಧ್ಯೆಯಲ್ಲಿ ಶಾಸ್ತ್ರೋಕ್ತ ಸಾಂಸ್ಕೃತಿಕ ಸೀಮೆಯಲ್ಲಿ ಯಾವುದೇ ಮಸೀದಿಯನ್ನು ಕಟ್ಟಲು ಬಿಡುವುದಿಲ್ಲ ಮತ್ತು ವಿದೇಶೀ ಆಕ್ರಮಣಕಾರ ಬಾಬರನ ಹೆಸರಿನ ಮಸೀದಿ ಸಮಗ್ರ ಭಾರತದಲ್ಲಿ ಎಲ್ಲಿಯೂ ಆಗಲು ಬಿಡುವುದಿಲ್ಲ.

3. ಒಂದು ಪಕ್ಷ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಯಾವುದೇ ಪ್ರಕಾರದ ಅಡೆತಡೆಗಳನ್ನು ಒಡ್ಡಿದರೆ ಹಿಂದೂ ಸಮಾಜವು ಅಂತಿಮ ಹೋರಾಟಕ್ಕೆ ಸಿದ್ಧವಿರಬೇಕು.

**ನಿರ್ಣಯ – 4**
**ಸಾಮಾಜಿಕ ಸಾಮರಸ್ಯ**

ಹಿಂದೂ ಸಮಾಜದಲ್ಲಿ ಯಾರೂ ಪತಿತನಿಲ್ಲ. ಭಾರತ ಮಾತೆ

ಎಲ್ಲಾ ಭಾರತೀಯರ ತಾಯಿ. ನಾವೆಲ್ಲಾ ಹಿಂದು. ಯಾವುದೇ ಪ್ರಾಂತ, ಯಾವುದೇ ಸೀಮೆಗೆ ಒಳಪಟ್ಟವರಿರಬಹುದು, ನಾವೆಲ್ಲ ಸಹೋದರರು. ಭಾರತ ನಮ್ಮ ಮಾತೃಭೂಮಿ, ಪುಣ್ಯಭೂಮಿ, ಧರ್ಮಭೂಮಿ ಮತ್ತು ಕರ್ಮಭೂಮಿ. ಇದೇ ಧರೆಯ ಮೇಲೆ ಗಂಗಾ, ಯಮುನಾ, ಸಿಂಧು, ನರ್ಮದಾ, ಸರಯೂ, ಬ್ರಹ್ಮಪುತ್ರ, ಕೃಷ್ಣಾ, ಕಾವೇರಿಯಂತಹ ಅಸಂಖ್ಯ ಪವಿತ್ರ ನದಿಗಳು ಹರಿಯುತ್ತಿವೆ.


ತೃತೀಯ ವಿಶ್ವ ಹಿಂದೂ ಸಮ್ಮೇಲನವು ಹಿಂದೂ ಧರ್ಮದಲ್ಲಿ ಸ್ಪೃಶ್ಯಾಸ್ಪ್ರಶ್ಯತೆಯ ಆಚರಣೆಗೆ ಯಾವುದೇ ಶಾಸ್ತ್ರೀಯ ಆಧಾರವಿಲ್ಲವೆಂದು ನಂಬುತ್ತದೆ. ಏಕೆಂದರೆ ನಮ್ಮೆಲ್ಲರ ಸಮಾನ ಸಂಸ್ಕೃತಿ ಮತ್ತು ಆ ಸಂಸ್ಕೃತಿಯ ಘೋಷಣೆಯೆಂದರೆ 'ಆತ್ಮವತ್ ಸರ್ವಭೂತೇಷು' ಎಲ್ಲರಲ್ಲಿರುವುದು ಒಂದೇ ಆತ್ಮ ಎಂಬುದೇ ಆಗಿದೆ. ಸಂತ ತುಲಸೀದಾಸಜೀ ಕೂಡ 'ಸಿಯಾರಾಮ ಮಯ ಸಬ್ ಜಗಜಾನೀ, ಕರಹು ಪ್ರಣಾಮ ಜೋರಿ ಜಗ ಪಾನೀ' ಎಂದು ಹೇಳಿ ಎಲ್ಲರನ್ನೂ ಸೀತಾ–ರಾಮ ಸ್ವರೂಪರೆಂದು ನಂಬಿ ಕೈಜೋಡಿಸಿ ನಮಸ್ಕರಿಸಿದ್ದಾರೆ.

ತೃತೀಯ ವಿಶ್ವ ಹಿಂದೂ ಸಮ್ಮೇಲನವು ಹಿಂದೂ ಸಮಾಜಕ್ಕೆ ಸಿದ್ಧಾಂತ ಮತ್ತು ವ್ಯವಹಾರಗಳಲ್ಲಿ ಏಕತೆಯನ್ನು ಸಾಧಿಸಿ ಸಮಾಜದಲ್ಲಿ ಹರಡಿದ, ಹೊರಿಸಲಾದ ಮೇಲು–ಕೀಳು ಎಂಬ ಭಾವಗಳ ಹೇಯ ವ್ಯವಹಾರವನ್ನು ಶೀಘ್ರವಾಗಿ ಕೊನೆಗೊಳಿಸಿ, ಸ್ಪಷ್ಟ ರೂಪದಲ್ಲಿ 'ಹಿಂದವಃ ಸೋದರಾಃ ಸರ್ವೇ', 'ನ ಹಿಂದುಃ ಪತಿತೋ ಭವೇತ್', 'ಮಮ ದೀಕ್ಷಾ ಹಿಂದೂರಕ್ಷಾ', 'ಮಮ ಮಂತ್ರಃ ಸಮಾನತಾ', 'ಹಿಂದುಗಳೆಲ್ಲಾ ಒಂದೇ', 'ಯಾವ ಹಿಂದುವೂ ಅಸ್ಪೃಶ್ಯನಲ್ಲ' 'ಹಿಂದೂ ರಕ್ಷಣೆ ನನ್ನ ದೀಕ್ಷೆ', 'ಸಮಾನತೆ ನನ್ನ ಮಂತ್ರ' ಎಂಬ ಘೋಷಣೆಗಳನ್ನು ಆಚರಣೆಯಲ್ಲಿ ತರಬೇಕೆಂದು ಅಪೇಕ್ಷೆ ಪಡುತ್ತದೆ. ನಮ್ಮ ಮಂದಿರಗಳು, ಯಜ್ಞ ಶಾಲೆಗಳು, ನಮ್ಮ ಮನೆಗಳು ಹಾಗೂ ಸಂಸ್ಥೆಗಳು ನಮ್ಮ ಎಲ್ಲಾ ಸಮಾಜ ಬಂಧುಗಳಿಗೆ ಮುಕ್ತವಾಗಿರಬೇಕು ಮತ್ತು ಸಮಗ್ರ ಹಿಂದೂ ಸಮಾಜವು ತನ್ನ ಸಮಾಜದ ಎಲ್ಲಾ ಘಟಕಗಳಿಗೆ ದೇವಸ್ಥಾನಗಳಲ್ಲಿ ಪ್ರವೇಶ ಮಾಡಲು ಮತ್ತು ದೇವರ ದರ್ಶನ ಮಾಡಿಕೊಳ್ಳಲು ಮುಕ್ತ ಅವಕಾಶವನ್ನು ಕಲ್ಪಿಸಿಕೊಡಬೇಕು. ಏಕೆಂದರೆ ನಾವೆಲ್ಲಾ ಹಿಂದುಗಳು, ಒಬ್ಬಳೇ ತಾಯಿಯ ಮಕ್ಕಳು.

**ನಿರ್ಣಯ – 5**

**ಹಿಂದೂ ವೋಟ್ ಬ್ಯಾಂಕ್ ಮತ್ತು ಹಿಂದೂ ರಾಜ್ಯ**

ಈ ಸಭೆಯು ಹಿಂದೂ ಸಮಾಜಕ್ಕೆ, ಪಕ್ಷ, ಜಾತಿ, ಲಿಂಗ ಭಾಷೆ ಮುಂತಾದ ಸಂಕುಚಿತ ಭಾವನೆಗಳಿಂದ ಮೇಲೆದ್ದು ನಮ್ಮ ನೂರಕ್ಕೆ ನೂರರಷ್ಟು ಮತಗಳನ್ನು ಕೊಟ್ಟು ಶಕ್ತಿಯುತ ಹಿಂದೂ ವೋಟ್ ಬ್ಯಾಂಕನ್ನು ನಿರ್ಮಿಸಬೇಕೆಂದೂ ಮತ್ತು ಅತಿ ಶೀಘ್ರವಾಗಿ ಭಾರತದಲ್ಲಿ ಧರ್ಮ – ಸಂಸ್ಕೃತಿಗಳ ಪ್ರತಿಪಾದಕವಾದ ರಾಜಸತ್ತೆಯನ್ನು ನಿರ್ಮಿಸಿ ಹಿಂದುತ್ವ ಮತ್ತು ಹಿಂದೂ ರಾಷ್ಟ್ರದ ರಕ್ಷಣೆಯನ್ನು ಮಾಡಿ ಶಕ್ತಿ ಶಾಲಿ, ಸಾಮರಸ್ಯಯುಕ್ತ ಏಕಾತ್ಮ ಸರ್ವಪಂಥ ಸಂರಕ್ಷಕ ಭಾರತವನ್ನು ಕಟ್ಟಬೇಕೆಂದು ಕರೆ ನೀಡುತ್ತದೆ.



# ಇತರ ಸಮ್ಮೇಳನಗಳು:



ಪಂಡರಾಪುರ

ಈ ಆರು ದಶಕಗಳ ಕಾಲಾವಧಿಯಲ್ಲಿ ಇದೇ ರೀತಿಯ ಇನ್ನೂ ಅನೇಕ ಸಮ್ಮೇಳನಗಳು ಪ್ರಾದೇಶಿಕ ಮಟ್ಟದಲ್ಲಿ–ಜೋರ್ ಹಾಟ್ (ಅಸ್ಸಾಂ) ಪಂಡರಾಪುರ (ಮಹಾರಾಷ್ಟ್ರ), ತಿರುಪತಿ (ಆಂಧ್ರ), ಎರ್ನಾಕುಳಂ (ಕೇರಳ) ಮೊದಲಾದ ಕಡೆಗಳಲ್ಲಿ ಸುಮಾರಾಗಿ ಎಲ್ಲ ಪ್ರಾಂತಗಳಲ್ಲೂ ನಡೆದಿವೆ. ಕೆಲವು ಪ್ರಾಂತಗಳಲ್ಲಿ ಎರಡು ಅಥವಾ ಇನ್ನೂ ಹೆಚ್ಚು ಸಮ್ಮೇಳನಗಳು ನಡೆದಿರುವುದೂ ಇದೆ. ಈ ಕಾಲಾವಧಿಯಲ್ಲಿನ ಕುಂಭ ಮೇಳದ ಮತ್ತು ಅರ್ಧಕುಂಭದ ಸಂದರ್ಭಗಳಲ್ಲೂ–ಹಿಂದುಗಳು ಸಹಜವಾಗಿ ಶ್ರದ್ಧೆಯಿಂದ ಅವುಗಳಲ್ಲಿ ಪಾಲ್ಗೊಳ್ಳುವುದರಿಂದ–ಅವುಗಳನ್ನು ಸದವಕಾಶಗಳಾಗಿ ಬಳಸಿಕೊಂಡು ಪ್ರಯಾಗ, ನಾಸಿಕ, ಉಜ್ಜೈನಿ ಮೊದಲಾದ ಕಡೆಗಳಲ್ಲಿ ಸಹ ಸಮ್ಮೇಳನಗಳು ನಡೆದಿವೆ. ಈ ಎಲ್ಲ ಸಮ್ಮೇಳನಗಳು ನಾಲ್ಕು ಉದ್ದೇಶಗಳನ್ನು–(1) ಅಸಂಖ್ಯ ವೈವಿಧ್ಯಗಳಿದ್ದರೂ – ತಾವು ಸಂಘಟಿ–ತರಾಗಬಲ್ಲೆವು ಎಂಬ ವಿಶ್ವಾಸ ಹಿಂದುವಿನ ಮನದಲ್ಲಿ ಮೂಡಿಸಿದುದು, (2) ಒಂದು ಬಲವಾದ ಸಂಘಟಿ–ತ ಸಾಮಾಜಿಕ ಶಕ್ತಿ ತನ್ನ ಬೆಂಬಲಕ್ಕಿದೆಯೆಂಬ ಅರಿವು ತುಂಬಿದುದು, ಹಾಗೂ (3) ತಾನೊಂದು ಶ್ರೇಷ್ಠ ಸಂಸ್ಕೃತಿಯ ವಾರಸುದಾರನೆಂಬ ಆತ್ಮವಿಶ್ವಾಸ, (4) ತನ್ನ ಸಾಮಾಜಿಕ ದೋಷ, ದೌರ್ಬಲ್ಯಗಳನ್ನು ಸ್ವೀಕರಿಸಿ, ಅವನ್ನು ಸ್ವಪ್ರೇರಣೆಯಿಂದ ಸರಿಪಡಿಸಲು ತಾನು ಮುಂದಾಗಬೇಕೆಂಬ ಜಾಗೃತಿಯನ್ನು ಮೂಡಿಸಿದುದು–ಪ್ರಾದೇಶಿಕ ಮಟ್ಟದಲ್ಲಿ ಸಫಲಗೊಳಿಸಿದ ಪ್ರಯತ್ನಗಳಾದವೆಂಬುದನ್ನು – ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವೇನೂ ಇಲ್ಲ.

ಇಂಥ ಸಮ್ಮೇಳನಗಳು ಭಾರತದ ಗಡಿಯಾಚೆ ಸಹ ಕೆಲವು ರಾಷ್ಟ್ರಗಳಲ್ಲಿ ನಡೆದಿವೆ. ಬ್ರಿಟನ್‌ನಲ್ಲಿ ನಡೆದ ಅಂಥ ಒಂದು ಸಮ್ಮೇಳನದ ಉಲ್ಲೇಖ ಸಹ ಇಲ್ಲಿ ಮಾಡುವುದು ಅಗತ್ಯವೇ. 1983ರ ಜುಲೈ 30, 31ರಂದು ಇನ್ಫೋರ್ಡ್ ನಗರದಲ್ಲಿ ನಡೆದ ಸಮ್ಮೇಳನದಲ್ಲಿ ಬ್ರಿಟನ್‌ನಿಂದಲ್ಲದೆ, ಯುರೋಪ್, ಆಫ್ರಿಕಾ, ಅಮೆರಿಕವೂ ಸೇರಿದಂತೆ 600 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಈ ಸಮ್ಮೇಳನದಲ್ಲಿ ವಿಶ್ವ ಹಿಂದು ಪರಿಷತ್ತಿನ ಅಂತಾರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಹರಮೋಹನಲಾಲ್ ಮತ್ತು ಗ್ವಾಲಿಯರ್‌ನ ರಾಜಮಾತೆ ವಿಜಯರಾಜೆ ಸಿಂಧ್ಯಾ ಅವರು ವಿಶೇಷ ಅತಿಥಿಗಳಾಗಿ ಆಹ್ವಾನಿತರಾಗಿದ್ದರು.

ಈ ಸಮ್ಮೇಳನದಲ್ಲಿ ವಿಶೇಷವಾಗಿ ಚರ್ಚಿತವಾದ ವಿಷಯಗಳು 1) ಹಿಂದು ಧರ್ಮದ ಕುರಿತು ಇರುವ ತಪ್ಪು ಕಲ್ಪನೆಗಳು 2) ತರುಣ ಪೀಳಿಗೆಯವರು ಹಿಂದು ಧಾರ್ಮಿಕ ಜೀವನಾದರ್ಶಗಳನ್ನು ಮೈಗೂಡಿಸಿಕೊಳ್ಳುವುದು ಹೇಗೆ 3) ಶಾಲೆಗಳಲ್ಲಿಂದು ಧಾರ್ಮಿಕ ಶಿಕ್ಷಣ ಮತ್ತು (4) ಯುರೋಪ್‌ನಲ್ಲಿ ಹಿಂದು ಧರ್ಮದ ಭವಿಷ್ಯ.



ಸಿದ್ಧಪುರ ಗುಜರಾತ್

ಈ ಸಮ್ಮೇಳನದ ಘೋಷ ವಾಕ್ಯವಾಗಿದ್ದುದು 'ವಿವಿಧತೆಯಲ್ಲಿ ಏಕತೆ' . ಇದಲ್ಲದೆ ಆಫ್ರಿಕಾ, ಕೊಲ್ಲಿ ರಾಷ್ಟ್ರಗಳು, ಏಶ್ಯಾ, ವೆಸ್ಟ್ ಇಂಡೀಸ್ ದ್ವೀಪಗಳು, ಸ್ಕಾಂಡಿನೇವಿಯಾ ಮೊದಲಾದ ಕೆಲವು ರಾಷ್ಟ್ರಗಳಲ್ಲಿ ಹಿಂದು ಸಮುದಾಯವು ಎದುರಿಸುತ್ತಿರುವ ಹಾಗೂ ಅಸುರಕ್ಷಿತತೆಯ ವಾತಾವರಣವನ್ನು ಸಮರ್ಥವಾಗಿ ಪರಿಹರಿಸುವುದು ಹೇಗೆ ಮತ್ತು ಅಲ್ಲಿನ ಭಾರತ ಮೂಲದ ಸಮುದಾಯದವರು ಪರಸ್ಪರ ಸಹಕರಿಸಿ ಒಂದಾಗಿ ಬದುಕಬೇಕಾದ ಅಗತ್ಯ. ಇವುಗಳು ಗಂಭೀರವಾದ ಚರ್ಚೆಯ ವಿಷಯಗಳಾದವು. ತಮ್ಮ ಸುರಕ್ಷಿತ ಬದುಕಿಗೆ ಭರವಸೆ ನೀಡುವಂಥ ವ್ಯವಸ್ಥೆ ಮಾಡುವಂತೆ ಸ್ಥಾನೀಯ ಸರಕಾರಗಳ ಸಮಕ್ಷಮದಲ್ಲಿ ಸಮುದಾಯವು ಒಂದಾಗಿ ಧ್ವನಿಯೆತ್ತುವಂತೆ ಸಹ ದೇಶಸ್ಥ ಹಿಂದುಗಳಿಗೆ ಸಲಹೆ ನೀಡಲಾಯಿತು ಇದೇ ಸಮ್ಮೇಳನದಲ್ಲಿ ವಿಶ್ವ ಹಿಂದು ಪರಿಷತ್ತಿನ ಬ್ರಿಟನ್ ಘಟಕಕ್ಕೆ ಆ ವಿದೇಶದಲ್ಲಿರುವ ಇನ್ನಿತರ ಎಲ್ಲ ಹಿಂದು ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಅವುಗಳಲ್ಲಿ ಪರಸ್ಪರ ಸಮನ್ವಯ ಸಾಧಿಸುವ ಹೊಣೆಯನ್ನು ವಹಿಸಲಾಯಿತು. ಅದ-ರಿಂದಾಗಿ ಆ ಎಲ್ಲ ಸಂಘಟನೆಗಳಿಂದ ಸಹಕಾರ ಪಡೆದು ಇಂಗ್ಲೆಂಡ್‌ನಲ್ಲಿ ಮಾತ್ರವಲ್ಲದೆ, ಯುರೋಪ್‌ನ ಇನ್ನಿತರ ದೇಶಗಳಲ್ಲೂ ಇರುವಂಥ ಹಿಂದುಗಳ ಒಂದು ಕೇಂದ್ರೀಯ ಸಂಘಟನೆಯಾಗಿ ಪಾತ್ರ ನಿರ್ವಹಿಸುವ ಗುರುತರ ಹೊಣೆ ಸಹಜವಾಗಿಯೇ ಬ್ರಿಟನ್ ವಿಶ್ವ ಹಿಂದು ಪರಿಷತ್ತಿನ ಹೆಗಲಿಗೇರಿತು.

**ಬದಲಾವಣೆಗೆ ರಕ್ತಪಾತವಿಲ್ಲ:** ಬದಲಾವಣೆಗಳನ್ನು ಹಿಂದು ಸಮಾಜವು ಕ್ರಮಶಃ ಒಪ್ಪಿ ಸ್ವೀಕರಿಸಿತು. ಇದಕ್ಕಾಗಿ ಹೋರಾಟ, ಹೊಡೆದಾಟ ಆಗಲಿಲ್ಲ. ರಕ್ತಪಾತವಾಗಲಿಲ್ಲ. ಎಲ್ಲವೂ ಚರ್ಚೆಯ ಮಟ್ಟದಲ್ಲಿ, ವಿಚಾರದ ಮಟ್ಟದಲ್ಲಿ ವಿಮರ್ಶಿಸಲ್ಪಡಬೇಕು. ಯೋಗ್ಯವಾದುದನ್ನು ಪೂಜ್ಯ ಹಿರಿಯರು ನಿಃಸ್ವಾರ್ಥಿಗಳು ನಿರ್ಣಯಿಸಿ ಹೇಳುತ್ತಾರೆ. ಅವರೇ ಸ್ಮೃತಿಕಾರರು. ಅವರ ಮಾತು ಆ ಕಾಲಕ್ಕೆ ಸರ್ವಮಾನ್ಯ, ಹಾಗಾಗಿ ಹಿಂದು ಸಮಾಜದಲ್ಲಿ ಎಷ್ಟೊಂದು ಬಲಾವಣೆಗಳು ವಿಶೇಷ ಗೊಂದಲ ಇಲ್ಲದೆ ಆಗಿವೆ, ಆಗುತ್ತಿವೆ. ಇತ್ತೀಚೆಗೆ ನೂರಾರು ಸಾವಿರಾರು ಕುಟುಂಬಗಳು ಸಹಸ್ರಾರು ವರ್ಷಗಳಿಂದ ನಂಬಿ ನಡೆದು ಬಂದಿದ್ದ ಅಳಿಯಕಟ್ಟು ಮರುಮಕ್ಕತ್ತಾಯಪದ್ಧತಿಗಳು ಮುಕ್ತಾಯವಾದುವು. ಇದಕ್ಕಾಗಿ ದೊಡ್ಡ ಹೋರಾಟ ಆಗಿಲ್ಲ. ರಕ್ತಪಾತ ಆಗಲಿಲ್ಲ ಸಮಾಜವೇ ಅದನ್ನೊಪ್ಪಿ ನಡೆಯುತ್ತದೆ. ಹೀಗೆ ಸಮಾಜವು ಕಾಲಬಾಹ್ಯವಾದ ರೂಢಿಗಳನ್ನು ಬಿಟ್ಟು ಯೋಗ್ಯ ಬದಲಾವಣೆಗಳನ್ನು ರೂಪಿಸಬೇಕು ಎಂಬುದು ಸರ್ವಮಾನ್ಯವಾದ ಹಿಂದು ದೃಷ್ಟಿ.

'ತಾತ ಕೂಪೋಯಮಿತಿ ಬ್ರುವಾಣಃ । ಕ್ಷಾರಂ ಜಲಂ ಕಾಪುರುಷಾಃ ಪಿಬಂತಿ 'ಅಪ್ಪ ತೋಡಿಸಿದ ಬಾವಿ ಎಂದು ಉಪ್ಪುನೀರನ್ನೇ ಕುಡಿಯುವವರನ್ನು ಮೂರ್ಖರು ಎಂದಿದೆ' ಇದರ ಪರಿಣಾಮವಾಗಿ ಇಲ್ಲಿ ಎಲ್ಲ ರೀತಿಯ ಜನ, ಬಗೆಬಗೆಯ ದೇವರು, ಬಗೆಬಗೆಯ ಭಾಷೆ-ವೇಷಗಳು ನಾನಾ ರೀತಿಯ ಕಟ್ಟು-ಕಟ್ಟಳೆಗಳು ತುಂಬಿಕೊಂಡಿವೆ. ಎಲ್ಲ ಕಾಲದ ಎಲ್ಲ ಜನರಿಗೂ ಒಂದೇ ಆಕೃತಿ, ಒಂದೇ ವ್ಯವಸ್ಥೆ ತರುವ ರೂಢಿ ಇಲ್ಲಿಲ್ಲ, ಒತ್ತಾಯವೂ ಇಲ್ಲ.

# ವಿಶ್ವ ಹಿಂದು ಪರಿಷದ್ ಭೂಮಿಕೆ

–ವಾದಿರಾಜ ಪಂಚಮುಖಿ

ಲೇಖಕರು ಮುಂದೆ ಸಂನ್ಯಾಸ ಸ್ವೀಕರಿಸಿ ಪೂಜ್ಯ ಶ್ರೀ ವಿದ್ಯಾತ್ಮತೀರ್ಥ ನಾಮಧೇಯದಲ್ಲಿ ಪ್ರಯಾಗ ಪಲಿಮಾರು ಮಠದ ಪೀಠಾಧೀಶರಾದರು.

ಸಾವಿರದೊಂಬೈನೂರ ಅರವತ್ತಾನಾಲ್ಕರಲ್ಲಿ ಶ್ರೀಕೃಷ್ಣಾಷ್ಟಮಿಯಂದು ಸಾಂದೀಪನಿ ಸಾಧನಾಲಯದಲ್ಲಿ ವಿಶ್ವ ಹಿಂದು ಪರಿಷತ್ತು ಪ್ರಾರಂಭವಾಯಿತು. ಅದರ ಧ್ಯೇಯೋದ್ದೇಶಗಳನ್ನು ಈ ರೀತಿ ವಿವರಿಸಬಹುದು:

**ಪ್ರತಿಕ್ರಿಯೆ ಮತ್ತು ಬೆಳವಣಿಗೆ:** ಇವೆರಡು ಜೀವಂತಿಕೆಯ ಲಕ್ಷಣಗಳು. ಜಗತ್ತನ್ನೇ ಕ್ರಿಶ್ಚನ್ನಾಗಿ ಪರಿವರ್ತಿಸಿ ಕ್ರಿಶ್ಚನ್ ಸಾಮ್ರಾಜ್ಯವನ್ನು ಸ್ಥಾಪಿಸುವುದು ಕ್ರಿಶ್ಚನ್ನರ ಹಂಬಲವಾದರೆ ಜಗತ್ತನ್ನೇ ಮುಸ್ಲಿಂ ಮಯವಾಗಿಸಲು ಮುಸ್ಲಿಮರು ಹೆಣಗುತ್ತಿದ್ದಾರೆ. ಒಂದು ಚಿಕ್ಕ ಘಟನೆಗೂ ಕೂಡ ಜಗತ್ತೇ ಕಳವಳಿಸುವಷ್ಟು ಗಲಾಟೆಯನ್ನು ಪ್ರತಿಕ್ರಿಯಾತ್ಮಕವಾಗಿ ಇವರು ಉಂಟುಮಾಡುತ್ತಾರೆ. ಹೀಗೆ ತೀವ್ರ ತರದ ಪ್ರತಿಕ್ರಿಯೆಯಾಗಲಿ ತನ್ನ ಬೆಳವಣಿಗೆಯ ಹಂಬಲವಾಗಲಿ ಹಿಂದೂ ಸಮಾಜದಲ್ಲಿ ಕಾಣಬರುತ್ತಿಲ್ಲವೇಕೆ?

ಹಿಂದೂ ಶ್ರದ್ಧೆಗಳಿಗೆ ಎಷ್ಟೇ ಆಘಾತವಾಗಲೀ, ಹಿಂದೂ ದೇವದೇವತೆಗಳಿಗೆ ಎಷ್ಟೇ ಅವಮಾನಕಾರಕ ಘಟನೆಗಳು ನಡೆಯಲಿ ಹಿಂದೂ ತನ್ನಷ್ಟಕ್ಕೆ ತಾನೇ ಗೊಣಗುತ್ತಾನೆ, ಅದರಲ್ಲಿಯೇ ಕೆಲವರು ತಮ್ಮಲ್ಲಿ ಚರ್ಚಿಸಬಹುದು. ಇಷ್ಟು ಮಾತ್ರಕ್ಕೆ ಹಿಂದುವಿನ ಪ್ರತಿಕ್ರಿಯೆ ನಿಂತುಹೋಗುತ್ತದೆ. ಇದಕ್ಕೂ ಹೆಚ್ಚಿನ ಪ್ರತಿಕ್ರಿಯೆಯನ್ನು ಅವನೇಕೆ ತೋರುತ್ತಿಲ್ಲ?

ಅದೇ ರೀತಿಯಾಗಿ ಸಂಖ್ಯಾತ್ಮಕವಾಗಿಯಾಗಲೀ ಗುಣಾತ್ಮಕವಾಗಿಯಾಗಲೀ ಹಿಂದು ಇಂದೇಕೆ ಬೆಳೆಯುತ್ತಿಲ್ಲ? ಈ ಸಮಾಜ ಎಂದೆಂದಿಗೂ ಹೀಗೆಯೇ ಇತ್ತೆ? ಪ್ರಬಲವಾದ ಆಕಾಂಕ್ಷೆ ಈ ಸಮಾಜ–ಕ್ಕೆ ಇರಲಿಲ್ಲವೇ? ಈ ಪ್ರಶ್ನೆಗೆ ಉತ್ತರವನ್ನು ನಾವು ಇತಿಹಾಸದಲ್ಲಿ ಹುಡುಕಬೇಕಾಗುತ್ತದೆ.

**ಕೃಣ್ವಂತೋ ವಿಶ್ವಮಾರ್ಯಂ:** ಜಗತ್ತಿನ ಜನರನ್ನೆಲ್ಲ ಸುಸಂಸ್ಕೃತರನ್ನಾಗಿ ಮಾಡುತ್ತೇವೆ. ಎಂದು ಪ್ರತಿಜ್ಞೆ ತೊಟ್ಟ ಸಮಾಜವಿದು. ನಾನು ಸುಸಂಸ್ಕೃತನಾಗುವುದಷ್ಟೇ ಅಲ್ಲ; ತಾನು ಕಂಡುಕೊಂಡ ನಿತ್ಯಸತ್ಯಗಳಾದ ಜೀವನ ಮೌಲ್ಯಗಳನ್ನು ಜಗತ್ತಿನ ಜನ–ರಿಗೆ ಉಣಬಡಿಸಿ ಒಳ್ಳೆಯವರನ್ನಾಗಿಸಿ ಎಲ್ಲವೂ ಸುಖವಾಗಿರಲಿ ಎಂದು ಬಯಸಿದ ಸಮಾಜವಿದು. ಅಂತೆಯೇ ಧರ್ಮಪ್ರಚಾರವನ್ನು ಶಸ್ತ್ರದಿಂದಾಗಲೀ ಮೋಸದಿಂದಾಗಲೀ ಮಾಡದೆ ತಾನು ಒಳ್ಳೆಯದೆಂದು ತಿಳಿದದ್ದನ್ನು ಬೇರೆಯವರ ಅನುಭವಕ್ಕೆ ತಂದು ಅವರ ಸದಸದ್ವಿವೇಕದ ವಿವೇಚನೆಯಿಂದ ಅವರಾಗಿಯೇ ಈ ಸಿದ್ಧಾಂತಗಳನ್ನು ಅನುಸರಿಸುವಂತೆ ಮಾಡಿದವ–ರಿವರು. ಆದರೆ ಇಂತಹ ಒಂದು ಹಿರಿಯ ಸಮಾಜದ ಸದಸ್ಯರು ತಮ್ಮ ಆಂತರಿಕ ಮತಭೇದ ಕಲಹಗಳಿಂದಾಗಿ, ಪರಕೀಯರ ಮೋಸ ವಂಚನೆಗಳನ್ನೂ ತಿಳಿಯದಷ್ಟು ಸಭ್ಯರಾಗಿ ತಮಗಿಂತಲೂ ಎಲ್ಲದರಲ್ಲಿ ನಿಕೃಷ್ಟರಾದವ–ರಿಗೆ ಸೋತು ದಾಸರಾದುದು ಒಂದು ವಿಷಾದಕರವಾದ ಐತಿಹಾಸಿಕ ವಿಪರ್ಯಾಸವಾಗಿದೆ.

ಈ ಸಾವಿರಾರು ವರ್ಷಗಳ ದಾಸ್ಯದಿಂದಾಗಿ ಅಸಂಘಟಿ–ತನಾದ ಹಿಂದುವಿಗೆ ತಾನು 'ಏಕಾಕಿ' ಎಂದೆನಿಸಿ ಯಾವುದೇ ಒಂದು ಧೈರ್ಯದ ಹೆಜ್ಜೆಯನ್ನಿಡದಂತೆ ಆಗಿದೆ. ಘಟನೆಗಳ ಅರಿವಾದರೂ ಅದಕ್ಕೆ ತಕ್ಕ ಪ್ರತಿಕ್ರಿಯೆ ಅವನಿಂದ ಘಟಿಸುತ್ತಿಲ್ಲ. ಜಗತ್ತೇ ಮನ್ನಿಸುವ ಸೈದ್ಧಾಂತಿಕ ಭೂಮಿಕೆ ಇದ್ದರೂ ವಿಸ್ತಾರದ ಹಂಬಲವನ್ನು, ವೃದ್ಧಿಯ ಯೋಚನೆಯನ್ನವನು ಮಾಡದಂತಾಗಿದ್ದಾನೆ.

ಅದಕ್ಕಾಗಿ ಈ ಅಸಂಘಟಿತವಾದ ಹಿಂದೂ ಸಮಾಜವನ್ನು ಸಂಘಟಿಸಿ ಬಲಪಡಿಸುವುದು, ತನ್ಮೂಲಕ ಜಗತ್ತಿನ ಚರಾಚರ ವಸ್ತುಗಳೆಲ್ಲವೂ ಸುಖದಿಂದಿರುವಂತಾಗ

ಬೇಕೆಂಬುದನ್ನು ವಿಶ್ವ ಹಿಂದು ಪರಿಷತ್ತು ತನ್ನ ಪ್ರಧಾನವಾದ ಉದ್ದೇಶವನ್ನಾಗಿ ಹೊಂದಿದೆ.

ನಮ್ಮ ಪ್ರಾಚೀನ ಋಷಿ ಮುನಿಗಳು, ಸಾಧು-ಸಂತರು, ಶರಣ ದಾಸರು ತಮ್ಮ ಜೀವನದುದ್ದಕ್ಕೂ ಚಿಂತನ ಮಂಥನ ಮಾಡಿ ಸರ್ವಶ್ರೇಷ್ಠವಾದ, ಸನಾತನವಾದ, ನಿತ್ಯ ಸತ್ಯವಾದ, ಆದ್ದರಿಂದ ಸಕಲರೂ ಆಚ-ರಿಸಲು ಯೋಗ್ಯವಾದ ಜೀವನ ಸಿದ್ಧಾಂತಗಳನ್ನು ಕಂಡುಕೊಂಡರು ಮತ್ತು ಅವನ್ನು ನಿಜ ಜೀವನದಲ್ಲಿ ಆಚರಿಸಿ ರೂಢಿಸಿ ತೋರಿಸಿದರು. ಇಂದು ಆ ಜೀವನ ಸಿದ್ಧಾಂತಗಳು ಹಿಂದೂ ಜೀವನ ಮೌಲ್ಯಗಳೆಂದು ಕರೆಯಲ್ಪಡುತ್ತವೆ (ಅಹಿಂಸೆ, ಬ್ರಹ್ಮಚರ್ಯೆ, ಅಸ್ತೇಯ, ಇಂದ್ರಿಯ ನಿಗ್ರಹ, ಚತುರ್ವಿಧ ಪುರುಷಾರ್ಥ, ಚತುರಾಶ್ರಮಗಳು ಇತ್ಯಾದಿ ಕೆಲವನ್ನು ಹೆಸರಿಸಬಹುದು). ಈ ಸರ್ವಶ್ರೇಷ್ಠವಾದ ಜೀವನ ಮೌಲ್ಯಗಳ ಅರಿವಿಲ್ಲದೆ ಜಗತ್ತಿನ ಜನರೆಲ್ಲ ತಮ್ಮ ಜೀವಿತದ ಉದ್ದೇಶವನ್ನು ತಿಳಿಯದೆಯೇ ಬರಡು ಜೀವನವನ್ನು ಬಾಳುತ್ತಿದ್ದಾರೆ. ಆದರೆ ಈ ಮೌಲ್ಯಗಳನ್ನು ಸರಿಯಾಗಿ ಅರ್ಥೈಸಿ ಹೇಳುವವರಿಲ್ಲದೆ ಈ ಮೌಲ್ಯಗಳೇ ತಮ್ಮ ಸತ್ವವನ್ನು ಕಳೆದುಕೊಂಡಿವೆ ಎಂದು ಅನ್ನಿಸತೊಡಗಿದೆ. ಅದಕ್ಕಾಗಿ ಈ ಜೀವನ ಮೌಲ್ಯಗಳಿಗೆ ಸರಿಯಾಗಿ ಅರ್ಥ ಹೇಳಿ ಇಂದಿನ ಜನರಿಗೆ ಅರ್ಥವಾಗುವಂತೆ ಅನ್ವಯಿಸುವುದು, ಮತ್ತು ಈ ಜೀವನ ಮೌಲ್ಯಗಳನ್ನು

ಪ್ರಚುರಪಡಿಸುವುದನ್ನು ಪರಿಷತ್ತು ತನ್ನ ಎರಡನೆಯ ಪ್ರಮುಖವಾದ ಉದ್ದೇಶವನ್ನಾಗಿಸಿಕೊಂಡಿದೆ.

**ಹಿಂದವಃ ಸೋದರಾಃ ಸರ್ವೇ:** ಸಾವಿರಾರು ವರ್ಷಗಳ ದಾಸ್ಯದಲ್ಲಿ ಈ ಸಮಾಜವನ್ನು ಉಳಿಸಿಕೊಂಡು ಬಂದದ್ದೆ ಒಂದು ಸಾಹಸದ ಕತೆ. ಆದ-ರೆ ಈ ಹೆಮ್ಮೆಯ ಸಾಧನೆಯ ನಡುವೆ ಕೆಲವೊಂದು ದೋಷಗಳೂ ನುಸುಳಿ ಹೋಗಿವೆ. ಜಾತಿಗಳ ಹೆಸರಿನಲ್ಲಿ ಮೇಲುಕೀಳರಿಮೆಗಳು, ಸ್ಪೃಶ್ಯ-ಅಸ್ಪೃಶ್ಯ ಆಚರಣೆಗಳು ಇವುಗಳಲ್ಲಿ ಅತ್ಯಂತ ಪ್ರಮುಖವಾದವುಗಳು ಮತ್ತು ಘೋರತಮವಾದವುಗಳು. ಇವು ಒಂದು ವಿಜಿಗೀಷು ಸಮಾಜ ಉನ್ನತಿಗೆ, ಬೆಳವಣಿಗೆಗೆ ಮಾರಕವಾಗಿ ನಿಂತಿವೆ. ಈ ಸಮಾಜದ ದೋಷಗಳನ್ನು ನಿವಾರಿಸಲು ಅನೇಕ ಧರ್ಮ ಪ್ರವರ್ತಕರು, ಸಮಾಜ ಸುಧಾರಕರು ಹೆಣಗಿದರೂ ಈ ದೋಷಗಳು ನಿವಾರಣೆಯಾಗದೆ ಅರ್ಬುದ ರೋಗದಂತೆ ಸಮಾಜವನ್ನು ಒಳಗೇ ಕೊರೆದು ತಿನ್ನುತ್ತಿವೆ. ಅದಕ್ಕಾಗಿ ಈ ದೋಷಗಳನ್ನು ದೂರೀಕರಿಸಿ ಸುದೃಢ ಹಿಂದೂ ಸಮಾಜವನ್ನು ಕಟ್ಟಲು ವಿಶ್ವ ಹಿಂದು ಪರಿಷತ್ತು ಸಮಾನತೆಯನ್ನು ಆಧಾರವಾಗಿಟ್ಟುಕೊಂಡು ಹಿಂದುಗಳೆಲ್ಲ ಸೋದರರು, ಬಂಧುಗಳು, ಯಾರನ್ನೂ ಪ್ರತ್ಯೇಕವಾಗಿ ಪರಿಗಣಿಸದೇ ಹಿಂದುಗಳೆಲ್ಲ ಒಂದೆಂಬ ಭಾವನೆಯನ್ನು ಸಮಗ್ರ ಸಮಾಜದಲ್ಲಿ ಮೂಡಿಸುವುದನ್ನು ಮೂರನೇಯ ಮುಖ್ಯ ಗುರಿಯನ್ನಾಗಿ ಹೊಂದಿದೆ.

ಪರಿಷತ್ತಿನ ದೃಷ್ಟಿಯಲ್ಲಿ ಭಾರತದಲ್ಲಿರುವವರಲ್ಲಿ ಎರಡೇ ವಿಧ. ಒಂದು ಈಗ ಹಿಂದುಗಳಾಗಿದ್ದವರು; ಉಳಿಸವರು ಹಿಂದೆ ಹಿಂದುಗಳಾಗಿದ್ದವರು ಮತ್ತು ಮುಂದೆ ಹಿಂದುಗಳಾಗುವವರು. ಅದಕ್ಕಾಗಿ ಭಾರತದಲ್ಲಿರುವವರನ್ನೆಲ್ಲ ಪರಿಷತ್ತು ಬಂಧುಗಳೆಂದೇ ಪರಿಗಣಿಸುತ್ತದೆ. ನಮ್ಮನ್ನು ತೊರೆದು ಹೋದ ಬಂಧುಗಳು ಪುನಃ ಈ ಮಾತೃ ಧರ್ಮಕ್ಕೆ ಸೇರಿ ಸನಾತನ ಸತ್ಯವಾದ ಜೀವನ ಮೌಲ್ಯಗಳನ್ನು ತಮ್ಮದಾಗಿಸಿಕೊಳ್ಳಬೇಕೆಂದು ಕರೆಕೊಟ್ಟಿದೆ. ಹುಟ್ಟಿನಿಂದಲೇ ಹಿಂದುವಾಗಿ ಜನಿಸಿರುವ ಇವರನ್ನು ಯಾರೂ ನೀರನ್ನು ಚಿಮುಕಿಸಿಯಾಗಲಿ. ಕೆಲ ಕಲಮಾಗಳನ್ನು ಹೇಳಿಯಾಗಲಿ ಮತಾಂತರ ಮಾಡಲಾರರು. ಅದಕ್ಕಾಗಿ ಯಾವ ಸಂಕೋಚವಿಲ್ಲದ ಈ ಎಲ್ಲ ಬಂಧುಗಳು ಮರಳಿ ಮಾತೃಧರ್ಮಕ್ಕೆ ಬರಬೇಕೆಂದು ಪರಿಷತ್ತು ಕರೆ ನೀಡಿದೆ. ಅದನ್ನನುಸರಿಸಿ ಸಾವಿರಾರು ವರ್ಷಗಳಿಂದ ಮುಚ್ಚಿದ್ದ ಬಾಗಿಲನ್ನು ತೆರೆದು ಸಮಾನತೆಯ ಆಧಾರದ ಮೇಲೆ ಅವರನ್ನು ಸ್ವಾಗತಿಸುತ್ತದೆ. ಹೀಗೆ ಪರಿಷತ್ತು ಪರಾವರ್ತನವನ್ನು ತನ್ನ ನಾಲ್ಕನೆಯ ಪ್ರಧಾನ ಉದ್ದೇಶವಾಗಿಟ್ಟುಕೊಂಡಿದೆ.

**ವಸುಧೈವ ಕುಟುಂಬಕಂ:** ಭಾರತವನ್ನು ಹೊರತುಪಡಿಸಿ ವಿಶ್ವದ 97 ರಾಷ್ಟ್ರ ಗಳಲ್ಲಿ ಹಿಂದುಗಳು ವಾಸಿಸುತ್ತಿದ್ದಾರೆ. ಅವರು ಭಾರತದಲ್ಲಿಯ ಹಿಂದುಗಳಿಗಿಂತ ವಿಭಿನ್ನವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ಸಮಸ್ಯೆಗಳನ್ನರಿತು ಅವುಗಳಿಗೆ ಸೂಕ್ತ ಪರಿಹಾರಗಳನ್ನು ನೀಡಬೇಕಾದದ್ದು ಭಾರತದ ಹೊಣೆಗಾರಿಕೆ, ನಮ್ಮ ಸರಕಾರವಾದರೋ ಧರ್ಮ ನಿರಪೇಕ್ಷತೆಯ ಹೆಸ-ರಿನಲ್ಲಿ ಅವುಗಳೆಡೆಗೆ ತನ್ನ ಗಮನವನ್ನೀಯವಾಗಿದೆ. ಅದಕ್ಕಾಗಿ ಪರಿಷತ್ತು ವಿದೇಶಗಳಲ್ಲಿರುವ ಸುಮಾರು ಮೂರು ಕೋಟಿಗೂ ಮಿಕ್ಕಿರುವ ಹಿಂದುಗಳನ್ನು ಸಂಪರ್ಕಿಸಿ ಅವರ ಸಮಸ್ಯೆಗಳನ್ನರಿತು ಅವಕ್ಕೆ ಪರಿಹಾರವನ್ನು ಕಂಡುಕೊಳ್ಳುವುದನ್ನು ತನ್ನ ಐದನೆಯ ಉದ್ದೇಶವನ್ನಾಗಿಸಿದೆ.

**ರಚನಾತ್ಮಕ ಕಾರ್ಯಕ್ರಮಗಳು:** ಈ ತನ್ನ ಘನವಾದ ಉದ್ದೇಶ (ಧ್ಯೆಯ)ಗಳನ್ನು ಪೂರೈಸಲು ಪರಿಷತ್ತು ಭಾರತಾದ್ಯಂತ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹೊಂದಿದೆ. ಸಂಸ್ಕಾರಕ್ಷಮವಾದ ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ಉತ್ತಮವಾದ ಸಂಸ್ಕಾರ ಪಡೆದು

ಸ್ವಾಭಿಮಾನ, ಸುಶೀಲ, ದೇಶಭಕ್ತಿ ಮುಂತಾದ ಸದ್ಗುಣಗಳನ್ನು ಪಡೆಯುವಂತೆ ಬಾಲಸಂಸ್ಕಾರ ಕೇಂದ್ರಗಳು, ಮಾದರಿ ಶಾಲೆಗಳು, ಶಿಶುವಿಹಾರಗಳು, ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣ ಮುಂತಾದುವುಗಳನ್ನು ಸಂಘಟಿಸುತ್ತದೆ. ಏಕಾತ್ಮತೆಯ ಪ್ರತ್ಯಕ್ಷ ಅನುಭೂತಿಯನ್ನು ಹೊಂದುವಂತೆ ಪಾದಯಾತ್ರೆಗಳು, ಸಮಾಜೋತ್ಸವಗಳು, ಜಯಂತಿ ಉತ್ಸವಗಳು, ಉಪನ್ಯಾಸ ಮಾಲಿಕೆಗಳನ್ನು ಏರ್ಪಡಿಸಲಾಗುತ್ತದೆ. ಸಮಾಜದಲ್ಲಿಯ ದೋಷಗಳನ್ನು ನಿವಾರಿಸಿ ಹೊಸ ವಿಚಾರ ಆಚಾರಗಳು ಸರಿಯಾದ ಕ್ರಮದಲ್ಲಿ ನಡೆದು ನವನವೀನ ಸ್ಮೃತಿಗಳ ನಿರ್ಮಾಣ ವಾಗುವುದಕ್ಕನುಕೂಲವಾಗುವಂತೆ ಧರ್ಮಾಚಾರ್ಯರ ಸಮಾವೇಶಗಳು, ಮಾರ್ಗದರ್ಶಕ ಮಂಡಳಿಗಳ ನಿರ್ಮಾಣ, ಧರ್ಮ ಸಂಸತ್ ಮುಂತಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತದೆ. ಸಮಾಜದ ಎಲ್ಲ ವರ್ಗಗಳಲ್ಲಿಯೂ ಉತ್ತಮರಾದ ಅರ್ಚಕ ಪುರೋಹಿತರ ನಿರ್ಮಾಣಕ್ಕಾಗಿ ಅರ್ಚಕ ಪುರೋಹಿತ ಶಿಕ್ಷಣ ಶಿಬಿರ, ಯುವಕರಲ್ಲಿ ಧಾರ್ಮಿಕ ಶ್ರದ್ಧೆಗಳನ್ನು ಬೆಳೆಸುವುದಕ್ಕಾಗಿ ಧಾರ್ಮಿಕ ಶಿಕ್ಷಣ ಶಿಬಿರ, ಸಮಾಜಸೇವೆಯನ್ನು ನಿಸ್ವಾರ್ಥ ರೀತಿಯಿಂದ

ಮಾಡುವುದಕ್ಕಾಗಿ ಸೇವಾವ್ರತಿ ಶಿಕ್ಷಣ ಶಿಬಿರ ಮುಂತಾದವುಗಳು ಯಶಸ್ವಿಯಾದ ಪರಿಷತ್ತಿನ ನವೀನ ಕ್ರಮಗಳಾಗಿವೆ. ಮತಾಂತರವನ್ನು ತಡೆಗಟ್ಟಿ ಪರಾವರ್ತನವನ್ನು ಒಂದು ಚಳುವಳಿಯ ರೂಪದಲ್ಲಿ ಕೈಗೊಳ್ಳುವುದಕ್ಕೆ ಅನುವಾಗುವಂತೆ "ಧರ್ಮ ರಕ್ಷಾ ಯೋಜನೆ"ಯನ್ನು ರೂಪಿಸಲಾಗಿದೆ. ವಿದೇಶಗಳಲ್ಲೆಲ್ಲ ಪರಿಷತ್ತಿನ ಶಾಖೆಗಳನ್ನು ಸ್ಥಾಪಿಸಿ ಅಲ್ಲಿನ ಹಿಂದುಗಳ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆದಿವೆ.


ಈ ಸಂಸ್ಕಾರಕ್ಷಮ ಕಾರ್ಯಕ್ರಮಗಳಲ್ಲದೆ ಅನೇಕ ಸೇವಾ ಪ್ರಕಲ್ಪಗಳನ್ನು ಪರಿಷತ್ತು ಹಮ್ಮಿಕೊಂಡಿದೆ. ಗುಡಿಸಲುಗಳಲ್ಲಿರುವವರ ಬಾಗಿಲುವರೆಗೂ ವೈದ್ಯಕೀಯಸೇವೆ, ಬಡವರಿಗಾಗಿ ಸುಲಭ ಬೆಲೆಯಲ್ಲಿ ಸುಸಜ್ಜಿತ ಆಸ್ಪತ್ರೆಗಳು, ಅನಪೇಕ್ಷಿತ ಮಕ್ಕಳಿಗಾಗಿ ಅರ್ಭಕಾಲಯಗಳು, ಪರಿತ್ಯಕ್ತ ಮಹಿಳೆಯರಿಗಾಗಿ ಅಭಯಾಶ್ರಮಗಳು, ಇಂದು ಉಪೇಕ್ಷಿತರಾಗಿರುವವರು ಅಪೇಕ್ಷಿತರಾಗುವಂತೆ ಅನೇಕ ಆರ್ಥಿಕ ಯೋಜನೆಗಳು ಮುಂತಾದುವನ್ನು ಕೈಕೊಂಡು ದೀನ ದುಃಖಿತ ದರಿದ್ರರ ಕಣ್ಣೀರನ್ನೊರೆಸಲು ಸಹಾಯ ಹಸ್ತವನ್ನು ನೀಡಿದೆ.

**ಪರಿಷತ್ತು ಒಂದು ಆಂದೋಲನ:** ಈ ತರದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವ ಪರಿಷತ್ತು ಇಂದು ಗ್ರಾಮಾಂತರ ಪ್ರದೇಶದ ವರೆಗೆ ಬೆಳೆದು ಒಂದು ವಿರಾಡ್ರೂಪದ ಚಳುವಳಿಯಾಗಿ ಸದ್ಯ ದೇಶದಲ್ಲಿನ ಹಿಂದೂ ಹೆದ್ದೆರೆಗೆ ಪ್ರಮುಖ ಅಂಶವಾಗಿ ರೂಪುಗೊಂಡಿದೆ. ಆದರೆ ಇಷ್ಟರಿಂದಲೇ ಯಾರಿಗೂ ಸಮಾಧಾನವಾಗದು. ಹಿಂದೂ ಸಮಾಜ ಸುಸಂಘಟಿ–ತವಾಗಿ ತನ್ನ ಮೇಲಿನ ಎಲ್ಲ ಆಕ್ರಮಣಗಳನ್ನು ದೂ–ರೀಕರಿಸಿ ಪ್ರಬಲ ಶಕ್ತಿಯಾಗಿ ಎದ್ದು ನಿಂತುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಹಿಂದುವು ಅಭಿಮಾನಶಾಲಿಯಾಗಿ ಪ್ರತಿಯೊಂದು ಕ್ರಿಯೆಗೂ ಸರಿಯಾದ ಪ್ರತಿಕ್ರಿಯೆ ತೋರುವುದರೊಂದಿಗೆ ಗುಣಾತ್ಮಕವಾಗಿ ಮತ್ತು ಸಂಖ್ಯಾತ್ಮಕವಾಗಿ ವೃದ್ಧಿಯನ್ನು ಹೊಂದಬೇಕಾಗಿದೆ. ಮುಂಬರುವ ದಿನಗಳಲ್ಲಿ ಪರಿಷತ್ತು ತನ್ನ ಕಾರ್ಯ ಯೋಜನೆಯನ್ನು ಈ ದಿಕ್ಕಿನಲ್ಲಿ ರೂಪಿಸಬೇಕಾಗಿದೆ. ಈ ಸಮಾಜ ರಕ್ಷಣೆಯ ದೀಕ್ಷೆಯನ್ನು ಹೊತ್ತು ಒಬ್ಬ ಹಿಂದುವೂ ಮತಾಂತರ ಹೊಂದದಂತೆ ಕಾಪಿಡುವುದರೊಂದಿಗೆ ಹೊರ ಹೋದವರನ್ನೆಲ್ಲ ಮನವೊಲಿಸಿ ಪುನಃ ಹಿಂದುವಾಗಿಸಬೇಕಾಗಿದೆ. ಇದಕ್ಕೆ ಅನುಕೂಲವಾಗುವಂತೆ ಪರಿಷತ್ತು ಅನೇಕ ಸೇವಾ ಪ್ರಕಲ್ಪಗಳನ್ನು ನಡೆಸುತ್ತಿರುವದು ನಿಜ. ಆದರೆ ಇಷ್ಟರಿಂದಲೇ ಕಾರ್ಯವಾಗದು. ಸಮಾಜವು ಸ್ವಾಭಿಮಾನಪೂರ್ಣವಾಗಲು ಧೈರ್ಯೋನ್ಮತ್ತರಾದ ತರುಣ ತಂಡದ ನಿರ್ಮಾಣ ಪ್ರಾಥಮಿಕ ಅವಶ್ಯಕತೆಯಾಗಿದೆ. ಹೆಚ್ಚು ಹೆಚ್ಚು ಯುವಕರು ಪರಿಷತ್ತಿನ ಕಾರ್ಯದೆಡೆಗೆ ತನ್ಮೂಲಕ ಸಮಾಜ ಸೇವೆ ಮಾಡಲು ಆಕೃಷ್ಟರಾಗುವಂತೆ ಕಾರ್ಯ ಯೋಜನೆ ಮಾಡಬೇಕಾಗಿದೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದಾಗ ಉಂಟಾಗುವ ಸಮಸ್ಯೆಗಳ ನಿವಾರಣೆಗೆ ಅವರಿಗೆ ಬೆಂಬಲವಾಗಿ ನಿಲ್ಲಬಲ್ಲ ಹಿರಿಯರ ಗುಂಪೂ ದೊಡ್ಡದಾಗಬೇಕಾಗಿದೆ. ಸತ್ಯವಾದ, ಸರಿಯಾದ ವಿಚಾರಗಳನ್ನು ಗಟ್ಟಿಯಾಗಿ ಸ್ಪಷ್ಟವಾಗಿ ಶಾಸ್ತ್ರರೂಪದಲ್ಲಿ ಹೇಳಬಲ್ಲ ಹಿರಿಯ ಸ್ಮೃತಿಕಾರರ ನಿತಾಂತ ಅವಶ್ಯಕತೆ ಇದೆ. ಅವರು ಬರಿ ಹೇಳುವವರಾಗಿರದೆ ನಮ್ಮ ಪ್ರಾಚೀನರಂತೆ ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು ಆಗ್ರಹಪೂರ್ವಕವಾಗಿ ಬೇರೆಯವರೂ ಅವನ್ನು ಅನುಸ–ರಿಸುಂವಂತೆ ಮಾಡುವವರಾಗಿರಬೇಕು. ಸಮಾಜ ಪ್ರಮುಖರೆಂದು ಹೇಳಿಕೊಳ್ಳುವವರು ಈ ಹಿಂದೂ ಉದ್ದೇಶಕ್ಕೆ ಅನುಸಾರವಾಗಿ ನಡೆಯುವಂತೆ ಒಂದು ನೈತಿಕ ಒತ್ತಡವನ್ನು ಅವರ ಮೇಲೆ ಹೇರಿ ಅವರನ್ನು ಸರಿಯಾದ ಮಾರ್ಗಕ್ಕೆ ಬರುವಂತೆ ಮಾಡಬೇಕಾಗಿದೆ. ಮುಖ್ಯವಾಗಿ ಇಂದು ಹಿಂದುವಾಗಿರುವವರು ಕೂಡ ನಿಜವಾದ ಹಿಂದುಗಳಾಗುವಂತೆ ಹಿಂದೂ ಜೀವನ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಆಗ್ರಹಪೂರ್ಣವಾದ ಒತ್ತಾಯವನ್ನು ಅವರ ಮೇಲೆ ಹೇರಬೇಕಾಗಿದೆ.

# ನಮ್ಮ ಬಾಬುರಾಯರು

– ಟಿ.ಎ.ಪಿ. ಶೆಣೈ

**95ನೆ ಹುಟ್ಟುಹಬ್ಬದ ಗೌರವ ಕೃತಿ 'ಜೋಗಿಯ ಕಿಂದರಿ'ಯಿಂದ ಆಯ್ದ ಒಂದು ಲೇಖನ**



*ಹಿರಿಯ ಪ್ರಚಾರಕರಾದ ರಘುನಾಥ ನಾರಾಯಣರಾವ್ ಪ್ರಭುದೇಸಾಯಿ ಉಪಾಖ್ಯ ಬಾಬುರಾವ್ ದೇಸಾಯಿಯವರು ಸಂಘದ ಪ್ರಚಾರಕರಾಗಿ ನಂತರ ವಿಶ್ವ ಹಿಂದು ಪರಿಷತ್ತಿನ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಅಖಿಲ ಭಾರತೀಯ ಕಾರ್ಯದರ್ಶಿಗಳಾಗಿದ್ದರು. ತಮ್ಮ ಕೊನೆಯವರೆಗೂ ಸಕ್ರಿಯರಾಗಿದ್ದು 98ನೇ ವಯಸ್ಸಿನಲ್ಲಿ ನಮ್ಮನ್ನು ಅಗಲಿದರು.*

*ಈ ಸಂಚಿಕೆಯಿಂದ ಪರಿಚಯ ಲೇಖನಗಳ ಸರಣಿ ಪ್ರಾರಂಭವಾಗುತ್ತದೆ.*

ಮೊನ್ನೆಮೊನ್ನೆಯವರೆಗೆ ನಮಗಾರಿಗೂ ಶ್ರೀ ರಘುನಾಥ ನಾರಾಯಣ ಪ್ರಭುದೇಸಾಯಿಗಳೆಂದರೆ ಯಾರೆಂದು ಗೊತ್ತೇ ಇರಲಿಲ್ಲ. ಆದರೆ ಈಚೆಗೆ ಅದು, ನಾವೆಲ್ಲ ಗೌರವಿಸುವ ಅದಕ್ಕೂ ಹೆಚ್ಚಾಗಿ ಪ್ರೀತಿಸುವ ಬಾಬುರಾವ್ ದೇಸಾಯಿಯವರ ಹೆಸರೆಂದು ಗೊತ್ತಾಯಿತು. ನಮ್ಮ ಮೇಲೆ ಅವರದ್ದು ಅಪಾರವಾದ ವಾತ್ಸಲ್ಯ. ಅವರ ಅತೀವ ಮಮತೆ ತಮ್ಮ ಮೇಲೆ ಮಾತ್ರ ಎಂದು ನಮ್ಮಂತೆ ಎಲ್ಲರೂ ಅಂದುಕೊಂಡಿರುತ್ತಾರೆ. ಮೈಸೂರಿನ ಅರಮನೆಯಲ್ಲಿ ಆಳಿದ ಮಹಾರಾಜರ ತೈಲಚಿತ್ರವೊಂದಿದೆ. ಅದನ್ನು ಯಾವುದೇ ಕಡೆಯಿಂದ ನೋಡಿದರೂ ಪ್ರವಾಸಿಗರಿಗೆ, ಮಹಾರಾಜರು ತಮ್ಮನ್ನೇ ದಿಟ್ಟಿಸಿ ನೋಡುವಂತೆ ಭಾಸವಾಗುತ್ತದೆ ಎಂದು ಗೈಡ್ ವಿವರಿಸುತ್ತಾನೆ. ಹಾಗೆಯೇ ಬಾಬೂರಾಯರ ಪ್ರೀತಿಯ ಛಾಯೆ ನಮ್ಮೆಲ್ಲರ ಮೇಲೆ ಆವರಿಸಿರುತ್ತದೆ.

ಬಾಬೂರಾಯರು ತಮ್ಮ ಬೌದ್ಧಿಕ್‌ಗಳಲ್ಲಿ ಉಲ್ಲೇಖಿಸುವ ಮಣ್ಣಿನ ಸೊಗಡಿನ ಪ್ರಸಂಗಗಳಂತೆ ಅವರ ವಾಂಛಲ್ಯಕ್ಕೂ ಅದೇ ಘಮ್ಮು. ನೆಲದ ಆಳದಲ್ಲೆಲ್ಲೋ ನೀರಿನ ಸೆಲೆ ಅಡಗಿರುತ್ತದೆ. ಅದನ್ನು ಹುಡುಕಿದರೆ ಸಾಲದು. ಮೊಗೆಯುವ ಶಕ್ತಿಯೂ ನಮಗಿರಬೇಕು ಎನ್ನುತ್ತಾರೆ ಬಾಬೂರಾಯರು. ಆದರೆ ಬಾಬೂರಾಯರು ಸನಿಹದಲ್ಲಿ ಇದ್ದರೆ ಸಾಕು. ಅಲ್ಲಿ ಮಮಕಾರದ ಅಕ್ಷಯ ಒಸರು ಇದ್ದೇ ಇರುತ್ತದೆ ಮತ್ತು ಅದರ ತಂಪು ಎಲ್ಲರಿಗೂ ತಲುಪುತ್ತದೆ.

ಬಾಲ್ಯದಲ್ಲೇ ಬಾಬೂರಾಯರು ತಮ್ಮ ತಾಯಿಯನ್ನು ಕಳೆದುಕೊಂಡರು. ಆ ಅಮ್ಮನ ವಾಂಛೆಯನ್ನು ಅವರು ತಮ್ಮ ಕಿರಿಯ ಸಹಕಾರಿಗಳ ಮೇಲೆ ಸುರಿದು ತಾವು ಪಡೆಯದ ಆ ವಾತ್ಸಲ್ಯದ ಸುಖವನ್ನು ಕಾಣಲು ಪ್ರಯತ್ನಿಸುತ್ತಿರುವರೋ ಏನೋ ?. ಅವರ ಕಿರಿಯ ಜೊತೆಗಾರರು ಕೆಲವೊಮ್ಮೆ ಸಹಮತಿಸಲು ಸಾಧ್ಯವಾಗದ ನಿರ್ಧಾರವನ್ನು ತೆಗೆದುಕೊಂಡ ಸಂದರ್ಭಗಳಿವೆ. ಆಗಲೆಲ್ಲಾ ಬಾಬೂರಾಯರ ತಾಯಿ ಮನಸ್ಸು ಅವರಿಂದ ದೂರವಾಗಲಿಲ್ಲ. ಮನೆಯಿಂದ ದೂರವಾದ ಮಗನನ್ನು ಕಂಡು ಸಂತೈಸುತ್ತಾ ಬಂದರೆ ಆತ ಮತ್ತೆ ಮರಳಿ ಬರುತ್ತಾನೆ ಎನ್ನುವ ಬಯಕೆಯಿಂದ ಕಾಯುತ್ತಿರುವ ಅಮ್ಮನ ಎದೆಯ ತುಡಿತ ಬಾಬೂರಾಯರದ್ದು.

**ಪ್ರತಿಭೆಯೆಲ್ಲವೂ ಸಮಾಜಕ್ಕೆ ಅರ್ಪಣೆ**

ಬಾಬೂರಾಯರು ಹಸ್ತಸಾಮುದ್ರಿಕವನ್ನು ಬಲ್ಲರು. ಅವರು ಯಾರ್‍ಯಾರ ಕೈಗಳ ಗೆರೆಗಳನ್ನು ಓದಿದ್ದಾರೋ ಗೊತ್ತಿಲ್ಲ. ಆದರೆ ಇಷ್ಟಂತೂ ನಿಜ. ತಮ್ಮ ಬಳಿ ಬಂದ ತರುಣರ ಕೈಬರಹ (ಹಣೆಬರಹದಂತೆ) ವನ್ನೇ ಅವರು ತಿದ್ದಿಬಿಟ್ಟರು. ತಮ್ಮ ರಿಕ್ತಹಸ್ತಗಳಿಂದ ಸಾವಿರಾರು ತರುಣರ ಕೈಗಳನ್ನು ರಾಷ್ಟ್ರರಕ್ಷಣೆಗಾಗಿ ಸಶಕ್ತಗೊಳಿಸಿದರು. ಪ್ರತಿ ತರುಣರ ಕೈಗಳಲ್ಲೂ ಅವರಿಗೆ ಕಾಣುವುದು ದೇಶಸೇವೆಗೆ ಪಣತೊಡುವ ಸದೃಢ ಭವಿಷ್ಯ ರೇಖೆಗಳು.

ಅವರು ಸೊಗಸಾಗಿ ಹಾರ್ಮೋನಿಯಂ ನುಡಿಸಬಲ್ಲರು. 36 ಹಿಂದೂಸ್ತಾನೀ ರಾಗಗಳಲ್ಲಿ ಅವ–ರಿಗೆ ವಿಶೇಷ ಪ್ರಾವೀಣ್ಯವಿದೆ. ಬಾಬೂರಾಯರು ಒಮ್ಮಿಂದೊಮ್ಮೆ ಹಾರ್ಮೋನಿಯಂ ವಾದನವನ್ನು ನಿಲ್ಲಿಸಿ ಬಿಟ್ಟರು. ಅದರ ಬದಲು ಸಹಸ್ರಾವಧಿ ತರುಣ ಕಂಠಗಳಿಗೆ "ದೇಶರಾಗ" ದ "ಭೂಪ"**ರಾಗುವ ನಾಜೂಕಿನ ತಾಲೀಮನ್ನು ಪ್ರಾರಂಭಿಸಿಬಿಟ್ಟರು. ವಿದ್ವಾಂಸರಿಗೆ ಶಿಷ್ಯರು ತಮ್ಮನ್ನು ಮೀರಿ ಬೆಳೆದರೆ ಇಮ್ಮಡಿ ಸಂತೋಷವಾಗುತ್ತದೆ ಎಂದು ಕೇಳಿದ್ದೇವೆ. ಹಾಗೆಯೇ ಬಾಬೂರಾಯರಿಗೆ ತಮ್ಮ ನಾಗಪುರ ಘರಾಣೆಯ ಚೀಜುಗಳನ್ನು ವಿಸ್ತರಿಸುವ ತರುಣ ಶಿಷ್ಯರು ಯಶಸ್ವೀ ಕಛೇರಿಗಳನ್ನು ನಡೆಸಿದರೆ ಎಲ್ಲಿಲ್ಲದ ಹಿಗ್ಗು. ಅವರ ಶಿಷ್ಯರನೇಕರು ಈಚೀಚೆ ಶುದ್ಧ ಶಾಸ್ತ್ರೀಯ ಗಾಯನದಂತೆಯೇ ಸುಗಮ ಸಂಗೀತ, ಜಾನಪದವಷ್ಟೇ ಅಲ್ಲ ಪಾಶ್ಚಿಮಾತ್ಯ ಸಿಂಫೋನಿಯೊಡನೆಯೂ ಭರ್ಜರಿ ಮೇಳವನ್ನು ನಡೆಸುತ್ತಿದ್ದಾರೆ. ಇಂತಹ ಸಂಗೀತ ಬೈಠಕ್‌ಗಳಲ್ಲಿ ಅಲ್ಲಲ್ಲಿ ಮಿಂಚಿ ಮರೆಯಾಗುವ ತಮ್ಮ ನಾಗಪುರ ಘರಾಣೆಯ ರೇಕುಗಳನ್ನು ಹುಡುಕಿ ಹುಡುಕಿ ಅವನ್ನು ಅದ್ಭುತ ಎಂದು ಕೊಂಡಾಡುವ ದೊಡ್ಡ ಮನಸ್ಸು ಬಾಬೂರಾಯರದ್ದು.

ಬಾಬೂರಾಯರು ಕಾಲೇಜು ಓದುವಾಗ ದೇಹದಾರ್ಢ್ಯ ಮತ್ತು ಭಾರ ಎತ್ತುವ ಸಾಧನೆಯಲ್ಲೂ ತೊಡಗಿದ್ದರು. ಈ ಹಿನ್ನೆಲೆಯಿಂದಾಗಿ ಈ ವಯಸ್ಸಿನಲ್ಲೂ ಅವರ ಶರೀರ ಮತ್ತು ಮನಸ್ಸುಗಳು ಸಕ್ರಿಯವಾಗಿವೆ. ಸಮಾಜ ಸಂಘಟನೆಯು ಅವರಿಗೆ ವೈಟ್‌ಲಿಫ್ಟರ್ ಒಬ್ಬನು ದಿನವೂ ನಡೆಸಬೇಕಾದ ಭಾರವೆತ್ತುವ ತಾಲೀಮು ಆಗಿಬಿಟ್ಟಿದೆ. ಬಾಬೂರಾಯರು ತಮ್ಮ ಜೊತೆಯ ಕಿರಿಯರಿಗೆ ಪ್ರಚಾರಕ ಜೀವನವನ್ನು ಗರಡಿಮನೆಯ ಕ್ರೀಡೆಯನ್ನಾಗಿಸಿಬಿಟ್ಟರು. ಉಲ್ಲಾಸ ನೀಡುವ ಅಖಾಡವನ್ನಾಗಿಸಿದರು.

ಅವರ ತಂದೆ ನಾರಾಯಣ ಪ್ರಭುದೇಸಾಯಿಯವರು ಹಣ್ಣಿನ ದೊಡ್ಡ ಮಂಡಿಯೊಂದನ್ನು ನಡೆಸುತ್ತಿದ್ದರು. ಆಗಲೇ ನಾಗಪುರದಲ್ಲಿ ಡಾ॥ ಹೆಡ್ಗೇವಾರರು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್. ಎಸ್. ಎಸ್. ) ಪ್ರಾರಂಭಿಸಿದ್ದರು. ಸಂಘದ ಪ್ರಚಾರ ಕಾರ್ಯಕ್ಕಾಗಿ ಪುಣೆಗೆ ಬಂದ ಡಾಕ್ಟರ್‌ಜಿಯವರಿಗೆ ಅಲ್ಲಿಯ ಜನರು ಪುಣೆಯಲ್ಲಿ ನಾಗಪುರದ ಕಿತ್ತಳೆಹಣ್ಣಿಗೆ ಗಿರಾಕಿ ಸಿಗುವುದಿಲ್ಲವೆಂದು ಲೇವಡಿ ಮಾಡಿದ್ದರು. ಆದರೆ ಡಾ॥ ಹೆಡ್ಗೆವಾರರ ನಾಗಪುರ ಕಿತ್ತಳೆ ಮಂಡಿಯ ಹಣ್ಣುಗಳ ತಾಜಾ ಹೊಸತನ ಮತ್ತು ಅದರ ಘಮಲು ತರುಣರನ್ನು ಸೆಳೆಯುತ್ತಿತ್ತೆಂದು ಅವರಿಗೇನು ಗೊತ್ತು!. ತರುಣ ಬಾಬೂರಾಯರೂ ಆ ಹೊಸ ಸರಕಿಗೆ ಮಾರುಹೋದರು. ಅದರದ್ದೇ ಹೊಸ ಮಂಡಿಯೊಂದನ್ನು ಪ್ರಾರಂಭಿಸಬಾರದೇಕೆ ಎಂದೆನಿಸಿರಬೇಕು ಅವರಿಗೆ. ಸರಿ! ಬಾಬೂರಾಯರು ಸಂಘದ ಪ್ರಚಾರಕರಾಗಿ ಹೊರಟು ಉತ್ತರ ಕರ್ನಾಟಕದ ಉದ್ದಗಲಗಳಲ್ಲಿ ಅದೇ ನಾಗಪುರದ ಕಿತ್ತಳೆ ಹಣ್ಣುಗಳ ಸಗಟು ಮಾರಾಟವನ್ನು ಪ್ರಾರಂಭಿಸಿಬಿಟ್ಟರು! ಅವರ ಶಿಷ್ಯರು ಮತ್ತು ಜೊತೆಗಾರರಲ್ಲಿ ಅನೇಕರು ಈಗಿನ ಅಗತ್ಯಗಳನ್ನು ಕಂಡು "ವ್ಯಾಲ್ಯೂ ಎಡಿಷನ್" ಗುಣವರ್ಧಿಸಿ ನಾಗಪುರ ಕಿತ್ತಳೆಯದ್ದೇ ಜ್ಯೂಸ್, ಸ್ಕ್ವಾಷ್, ಕ್ರಷ್, ಜಾಮ್‌ಗಳನ್ನು ಮಾರುಕಟ್ಟೆಗೆ ಇಳಿಸಿಬಿಟ್ಟಿರುವರು.

ಪ್ರಚಾರಕನಾಗಿ ಹೊರಟ ಮಗ ರಘುನಾಥನ ಬಗ್ಗೆ ಅವರ ತಂದೆ "ಈತ ಬೈರಾಗಿಯಂತೆ ತಿರುಗುತ್ತಾನೆ, ಆದರೆ ಕಾವಿಬಟ್ಟೆ ಉಡುವುದಿಲ್ಲ ! ದೇಶ ಸೇವೆಗೆಂದು ಹೊರಟ ಜನ ಬಾಚಿಬಾಚಿ ಸಂಪಾದಿಸುತ್ತಾರೆ, ಆದರೆ ಈತ ಅದನ್ನೂ ಮಾಡಲಾರ !" ಎಂದು ಉದ್ಗಾರವೆತ್ತುತ್ತಿದ್ದರಂತೆ. ತಾವು ಪ್ರೀತಿಸುವ ಭಗವಂತನನ್ನು ಕುರಿತು ದಾಸರು ಮಾಡುವ ನಿಂದಾಸ್ತುತಿಯಂತೆ, ಇದು ಅಭಿಮಾನದ ಮಾತು!.

---

** ವಂದೇಮಾತರಂ ಗೀತೆಯ ಜನಪ್ರಿಯ ರಾಗ*

*** ಇನ್ನೊಂದು ಹಿಂದೂಸ್ಥಾನಿ ರಾಗ*



**ಅಂತರ್ಮುಖೀ ಜೀವನ**

ನಮ್ಮ ಬಾಬೂರಾಯರದ್ದು ಒಂದು ಬಗೆಯ ಅಂತರ್ಮುಖೀ ಜೀವನ. ಏಕಾಂತವನ್ನೂ ಆನಂದಿಸುವ ಅವಧೂತ ರೀತಿ. ಹಾಗಾಗಿ ತುರ್ತು ಪರಿಸ್ಥಿತಿಯ ಮೀಸಾಬಂಧನವು ಅವರಿಗೆ ಸಮರ್ಥ ರಾಮದಾಸರ 'ದಾಸಬೋಧ' ಶ್ಲೋಕಗಳ ಆಂತರ್ಯದ ಸೌಂದರ್ಯವನ್ನು ಕಾಣಲು ಸಹಕಾ– ರಿಯಾಯಿತು. ಅವುಗಳಲ್ಲಿ ಸಾಮಯಿಕ ಅರ್ಥಗಳನ್ನು ಅವರು ಹುಡುಕಿದರು. ಮ್ಯಾನೇಜ್‌ಮೆಂಟ್ ತತ್ವಗಳಿಗೆ ಹೊಸ ಕೊಡುಗೆಯನ್ನು ದಾಸಬೋಧವು ನೀಡಬಲ್ಲುದು ಎಂಬುದನ್ನು ಕಂಡುಕೊಂಡರು.

ಏಕಾಂಗಿತನದಲ್ಲೂ ಸಂತೋಷ ಕಾಣುವ ಈ ಪ್ರವೃತ್ತಿಯಿಂದಾಗಿ ಬಾಬೂರಾಯರು ಸೆರೆಮನೆಯ ವಾಸ್ತವ್ಯವನ್ನು ಹೊರಗಿರುವ ಹಿಂದು ಸಮಾಜದ ಸ್ಥಿತಿಗತಿಗಳೊಂದಿಗೆ ಹೋಲಿಸುವ ಮತ್ತು ವಿಶ್ಲೇಷಿಸುವ ಚಿಂತನೆಯಲ್ಲಿ ತೊಡಗಿಕೊಂಡರು. ಆದರೆ ಒಂಟಿತನವು ಎಲ್ಲರಿಗೂ ಸರಿಹೊಂದದು ಎಂಬ ವಾಸ್ತವಿಕತೆಯ ಅರಿವೂ ಅವರಿಗಿದ್ದಿತು. ಅದಕ್ಕಾಗಿ ಅವರು 'ಒಂಟಿತನವು ನಿರಾಶೆಯನ್ನು ತರುತ್ತದೆ. ಆದುದರಿಂದ ಸಂಘಟಿತರಾಗಿ ಆಶಾವಾದವನ್ನು ಬೆಳೆಸಿಕೊಳ್ಳಬೇಕು. ಅಷ್ಟಕ್ಕೆ ನಿಲ್ಲದೆ ಆಕ್ರಮಕ ಸ್ವಭಾವವನ್ನು ಬೆಳೆಸಿಕೊಳ್ಳಬೇಕು" ಎನ್ನುವ ಪರಿಹಾರವನ್ನು ನಮೂದಿಸುತ್ತಿದ್ದರು

ಬಾಬೂರಾಯರ ಸೋದರತ್ತೆ; ಅವರನ್ನು ದತ್ತು ತೆಗೆದುಕೊಳ್ಳಬೇಕೆಂದು ಮುಂದಾಗಿದ್ದರಂತೆ. ಆದರೆ ತಾಯಿ ಭಾರತಿಯ ವಾತ್ಸಲ್ಯದ ಕಕ್ಷೆಯಿಂದ ಹೊರಬಾರದ ಉಪಗ್ರಹವಾಗಿದ್ದ ಬಾಬುರಾಯರು ಸಂಘದ ಪ್ರಚಾರಕರಾಗಿ ಹೊರಟುಬಿಟ್ಟರು. ಅವರ ಅಮೃತ ಮಹೋತ್ಸವ ಸಮಾರಂಭದ ಅಧ್ಯಕ್ಷರಾಗಿ ಬಂದ ಪೂಜ್ಯಶ್ರೀ ಸಿದ್ಧ ಶಿವಯೋಗಿಗಳು ತಮ್ಮ ಆಶೀರ್ವಚನದಲ್ಲಿ ಬಾಬೂರಾಯರು ತಮಗೆ ವ್ಯವಹಾರ ಜ್ಞಾನ ಕಲಿಸಿದವರು ಎಂದು ಹೇಳಿದರಂತೆ. ಇದೇ ಬಾಬೂರಾಯರ ಪರಿ. ಎಲ್ಲವನ್ನೂ ಬಿಟ್ಟು ದೇಶಕ್ಕಾಗಿ ಧರ್ಮಕ್ಕಾಗಿ ಹೊರಡಲು ತರುಣರನ್ನು ಪರಿತ್ಯಾಗಿಗಳನ್ನಾಗಿ ನಿರ್ಮಿಸುವುದು! ನಮ್ಮ ನೆಲದ ನಿಜ ವ್ಯವಹಾರವೆಂದರೆ ಇದುವೆ ತಾನೆ! ಯಾದವರಾವ್ ಜೋಶಿ, ಜಗನ್ನಾಥರಾವ್ ಜೋಶಿ, ಭಾವೂರಾವ್ ದೇಶಪಾಂಡೆಯವರಂತಹ ಪ್ರಾತಃಸ್ಮರಣೀಯರಿಂದ ಮಾರ್ಗದರ್ಶನ ಪಡೆದವರು ಮತ್ತಾವ ಅಜ್ಞಾನದಲ್ಲಿ ಸಿಲುಕಲು ಸಾಧ್ಯ?

**ತಾಯಿ ಕರುಳು**

ಬಾಬೂರಾಯರು ಪ್ರವಾಸಕ್ಕೆ ಹೊರಟಾಗಲೆಲ್ಲಾ ಅವರ ಭಾರದ ಆ ದೊಡ್ಡ ಕಿಟ್ ಹಿಡಿದುಕೊಂಡು ಜೊತೆಯ ಕಿರಿಯ ಪ್ರಚಾರಕರು ಬಸ್ ನಿಲ್ದಾಣದವರೆಗೆ ಬಂದು ಬಸ್ಸಿನಲ್ಲಿ ಸೀಟು ಹಿಡಿದು ಕೂರಿಸಿ ಕಾರ್ಯಾಲಯಕ್ಕೆ ಮರಳಿ ಬರುವುದು ವಾಡಿಕೆ. ಕಾರ್ಯಕರ್ತರೇನೋ ಪ್ರೀತಿಯಿಂದ, ಹರ್ಷದಿಂದ ಈ ಕಾಯಕವನ್ನು ಮಾಡುತ್ತಿದ್ದರು. ಆದರೆ ಅಷ್ಟು ದೊಡ್ಡ ಕಿಟ್, ಮತ್ತು ಅದರು ಭಾರ?

ಅಂತಹ ಸಂದರ್ಭಗಳಲ್ಲಿ ಬಾಬೂರಾಯರು ಒಂದು ವಿಶಿಷ್ಟ ಪದ್ಧತಿಯನ್ನು ತಪ್ಪದೇ ಆಚರಿಸುತ್ತಿದ್ದರು. ಬಸ್ ಸ್ಟ್ಯಾಂಡ್ ಬರುವ ಮೊದಲು ಒಳ್ಳೆಯ ಹೊಟೇಲ್ ಒಂದು ಬರುತ್ತಿದ್ದಂತೆ ತಮ್ಮ ಜೊತೆಗಾರನನ್ನು ಅತ್ಯಂತ ಪ್ರೀತಿಯಿಂದ 'ಏನಾರೂ ಒಂಚೂರು ತಿನ್ನೋಣ' ಎಂದು ಹೇಳುತ್ತಿದ್ದರು.

ಸಪ್ಲೆಯರ್ ಬಂದಾಗ 'ಏನಪ್ಪ ಸ್ವೀಟು ಏನಿದೆ?' ಎಂದು ಕೇಳುತ್ತಿದ್ದರು. ಆಮೇಲೆ ಅವರೇ 'ಇಲ್ಲಿ ಬಾಸುಂದಿ ಚೆನ್ನಾಗಿರುತ್ತದಂತೆ ಅದನ್ನೇ ತಾ' ಎಂದು ಆರ್ಡರ್ ಮಾಡುತ್ತಿದ್ದರು. 'ಜೊತೆಗೆ ಮೈಸೂರ್‌ಪಾಕ್ ಇರಲಿ. ನಂತರ ಒಂದು ಚಲೋ ಬೆಣ್ಣೆ ಮಸಾಲೆ ತೊಗೊಂಡು ಬಾ' ಎಂದು ಹೇಳುತ್ತಿದ್ದರು. ಆರ್ಡರ್ ಕೊಡುತ್ತಿದ್ದದು ಒಬ್ಬರಿಗೆ ಮಾತ್ರ. ಮತ್ತು ಸಪ್ಲೈಯರಿಗೂ ಗೊತ್ತಿತ್ತು, ಅದು ಬಾಬೂರಾಯರ ಮುಂದೆ ಕುಳಿತ ತರುಣನಿಗೆ ಎಂದು. ತಿಂಡಿ ಬರುತ್ತಲೇ 'ಬಾಬೂರಾಯರೇ ನಿಮಗೆ?' ಎಂದು ಕೇಳುವ ಉಪಚಾರದ ಮಾತು ಮುಂದಿದ್ದ ತರುಣ ಪ್ರಚಾರಕನ ಪಾಲು. ಆಗ ಬಾಬೂರಾಯರು 'ಇನ್ನು 6–7 ಘಂಟೆ ಪ್ರಯಾಣ. ಹೊಟ್ಟೆಗೆ ಏನೂ ಬೇಡ. ನಿನ್ನೊಟ್ಟಿಗೆ

ಒಳ್ಳೆ ಚಹಾ ಕುಡಿತೀನಿ' ಎನ್ನುತ್ತಿದ್ದರು. ಇನ್ನೇನಾದರೂ ತಿನ್ನುವಿಯೇನು' ಎಂದು ತಪ್ಪದೇ ಕೇಳುತ್ತಿದ್ದರು.

ಮಕ್ಕಳು ತಿಂದು-ಉಂಡು ಸಂತೋಷಪಟ್ಟಾಗ ಸಂತೃಪ್ತಿಯನ್ನು ಅನುಭವಿಸುವ ಅಮ್ಮನಂತೆ ಬಾಬೂರಾಯರು. ಮನೆಯಲ್ಲಿ ಅಮ್ಮನನ್ನು ಬಿಟ್ಟುಬಂದ ತರುಣ ಪ್ರಚಾರಕರ ಮನಸ್ಸನ್ನು ತುಂಬುವ ವಾತಾವರಣವನ್ನು ಬಾಬೂರಾಯರು ಕಲ್ಪಿಸುತ್ತಿದ್ದರು. ಹಾಗಾಗಿ 2 ವರ್ಷ ಎಂದುಕೊಂಡು ಬಂದಿದ್ದ ತರುಣ ಪ್ರಚಾರಕರೊಬ್ಬರು ಹೇಳುವಂತೆ ಬಾಬೂರಾಯರ ವಾತ್ಸಲ್ಯದ ಬಂಧವು ಅವರನ್ನು ಹತ್ತು ವರ್ಷಗಳ ಕಾಲ ಪ್ರಚಾರಕನಾಗಿರುವಂತೆ ಹಿಡಿದಿಟ್ಟುಕೊಂಡಿತು.

**ನೋವು ಮತ್ತು ನಲಿವುಗಳಿಗೆ ಸಮನಾಗಿ ಪ್ರತಿಕ್ರಿಯಿಸದಿದ್ದರೆ ಅದೇನು ಬದುಕು?**

ದೇವರ ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಬಾಬೂರಾಯರ 85ನೇ ವರ್ಷದ ವರ್ಧಂತ್ಯುತ್ಸವ. ವಿಶ್ವ ಹಿಂದು ಪರಿಷತ್ತಿನ ಕಾರ್ಯಕರ್ತರೊಂದಿಗೆ ಅವರ ಆತ್ಮೀಯರೂ ಸೇರಿದ್ದರು. ಎಲ್ಲರಿಗೂ ಅದು ಸಂಭ್ರಮದ ಸಂದರ್ಭ.

ಕಾರ್ಯಕರ್ತರು ಬಾಬೂರಾಯರಿಗೆ ಎಣ್ಣೆಶಾಸ್ತ್ರ ಮಾಡಬೇಕೆಂದು ನಿಶ್ಚಯಿಸಿದರು. ಎಲ್ಲರ ಆಗ್ರಹಕ್ಕೆ ಮಣಿದ ಬಾಬುರಾಯರು ಮಣೆಯ ಮೇಲೆ ಕುಳಿತರು. ಅದೇ ಕೆಲವು ತಿಂಗಳುಗಳ ಹಿಂದೆ ಬಾಬುರಾಯರು ಒಂದು ಬಸ್ ಅಪಘಾತಕ್ಕೆ ಒಳಗಾಗಿದ್ದರು. ನಡೆದುಕೊಂಡು ಬರುತ್ತಿದ್ದ ಅವರ ಹೆಗಲಚೀಲದ ತುದಿಗೆ ಅವರನ್ನು ದಾಟಿ ಹೋಗುತ್ತಿದ್ದ ಬಸ್ಸಿನ ಬಾಗಿಲಿನ ಹಿಡಿಕೆಯೊಂದು ಸಿಲುಕಿ ಅವರನ್ನು ಬಹು ದೂರದವರೆಗೆ ಎಳೆದುಕೊಂಡು ಹೋಗಿದ್ದಿತು.

ಒಂದು ಕಾಲು ಸಂಪೂರ್ಣವಾಗಿ ಜಜ್ಜಿಹೋಯಿತು. ಮಂಡಿಯವರೆಗಿನ ಗಾಯದ ಸೀಳಿನಿಂದಾಗಿ ಅದೊಂದು ಘನಘೋರವಾದ ದೃಶ್ಯವಾಯಿತು. ಸೇರಿದ ಜನರು ಚಾಲಕನನ್ನು ಹಿಡಿದು ಎಳೆದು ತಂದರು. "ನಾನು ಮಕ್ಕಳೊಂದಿಗ. ನನ್ನ ಹೊಟ್ಟೆಯ ಮೇಲೆ ಹೊಡೆಯಬೇಡಿ. ನನ್ನನ್ನು ಮನ್ನಿಸಿ" ಎಂದು ಅಳುತ್ತಿದ್ದ ಚಾಲಕನನ್ನು ಕ್ಷಮಿಸಿದ ಬಾಬೂರಾಯರು, ವಾಹನವನ್ನು ಮುಂದೆ ಹೋಗಲು ಬಿಡುವಂತೆ ಹೇಳಿದರು. ನಂತರ ಕಾಲಿಗೆ ಉದ್ದವಾದ ಹೊಲಿಗೆ ಬಿದ್ದಿತು. ಕಾಲಿನ ಒಂದು ಭಾಗದಲ್ಲಿ ಮಾಂಸದ ಮುದ್ದೆಯೊಂದು ಗಂಟಿನಂತೆ ಉಳಿಯಿತು. ಅದರ ನೋವಿನ ತೀವ್ರತೆಯನ್ನು ಬಾಬುರಾಯರು ಅವಡುಗಚ್ಚಿ ಸಹಿಸಿಕೊಂಡರು. ಬಹಳ ಜನಕ್ಕೆ ಆ ಅಪಘಾತದಿಂದ ಆದ ಅನಾಹುತದ ಬಗ್ಗೆ ಗೊತ್ತೇ ಇರಲಿಲ್ಲ.

ಎಣ್ಣೆ ಹಚ್ಚುವ ಕಾರ್ಯಕರ್ತರೊಬ್ಬರು ಇದ್ಯಾವುದರ ಅರಿವಿಲ್ಲದೆ ಆ ನೋವಿನ ಭಾಗಕ್ಕೆ ಎಣ್ಣೆ ಹಚ್ಚುತ್ತಾ

## ಜ್ಞಾನದ ಗುತ್ತಿಗೆ ಯಾವ ವ್ಯಕ್ತಿಗೂ ಇಲ್ಲ ಗುಂಪಿಗೂ ಇಲ್ಲ:

ಜ್ಞಾನವು ಯಾರ ಗುತ್ತಿಗೆ ಆಸ್ತಿಯಲ್ಲ. ನನಗೆ ತಿಳಿದಿರುವ ಜ್ಞಾನವೂ ನನ್ನ ಮಟ್ಟಿಗೆ ದೊಡ್ಡದಾದರೂ ಜಗತ್ತಿನ ಜ್ಞಾನರಾಶಿಯ ಕಡೆ ನೋಡಿದಾಗ ನನ್ನ ಜ್ಞಾನ ಅಣುವಿನಷ್ಟು ಮಾತ್ರ ಎಂಬ ಅರಿವಾಗುತ್ತದೆ. ಹಾಗಾಗಿ ಎಲ್ಲೆಲ್ಲಿ ವಿಶೇಷತೆ ಕಂಡರೂ ಗೌರವಿಸಿ, ಅದನ್ನರಿಯುವ ಕುತೂಹಲ ಬೆಳೆಯುತ್ತದೆ. ತಿಳಿಯಬೇಕೆಂಬ ಆಸೆಯು ಸುತ್ತಲಿನ ಜನರ ಬಗ್ಗೆ, ಪ್ರಕೃತಿಯ ಬಗ್ಗೆ ಗೌರವ ಬೆಳೆಯುವಂತೆ ಮಾಡುತ್ತದೆ. ಇಂದು ಕಂಡ ಸತ್ಯವೂ ತುಂಬಾ ಸುಂದರವಾಗಿದ್ದರೂ ಮುಂದೆ ಮತ್ತಷ್ಟು ಸುಂದರವಾದ ಸತ್ಯ ಕಾಣಬಹುದು. ಇಂದಿನ ಪ್ರವಾದಿಗಳು ತುಂಬ ಶ್ರೇಷ್ಠರೇ ಆದರೂ ಅವರೇ ಕೊನೆಯವರಲ್ಲ. ಇನ್ನೂ ಶ್ರೇಷ್ಠರು ಬರಬಹುದು, ಬರುತ್ತಾರೆ ಎಂಬ ವ್ಯಾವಹಾರಿಕ ಸತ್ಯದ ಅನುಭವವೂ ಆಗುತ್ತದೆ. ಹಾಗಾಗಿ ನಮ್ಮ ವಿಚಾರವೇ ಸರಿ, ನಾವು ತಿಳಿದಿರುವುದೇ ಸತ್ಯ ಎಂಬ ಪಾಖಂಡಿತನ ಹೋಗಿ, ಅನ್ಯರ ವಿಚಾರದಲ್ಲೂ ಸತ್ಯ ಇರಬಹುದೆಂಬ ಉದಾರಭಾವ ಬೆಳೆಯಲವಕಾಶ ನೀಡಿದೆ.

ಹೀಗೆ ಬೌದ್ಧಿಕ ಮಟ್ಟದಲ್ಲಿ, ನಂಬಿಕೆಯ ಮಟ್ಟದಲ್ಲಿ ಇಲ್ಲಿನ ವರೆಗೆ ಯಾವ ಜನಾಂಗವೂ ಯಾವ ವಿಚಾರವೂ ಸಾಧಿಸದ ಔನ್ನತ್ಯವನ್ನು ಹಿಂದೂಧರ್ಮ ಸಾಧಿಸಿದೆ. ಅದಕ್ಕಾಗಿಯೇ ಯಾವ ವಿವರಣೆಯ ಕಟ್ಟುಪಾಡಿಗೂ ಸಿಗದಷ್ಟು ವಿಸ್ತಾರವಾಗಿ ಬೆಳೆದಿದೆ, ಬೆಳೆಯುತ್ತದೆ. ಎಲ್ಲ ವಿವರಣೆಗಳನ್ನು ಒಪ್ಪಿಯೂ ಅದನ್ನು ಮೀರಿ ನಿಂತ ಜಗತ್ತಿನ ಅಚ್ಚರಿಯಾಗಿದೆ ಹಿಂದು ಧರ್ಮ.

ಜೋರಾಗಿ ತಿಕ್ಕಿದರು. ನೋವಿನ ಬಾಧೆಯನ್ನು ತಾಳದೆ ಬಾಬುರಾಯರು ವಿಲವಿಲನೆ ಒದ್ದಾಡಿದರು. ಅರಿವಿಲ್ಲದೆ ಕಣ್ಣಲ್ಲಿ ನೀರು ತುಂಬಿತು. ಕೂಡಲೇ ಎಲ್ಲರೂ ಎಣ್ಣೆ ತಿಕ್ಕುವುದನ್ನು ನಿಲ್ಲಿಸುವಂತೆ ಹೇಳಿದರು. ಎಣ್ಣೆ ಹಚ್ಚಿದವರು ಬಾಬುರಾಯರಿಗಿಂತ ಹೆಚ್ಚು ಕಣ್ಣೀರಿಟ್ಟರು.

ಅದು ಸ್ವಲ್ಪ ಹೊತ್ತು ಅಷ್ಟೆ. ಬಾಬುರಾಯರು ಸುಧಾರಿಸಿಕೊಂಡರು. ಸ್ನಾನ ಮುಗಿಸಿ ಪೂಜಾ ಕಾರ್ಯದಲ್ಲಿ ತೊಡಗಿಕೊಂಡರು ಆದರೆ ಅವರು ಕುಳಿತಾಗ, ಏಳುವಾಗ, ನಡೆದಾಡುವಾಗ ಪಡುವ ನೋವನ್ನು ಕಂಡು ಎಲ್ಲರೂ ಒದ್ದಾಡಿದವರೆ. ಪೂಜೆ ಮುಗಿದ ಮೇಲೆ ಎಲ್ಲರೂ ನಡೆದ ಪ್ರಮಾದದ ಬಗ್ಗೆ ಮತ್ತೆ ಕ್ಷಮೆ ಕೇಳಲು ಪಾರಂಭಿಸಿದರು.

ಅದಕ್ಕೆ ಬಾಬೂರಾಯರು "ಎಣ್ಣೆ ಸ್ನಾನಕ್ಕೆ ಒಪ್ಪಿ ಅದರ ಸುಖಾನುಭವವನ್ನು ಪಡೆಯಲು ಸಿದ್ಧನಾದವನು ನಾನು. ಆ ನಡುವೆ ಅಚಾತುರ್ಯದಿಂದ ಬಂದ ನೋವು ಬೇಡವೆಂದರೆ ಹೇಗೆ? ನೋವು ನಲಿವುಗಳಿಗೆ ಸಮಾನವಾಗಿ ಪ್ರತಿಕ್ರಿಯಿಸದಿದ್ದರೆ ಇಷ್ಟು ವರ್ಷದ ಬದುಕನ್ನು ಕಂಡು ಉಂಡದ್ದು ಏನು ಉಪಯೋಗ? ಅದರಲ್ಲೂ ಅಪಘಾತದ ಆ ನೋವಿನ ಮುಂದೆ ಇದೇನು ಮಹಾ" ಎಂದರು.

**ಅಸಾಮಾನ್ಯ ವಿನಯ**

ತಮ್ಮನ್ನು ಹಾಸ್ಯದ ವಸ್ತುವನ್ನಾಗಿಸುವುದು ಮಹಾತ್ಮರ ಲಕ್ಷಣ. ಅವರನ್ನು ಪರಿಚಯಿಸುತ್ತಾ ಒಬ್ಬ ಹಿರಿಯರು "ಬಾಬೂರಾಯರು ಸಂಘ ಪ್ರಾರಂಭವಾದ ವರ್ಷದಲ್ಲಿ ಹುಟ್ಟಿದರು. ಸಂಘವು ಬೆಳೆದು ದೇಶಕ್ಕೆ ಮಾರ್ಗದರ್ಶನ ಮಾಡಿತು. ಬಾಬೂರಾಯರು ಬೆಳೆದು ಸಮಾಜಕ್ಕೆ ಮಾರ್ಗದರ್ಶಕರಾದರು" ಎಂದರು. ಅದಕ್ಕೆ ಉತ್ತರವಾಗಿ ಬಾಬೂರಾಯರು ಮಾತನಾಡುತ್ತಾ "ಹೌದು ಹೌದು! ಶ್ರೀರಾಮ ಹುಟ್ಟಿದ ವರ್ಷ ನೂರಾರು ಮಂಗಗಳು ಹುಟ್ಟಿದವು. ಆದರೆ, ಶ್ರೀರಾಮ ಶ್ರೀರಾಮನೇ. ಮಂಗ ಮಂಗನೇ" ಎನ್ನುತ್ತಾ "ಸಂಘವು ನನ್ನಂತಹ ಮಂಗನಿಗೂ ಸಮಾಜ ಸೇವೆಗೆ ಅವಕಾಶ ಮಾಡಿಕೊಟ್ಟಿತು "ಎನ್ನುವ ಅಸಾಮಾನ್ಯ ವಿನಯವನ್ನು ತೋರಿದರು. ತನ್ನನ್ನೂ ಆರೋಗ್ಯಕರ ಹಾಸ್ಯದ ವಸ್ತುವನ್ನಾಗಿಸುವುದು ಹಿರಿಯ ವ್ಯಕ್ತಿತ್ವದ ದೊಡ್ಡ ಗುಣ.

ಬಾಬೂರಾಯರ ಷಷ್ಟ್ಯಬ್ದಿಯ ಸಮಾರಂಭವೊಂದರಲ್ಲಿ ಶ್ರದ್ಧೇಯ ಹೊ.ವೆ. ಶೇಷಾದ್ರಿಯವರು ಉಪಸ್ಥಿತ–ರಿದ್ದರು. ಶೇಷಾದ್ರಿಯವರ ಮಾತುಗಳ ನಂತರ ಬಾಬೂರಾಯರು ಮಾತನಾಡಿದರು. ತಮ್ಮ 60 ವರ್ಷಗಳ ಜೀವನವನ್ನು ಅಲ್ಲೇ ಇದ್ದ ಹಳೆಯ ಮೇ–ಜಿಗೆ ಹೋಲಿಸುತ್ತಾ "ಬರೆಯಲು, ಓದಲು, ಭಾರದ ವಸ್ತುವನ್ನು ಇಡಲು, ಎತ್ತರಕ್ಕಾಗಿ ಅದರ ಮೇಲೆ ನಿಲ್ಲಲು ಕೂಡಾ ಮೇಜು ಉಪಯೋಗವಾಗುತ್ತದೆ. ಇವತ್ತೇನೋ ಈ ಕಾರ್ಯಕ್ರಮಕ್ಕಾಗಿ ಹೊಸ ಟೇಬಲ್‌ಕ್ಲಾತನ್ನು ತಂದಿದೆ. ಅದನ್ನು ಹರಡಿ ಮೇಜಿನ ಬಿರುಕು, ಚಹಾ ಬಿದ್ದ ಕಲೆಗಳನ್ನು ಮರೆ ಮಾಡಲಾಗಿದೆ. ನೀವೆಲ್ಲ ಸೇರಿ ಇವತ್ತು ನನ್ನನ್ನು ಹೊಗಳಿದ್ದೀರಿ. ಆದರೆ ಅದೆಲ್ಲವೂ ಮೇಜಿನ ಮೇಲಿನ ಕಲೆ, ಬಿರುಕುಗಳನ್ನು ಮುಚ್ಚಲು ತಂದ ಟೇಬಲ್‌ಕ್ಲಾತ್‌ನಂತೆ, ನಾನು ಮೇಜಿನಂತೆ " ಎಂದರು.

**ಅನುಪಮ ಸ್ನೇಹ ಗೌರವ**

'ಸದಾನಂದ ಕಾಕಡೆಯವರು ನನ್ನ ಗುರುಗಳು. ಅವರು ನನ್ನ ಮೇಲೆ ಪ್ರೀತಿಯನ್ನು ತೋರಿಸಿದ್ದಾರೆ. ಸಿಟ್ಟಿನಿಂದ ಬೈದೂ ಇದ್ದಾರೆ. ಆದರೆ ಅವರ ಬೈಗುಳ ಕೂಡಾ ನನಗೆ ವರವಾಗಿ ಪರಿಣಮಿಸಿದೆ' ಇದು ಬಾಬುರಾಯರು ಸದಾನಂದ ಕಾಕಡೆಯವರ ಬಗ್ಗೆ ಹೇಳಿದ ಮಾತು. ಅದನ್ನು ಸಮರ್ಥಿಸುವಂತಹ ಕತೆಯೊಂದು ಅವರಲ್ಲಿ ಸಿದ್ಧವಾಗಿರುತ್ತಿತ್ತು.

ಮುಂಬಯಿಯ ಶ್ರೀಮಂತನೊಬ್ಬನಿಗೆ ಓ.ಸಿ. (*) ಸಟ್ಟಾ ವ್ಯಾಪಾರದಲ್ಲಿ ಪಾಲುಗೊಂಡು ಇನ್ನೂ ಶ್ರೀಮಂತನಾಗಬಹುದು ಎನ್ನುವ ಹುಚ್ಚು ಇದ್ದಿತು.

ಅವನ ಗುರುಗಳಿಗೆ ಶಿಷ್ಯನ ಈ ಲಾಟರಿ ಹುಚ್ಚು ತಿಳಿಯಿತು. ಪ್ರತಿ ಬಾರಿ ಅವನು ಭೇಟಿಯಾದಾಗಲೆಲ್ಲ ಗುರುಗಳು ಈ ಸಟ್ಟಾದ ಹುಚ್ಚು ಬಿಡುವಂತೆ ಹೇಳುತ್ತಲೇ ಇದ್ದರು. ಆದರೂ ಅವನು ತನ್ನ ಚಾಳಿಯನ್ನು ಬಿಡಲಿಲ್ಲ. ಒಂದು ಸಾರಿ ಅವನು ತಾನು ಊಹಿಸಿದ ಸಂಖ್ಯೆಗೆ ತನ್ನಲ್ಲಿರುವ ಎಲ್ಲಾ ಹಣವನ್ನು ಕಟ್ಟಿಬಿಟ್ಟನು. ಆದರೆ ಆ ದಿನ ಘೋಷಣೆಯಾದ ಗೆಲುವಿನ ಸಂಖ್ಯೆ ಬೇರೆಯೇ ಆಗಿದ್ದಿತು.

ಎಲ್ಲವನ್ನೂ ಕಳೆದುಕೊಂಡು ಭಿಕಾರಿಯಾದ ಆ ಭಕ್ತನು ಗುರುಗಳ ಬಳಿ ಬಂದು ಗೋಳೋ ಎಂದು ಅಳಹತ್ತಿದನು. ಗುರುಗಳು ಅವನ ಪಾಡನ್ನು ಕಾಣಲಾರದೆ

*ಓ.ಸಿ. (*)ಓಪನಿಂಗ್ ಕ್ಲೋಸಿಂಗ್. ಹಿಂದೆ ನ್ಯೂಯಾರ್ಕಿನಲ್ಲಿ ನಡೆಯುವ ಅರಳೆ (ಹತ್ತಿ) ಪೇಟೆಯಲ್ಲಿ ದಿನದ ಮೊದಲಿನ ಧಾರಣೆ ಹಾಗೂ ಮುಕ್ತಾಯದ ಧಾರಣೆ. ಈ ಸಂಖ್ಯೆಗೆ ಹಣ ಕಟ್ಟಿದವನು ಊಹಿಸಿದ ಸಂಖ್ಯೆಯೇ ಆ ದಿನದ ಧಾರಣೆಯಾಗಿದ್ದರೆ ಅವನಿಗೆ ಕಟ್ಟಿದ ಹಣದ ನೂರುಪಾಲು ಹಣ ಸಿಗುತ್ತದೆ.*

ಆ ನಡುವೆ ತನ್ನ ಸಿಟ್ಟನ್ನೂ ತಡೆಯಲಾರದೆ ಅವನ ಬೆನ್ನಿಗೆ ಎರಡು ಬಲವಾದ ಏಟುಗಳನ್ನು ಕೊಟ್ಟರು.

ಬೆನ್ನನ್ನು ತಡವಿಕೊಂಡು ಹೊರಗೆ ಬಂದವನೇ ತನ್ನ ಬೆರಳಲ್ಲಿದ್ದ ಉಂಗುರವನ್ನು ಮಾರಿ ಬಂದ ಹಣವನ್ನೆಲ್ಲಾ ಗುರುಗಳು ಕೊಟ್ಟ ಏಟಿನ ಸಂಖ್ಯೆ 2 ಕ್ಕೆ ಓ.ಸಿ. ಕಟ್ಟಿಬಿಟ್ಟನು. ಅವನ ಅದೃಷ್ಟ ! ಆ ಸಂಖ್ಯೆಯೇ ಆ ದಿನದ ಗೆಲುವಿನ ಸಂಖ್ಯೆಯಾಗಿದ್ದಿತು. ಮತ್ತೆ ಅವನು ಶ್ರೀಮಂತನಾಗಿಬಿಟ್ಟನು.

"ಹಾಗೆಯೇ ಸದಾನಂದಜಿ ನನಗೆ ಬೈದರೂ ಕೂಡ ಅವೆಲ್ಲವೂ ನನಗೆ ವರವಾಗಿ ಬಿಟ್ಟಿವೆ" ಎನ್ನುತ್ತಾರೆ ಬಾಬೂರಾಯರು. ಇಂತಹ ಪ್ರಪತ್ತೀ ಭಾವವೇ ಕಠೋರ ಅನುಶಾಸನದ ಸಾಕಾರಮೂರ್ತಿಯಾಗಿದ್ದ ಸದಾನಂದ–ಜಿಯವರ ಹಾಗೂ ಸರಸವಿನೋದೀ ಮಾತೃಸ್ವಭಾವದ ಬಾಬೂರಾಯರ ನಡುವೆ ಅದ್ಭುತ ಗುರುಶಿಷ್ಯ ಸಂಬಂಧವನ್ನು ಬೆಳೆಸಿತು.

ಅವರಿಬ್ಬರ ನಡುವಣ ಆತ್ಮೀಯತೆಯ ಬಗ್ಗೆ ಮಾನ್ಯ. ನ. ಕೃಷ್ಣಪ್ಪನವರು ಉಲ್ಲೇಖಿಸಿದ್ದಾರೆ. "ಸದಾನಂದ–ಜಿಯವರ ಕೊನೆಯ ದಿನಗಳಲ್ಲಿ ಅವರೊಡನೆಯೇ ಇದ್ದು ಅವರ ನೆರಳಾಗಿ ಸೇವೆ ಸಲ್ಲಿಸಿದವರು ಬಾಬೂರಾವ್ ದೇಸಾಯಿ. 90 ವರ್ಷದ ವೃದ್ಧನಿಗೆ 85 ವರ್ಷದ ತರುಣನ ಸೇವೆ ! ಬಾಬೂರಾಯರಿಗೆ ಸದಾನಂದ–ಜಿಯವರ ಬಗೆಗಿದ್ದ ಶ್ರದ್ಧೆ ಅಂತಹುದು. ದಿನಗಳಲ್ಲ, ತಿಂಗಳಲ್ಲ, ಅನೇಕ ವರ್ಷಗಳ ಕಾಲ ಅವರೊಡನೆಯೇ ಇದ್ದು ಅವರ ಶರೀರ ಮನಗಳಿಗೆ ಸಾಂತ್ವನ ನೀಡಿದರು. ಆ ಸ್ನೇಹ ಅನುಪಮ. ಅದ್ವಿತೀಯ. ಎಲ್ಲರಿಗೂ ಅಂತಹ ಸ್ನೇಹ, ಸ್ನೇಹಿತರು ಸಿಗಬೇಕು ಎಂಬ ಆಸೆಯಿರುತ್ತದೆ. ಆದರೆ ಸದಾನಂದಜಿ ಅದನ್ನು ಗಳಿಸಿದರು. ಅವರ ಬಾಳು ಧನ್ಯ" ಎಂದಿದ್ದರು ಮಾನ್ಯ ಕೃಷ್ಣಪ್ಪನವರು.

**ಸುಖ ಮತ್ತು ರುಚಿಯ ವ್ಯಾಖ್ಯೆ**

ಒಂದು ದಿನ 'ನಿದ್ರೆಯ ಸುಖವನ್ನು ತ್ಯಜಿಸಬೇಕು' ಎಂದು ಬಾಬೂರಾಯರಿಗೆ ಅನಿಸಿತು. ನಿದ್ದೆಯನ್ನು ಹಂತ ಹಂತವಾಗಿ ಕಡಿಮೆಗೊಳಿಸಲು ಯಾವ ಪ್ರಯೋಗ ಸೂಕ್ತ ಎನ್ನುವುದನ್ನು ನಿರ್ಧರಿಸಿಬಿಟ್ಟರು. ಮೊದಲದಿನ 10 ಗಂಟೆಗೆ ಮರುದಿನ 11 ಗಂಟೆ, ನಂತರದ ದಿನ 12 ಗಂಟೆಗೆ ಮಲಗುವ ದಿನಚರಿಯನ್ನು ರೂಪಿಸಿಕೊಂಡರು. ಏಳುವುದು ಮಾತ್ರ ಎಂದಿನಂತೆ 5 ಗಂಟೆಗೆ. ಹಾಗೆಯೇ 10 ಗಂಟೆಗೆ ಮಲಗಿ ಮೊದಲದಿನ 4 ಗಂಟೆಗೆ, ಮರುದಿನ 3 ಗಂಟೆಗೆ ಏಳುವ ಪ್ರಯೋಗವನ್ನು ಮಾಡಿಕೊಂಡರು.

ಕೊನೆಗೆ ಅವರಿಗೆ ಅನಿಸಿದ್ದು 10 ಗಂಟೆಗೆ ಮಲಗಿ 3 ಗಂಟೆಗೆ ಏಳುವುದು ಸರಿಯಾದ ರೀತಿ. 5 ಗಂಟೆಗಳ ನಿದ್ದೆ ಯಥೇಷ್ಟ ಎಂಬುದನ್ನು ಕಂಡುಕೊಂಡರು. ಬ್ರಾಹ್ಮೀ ಮುಹೂರ್ತದ ಆ ಸಮಯವನ್ನು ಅಧ್ಯಯನ ಮತ್ತು ಪತ್ರ ಬರೆಯಲೆಂದು ಮೀಸಲಿಟ್ಟರು.

ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಚಲಿತವಿರುವ ಅತಿ ಖಾರದ ಆಹಾರ ಸೇವನೆಯನ್ನು ರೂಢಿಸಿಕೊಳ್ಳಲು ಮೊದಮೊದಲು ಅವರಿಗೆ ಕಷ್ಟವೆನಿಸಿದುದು ಸಹಜವೆ. ತಮ್ಮ ಬಾಯಿ ರುಚಿಯನ್ನು ಬದಲಿಸಲು ಬಾಬೂರಾಯರು ಹೊಸ ಪ್ರಯೋಗವನ್ನು ಕೈಗೊಂಡರು. ದಿನದಲ್ಲೊಂದು ಹಸಿಮೆಣಸಿನಕಾಯಿಯನ್ನು ನೇರವಾಗಿ ಕಚ್ಚಿ ತಿಂದು ನಾಲಿಗೆಯನ್ನು ಪಳಗಿಸಿಕೊಂಡರು. ಅಷ್ಟೇಕೆ ಶರೀರವನ್ನು ದಂಡಿಸುತ್ತಿದ್ದೀರಿ? ಎಂದು ಕೇಳಿದರೆ, "ಶರೀರ ದಂಡನೆಯಲ್ಲ ಅದು ಶರೀರವನ್ನು ತಿದ್ದುವ ರೀತಿ. ಅಷ್ಟಾಗಿಯೂ ಮೆಣಸಿನ ಕಾಯಿಯಿಂದ ಜೀರ್ಣ ಶಕ್ತಿಯು ಉತ್ತೇಜನಗೊಂಡು ಪ್ರಾತರ್ವಿಧಿಯೂ ಸರಾಗವಾಗುತ್ತದೆ" ಎಂಬ ಹೊಸ ಅನ್ವೇಷಣೆಯನ್ನೂ ಪ್ರಕಟಿಸಿದರು.

ಬಾಬೂರಾಯರನ್ನು ನಾವು ಬಹಳ ಗೌರವದಿಂದ ಪ್ರೀತಿಸುತ್ತೇವೆ. ಆದುದರಿಂದ ಸಲಿಗೆಯಿಂದ ಅವರ ಕುರಿತು ಹೀಗೆಲ್ಲಾ ಬರೆಯುವ ಧೈರ್ಯವಹಿಸಿದೆವು. ಒಂದೊಮ್ಮೆ ಒಬ್ಬ ಬಾಲ ಸ್ವಯಂಸೇವಕನು ಪೂಜ್ಯ ಗುರೂಜಿಯವರು ಕಾರಿನಿಂದ ಇಳಿದು ಬರುತ್ತಿದ್ದಾಗ ಬಾಲಭಾಷೆಯಲ್ಲಿ, ಏಕವಚನದಲ್ಲಿ ಕೇಳಿದನಂತೆ "ಗುರೂಜಿ, ಇದು ನಿನ್ನ ಕಾರಾ' ಎಂದು! ಇಂತಹ ಮುಗ್ಧ ಸಲಿಗೆ ನಮ್ಮದು.

ಬಾಬೂರಾಯರ ಸಾಧಕ ಜೀವನವೀಗ ನೂರರ ಸಂಭ್ರಮವನ್ನು ಮುಟ್ಟಲಿದೆ. ಅವರಂತಹ ಹಿರಿಯರ ಬಹುಕಾಲದ ಸಾಧನೆಯ ದಾರಿ ನಮಗೆ ಸ್ಫೂರ್ತಿ. ಅವರ ವಾತ್ಸಲ್ಯದ ತಂಪು, ನೆರಳು ನಮಗೆ ಬೇಕು. ನಮಗೆ ಶ್ರೀ ರಘುನಾಥ ನಾರಾಯಣ ಪ್ರಭು ದೇಸಾಯಿಯವರು ಗೊತ್ತಿಲ್ಲ. ನಮಗೆ ಗೊತ್ತಿರುವವರು ನಮ್ಮ ಪ್ರಿಯ ಬಾಬುರಾವ್ ದೇಸಾಯಿಯವರು ಎಂದುದು ಇದಕ್ಕೇ !

ಸಾರ್ಥಕ 60 ಸಂಚಿಕೆಯು ಹಲವು ಆಕರಗಳಿಂದ ಆರಿಸಿದ ಲೇಖನ ಭಾಗಗಳಿಂದ ಕೂಡಿದೆ. ಪೂಜ್ಯರಾದ ಶ್ರೀ ಗುರೂಜಿ, ಬಾಳಾಸಾಹೇಬ್ ದೇವರಸ್, ಹೊ. ವೆ. ಶೇಷಾದ್ರಿಯವರ ಭಾಷಣಗಳು ಮತ್ತು ಬಹುಶ್ರುತರಾದ ನ. ಕೃಷ್ಣಪ್ಪ, ಚಂದ್ರಶೇಖರ ಭಂಡಾರಿ, ವಾದಿರಾಜ ಪಂಚಮುಖಿಯವರ ಲೇಖನಗಳಿಗೆ ಆಭಾರಿಗಳು.


ವಿಕ್ರಮ 50 ವರ್ಷಗಳ ಹಿಂದೆ

26-10-1967

# ಹಿಂದುಗಳಾಗಿ ಬಾಳದಿದ್ದರೆ ಸರ್ವನಾಶವಾದೀತು! ಶಿವಕುಮಾರ ಸ್ವಾಮೀಜಿ

**ಬೆಂಗಳೂರು :** 'ವಿಶ್ವದ ಮಾನವ ಕುಲದ ಕಲ್ಯಾಣಕ್ಕಾಗಿ ಹಿಂದೂ ಧರ್ಮದ ರಕ್ಷಣೆಯಾಗಿ ಅದು ಪ್ರವರ್ಧಿಸಬೇಕು. ಇಲ್ಲದಿದ್ದರೆ ಮಾನವ ಕುಲದ ಪತನ ಮತ್ತು ಸರ್ವನಾಶ ನಿಶ್ಚಿತ' ಎಂದು ಸಿದ್ಧಗಂಗಾ ಮಠಾಧೀಶರಾದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ವಿಶ್ವ ಹಿಂದೂ ಪರಿಷತ್ತಿನ ರಾಜ್ಯ ಸಮಿತಿಯನ್ನು ಉದ್ಘಾಟಿಸುತ್ತ ಹಿಂದುಗಳಿಗೆ ತೀವ್ರ ಎಚ್ಚರಿಕೆ ನೀಡಿದರು.

ದಿ. 22 ರಂದು ಭಾನುವಾರ ಮೈಸೂರು ವಾಣಿಜ್ಯ ಸಂಘದ ಭವನದಲ್ಲಿ ನಡೆದ ಈ ಸಮಾರಂಭದಲ್ಲಿ ಮಾತನಾಡುತ್ತಿದ್ದ ಶ್ರೀಗಳವರು ಯೋಗಿ ಅರವಿಂದರ ವಾಣಿಯನ್ನು ಉಲ್ಲೇಖಿಸುತ್ತ 'ಭಾರತದ ಸ್ವಾತಂತ್ರ್ಯ, ಕೇವಲ ಭಾರತಕ್ಕೇ ಅಲ್ಲ, ಇಡೀ ವಿಶ್ವಕ್ಕೆ ಅತಿ ಮಹತ್ವದ ಸಂಗತಿಯಾಗಿದೆ. ಮಾನವನ ಧಾರ್ಮಿಕ, ಆಧ್ಯಾತ್ಮಿಕ, ಆರ್ಥಿಕ, ರಾಜಕೀಯ, ಭವಿಷ್ಯವನ್ನು ರೂಪಿಸುವುದರಲ್ಲಿ ಸ್ವತಂತ್ರ ಭಾರತ ಅತಿ ಮಹತ್ವದ ಪಾತ್ರವನ್ನು ನಿರ್ವಹಿಸಲಿದೆ' ಎಂದು ಹೇಳಿ ಭಾರತದಲ್ಲಿರುವ ಹಿಂದುಗಳಲ್ಲಿ ಹಿಂದುತ್ವದ ಅಭಿಮಾನವನ್ನು ಜಾಗೃತಗೊಳಿಸಿ, ಅವರನ್ನು ಸಂಘಟಿಸುವುದರ ಜೊತೆಗೆ ವಿಶ್ವದಾದ್ಯಂತ ಹರಡಿರುವ ಹಿಂದುಗಳಿಗೆ ಸ್ಫೂರ್ತಿ, ಚೈತನ್ಯ ನೀಡುವ ಕಾರ್ಯ ಆದಾಗಲೇ ಅರವಿಂದರ ಭವಿಷ್ಯವು ಸತ್ಯವಾಗಲಿದೆ ಎಂದರು. 'ಅಂತಹ ಮಹತ್ವದ ಕಾರ್ಯವನ್ನು ವಿಶ್ವ ಹಿಂದೂ ಪರಿಷದ್ ಆರಂಭಿಸುತ್ತಿರುವುದನ್ನು ತುಂಬು ಹೃದಯದಿಂದ ಸ್ವಾಗತಿಸುವ ಮಂಗಳಕರವಾದ, ಪವಿತ್ರ ಮುಹೂರ್ತವಿದು' ಎಂದು ಶ್ರೀಗಳು ಅಪ್ಪಣೆ ಕೊಡಿಸಿದರು.



ವಿಶ್ವ ಹಿಂದೂ ಪರಿಷತ್ತಿನ ರಾಜ್ಯಸಮಿತಿಯ ಉದ್ಘಾಟನಾ ಸಮಾರಂಭ. ಎಡದಿಂದ ಬಲಕ್ಕೆ: ಡಾ. ಎಂ. ಎ. ನರಸಿಂಹಾಚಾರ್, ಶ್ರೀ ಎ. ಜಿ. ರಾಮಚಂದ್ರರಾವ್, ಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳು, ಶ್ರೀ ಕೆ. ಎಸ್. ಧರಣೇಂದ್ರಯ್ಯ, ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ.

## ಹೊಸಯುಗದ ಆರಂಭ

ಭಾರತದಲ್ಲಿ ಕಂಡುಬರುವ ಆರ್ಥಿಕ ದಾರಿದ್ರ್ಯಕ್ಕೆ ಹಿಂದುತ್ವದ ಅಭಿಮಾನ ತಾಳದೆ ಧಾರ್ಮಿಕ ಜೀವನದಿಂದ ದೂರವಾಗಿರುವುದೇ ಕಾರಣವೆಂದು ಹೇಳಿದ ಅವರು 'ವಿಶ್ವದಲ್ಲಿ ಎಲ್ಲಿಯವರೆಗೆ ನಮ್ಮ ಜನರು ಹಿಂದೂ ಧರ್ಮವನ್ನು ಅರಿತು ನಿಜವಾದ ಹಿಂದುಗಳಾಗಿ ಭಾಳುವ ಭಾಗ್ಯವನ್ನು ಹೊಂದಿದ್ದರೋ, ಅಲ್ಲಿವರೆಗೆ ಸುಖ, ಸಮೃದ್ಧಿ, ಆನಂದ ಇವೆಲ್ಲವೂ ಇಲ್ಲಿ ನಲಿದುವು. ಧರ್ಮದ ತಿರಸ್ಕಾರ ಆರಂಭವಾದಂದಿನಿಂದ ಜೀವನ

**ವಿಶ್ವಹಿಂದೂ ಪರಿಷತ್ತಿನ ರಾಜ್ಯ ಸಮಿತಿಯ ಉದ್ಘಾಟನಾ ಸಮಾರಂಭದಲ್ಲಿ ಪೂಜ್ಯ ಶ್ರೀ ಸಿದ್ಧಗಂಗಾ ಮಠಾಧೀಶರ ಎಚ್ಚರಿಕೆ**

ಶಿಥಿಲಗೊಂಡು ನಮ್ಮ ಪತನದ ಆರಂಭವಾಗಿ ದುಃಖ, ದಾರಿದ್ರ್ಯಗಳೂ ಬೆಳೆದುವು. ಪುನಃ ಧರ್ಮದ ಅವಲಂಬನೆ ಮಾಡಿದಾಗಲೇ ಸುಖ, ಸಮೃದ್ಧಿಗಳು ಲಭಿಸಬಲ್ಲುವು. 'ಯಥೋಭ್ಯುದಯ ನಿಶ್ರೇಯಸ್ ಸಿದ್ಧಿಃ' ಎಂದು ನಮ್ಮ ಪೂರ್ವಜರು ಧರ್ಮದ ಬಗ್ಗೆ ಹೇಳಿದ್ದು ವಿಶ್ವ ಹಿಂದೂ ಪರಿಷತ್ತಿನ ಮೂಲಕ ಅಂತಹ ಸ್ಥಿತಿಯನ್ನು ಸಾಧಿಸುವ ಹೊಸ ಯುಗದ ಆರಂಭದ ದಿನ ಇದಾಗಿದೆ' ಎಂದರು.

## ಎಚ್ಚರಿಕೆ

ಹಿಂದೂಧರ್ಮದ ರಕ್ಷಣೆಗೆ ಆಧಾರಭೂಮಿಯಾಗಿರುವ ಏಕೈಕ ರಾಷ್ಟ್ರವೆಂದರೆ ಹಿಂದೂರಾಷ್ಟ್ರ ಮಾತ್ರ ಎಂದು ಹೇಳಿದ ಶ್ರೀಗಳವರು. 'ಮುಸ್ಲಿಂ ಮತಕ್ಕೆ ಪೋಷಣೆ ನೀಡುವ ರಾಷ್ಟ್ರಗಳು ಜಗತ್ತಿನಲ್ಲಿ ಹಲವಾರು ಇವೆ. ಅದೇ ರೀತಿ ಕ್ರೈಸ್ತಮತಕ್ಕೂ ಬೆಂಬಲ ನೀಡುವ ರಾಷ್ಟ್ರಗಳು ಇವೆ. ಆದರೆ ಹಿಂದೂಧರ್ಮಕ್ಕೆ ಇಂದು ಇರುವ ಆಧಾರಭೂತ ರಾಷ್ಟ್ರವೆಂದರೆ ಭಾರತ ಮಾತ್ರ. ಇದೊಂದು ವಾಸ್ತವಿಕ ಸತ್ಯ. ಈ ಬಗ್ಗೆ ಎಲ್ಲ ಹಿಂದುಗಳೂ ಕಣ್ತೆರೆದು ಯೋಚಿಸಬೇಕು. ಇಲ್ಲೇ ಹಿಂದುತ್ವದ ಅಭಿಮಾನವು ಅಳಿದರೆ ಹಿಂದುಗಳು ವಿಶ್ವದಿಂದಲೇ ಅಳಿದುಹೋದಂತೆ ಎಂಬುದನ್ನು ತಿಳಿದು ಈಗಲಾದರೂ ಎಚ್ಚರಗೊಳ್ಳಬೇಕು' ಎಂದು ಕರೆ ಕೊಟ್ಟು ವಿಶ್ವ ಹಿಂದೂ ಪರಿಷತ್ತಿಗೆ ಎಲ್ಲರೂ ಸರ್ವವಿಧ ಸಹಾಯ ನೀಡಿ ಅದನ್ನು ಬಲಪಡಿಸಬೇಕೆಂದು ಅಪ್ಪಣೆ ಕೊಡಿಸಿದರು.

Regd. No. RNP/KA/BGS/636/2024-2026
Post at Bengaluru PSO 560 026 on 06/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 52
RNI No. KARKAN/2002/08081
Date of Publication 01-08-2024




ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

# ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8&8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy